ಅಮ್ಮೆಂಬಳ ಶಂಕರ ನಾರಾಯಣ ನಾವಡ
೨೨-೨-೩೦.

ಇದು ಜೀವನ

ಎಲ್. ಎಸ್. ಶೇಷಗಿರಿರಾವ್

ವಸಂತ ಮಾಲಿಕೆ
ವಸಂತ ಪ್ರೇಮಿ ಮಂಡಲಿ, ಮಂಗ...

ಸಾಹಿತ್ಯಕ್ಕೆ ಸಲಹೆಗಾರರು
ಶ್ರೀ| ಮುಳಿಯ ತಿಮ್ಮಪ್ಪಯ್ಯನವರು
ಶ್ರೀ| ಕಡೆಂಗೋಡ್ಲು ಶಂಕರಭಟ್ಟರು
ಶ್ರೀ| ಸೇಡಿಯಾಪು ಕೃಷ್ಣ ಭಟ್ಟರು

ಮಾಲಿಕೆಯ ಸಂಚಾಲಕರು
ವಸಂತ ಪ್ರೇಮಿ ಮಂಡಲಿ, ಮಂಗಳೂರು
ಅಧ್ಯಕ್ಷೆಯರು- ಕೆ. ರಾಧಾ ಎಲ್. ರಾವ್
ಕಾರ್ಯದರ್ಶಿ- ಎಂ. ವಾರಿಜಾಬಾಯಿ

ಮಾಲಿಕೆಯ ಸಲಹೆಗಾರರು
ಶ್ರೀ| ಎಸ್. ಮುಕುಂದರಾಯರು
ಶ್ರೀ| ಪಿ. ಕೆ. ನಾರಾಯಣ, ಅವರು

ಸಂಪಾದಕ
ಶ್ರೀನಿವಾಸ ಉಡುಪ

ಬೆಲೆ- ಒಂದು ರೂಪಾಯಿ ಆರು ಆಣೆ
[ಅಗೋಸ್ತು II— ೧— 49]

ಮುದ್ರಕರು
[illegible] ಛಾಪಖಾನೆ
[illegible]ದಿ

ಪ್ರಕಾಶಕರು
ವಸಂತ ಮಾಲಿಕೆ
ಕೊಡಿಯಾಲಬೈಲು
ಮಂಗಳೂರು

ಪ್ರಸ್ತಾವ

ವಸಂತ ಮಾಲಿಕೆಯ ಎರಡನೆಯ ವರ್ಷದ ಕೊನೆಯ ಪುಸ್ತಕವಾಗಿ ಈ ಕಥಾಸಂಗ್ರಹವನ್ನು ನಿಮ್ಮ ಮುಂದಿಡಲು ಸಂತೋಷಪಡುತ್ತೇವೆ. ಕೆಲವು ಅನಿವಾರ್ಯ ಕಾರಣಗಳಿಂದಾಗಿ ಈ ಪುಸ್ತಕದ ಪ್ರಕಾಶನವು ತಡವಾಯಿತು. ಚಂದಾದಾರರು ಮನ್ನಿಸಬೇಕಾಗಿ ವಿನಂತಿ.

ಎರಡನೆಯ ವರ್ಷದ ಮೂರು ಪುಸ್ತಕಗಳ ಒಟ್ಟು ಬೆಲೆಯು ನಾಲ್ಕು ರೂಪಾಯಿ. ಅಂಚೆಯ ವೆಚ್ಚವನ್ನು ಮಾಲಿಕೆಯೇ ವಹಿಸಿರುವುದರಿಂದ ನಾವು ಚಂದಾದಾರರಿಗೆ ಸುಮಾರು ಐದು ರೂಪಾಯಿಗಳಷ್ಟು ಪ್ರತಿಫಲವನ್ನು ಕೊಟ್ಟಂತಾಯಿತು ಎಂದು ತಿಳಿಸಲು ಸಂತೋಷಪಡುತ್ತೇವೆ. ನಮ್ಮ ಉದ್ಯಮದಲ್ಲಿ ಈ ವರ್ಷ ನೆರವಾದ ಲೇಖಕರಿಗೂ ಚಂದಾದಾರರಿಗೂ ಮತ್ತು ಇತರ ಗ್ರಾಹಕರಿಗೂ ನಾವು ಕೃತಜ್ಞರು.

ಶ್ರೀಯುತ ಎಲ್. ಎಸ್. ಶೇಷಗಿರಿರಾಯರು ನಮ್ಮ ಕೇಳಿಕೆಯನ್ನು ಮನ್ನಿಸಿ ಈ ಕಥಾ ಸಂಗ್ರಹವನ್ನು ಮಾಲಿಕೆಯಲ್ಲಿ ಪ್ರೋಣಿಸಲೆಡೆಮಾಡಿ ಕೊಟ್ಟಿದ್ದಾರೆ. ಅವರಿಗೆ ನಮ್ಮ ಅನಂತ ವಂದನೆಗಳು.

ಅಲ್ಪಾವಕಾಶದಲ್ಲೇ ಪುಸ್ತಕವನ್ನು ಅಂದವಾಗಿ ಮುದ್ರಿಸಿ ಕೊಟ್ಟ ಮಂಗಳೂರು ಛಾಪಖಾನೆಯ ವ್ಯವಸ್ಥಾಪಕರಿಗೆ ನಮ್ಮ ಧನ್ಯವಾದಗಳು.

ಕೊನೆಯದಾಗಿ, ಹಿಂದಿನಂತೆಯೇ ಇನ್ನು ಮುಂದೆಯೂ ತಾವೆಲ್ಲರೂ ಸಹಕರಿಸಬೇಕೆಂದು ನಮ್ಮ ವಿನಯ ಪೂರ್ವಕ ವಿನಂತಿ.

ಬೆಸೆಂಟ್ ಶಾಲೆ,
೧೫—೮—೪೯
(ಸ್ವಾತಂತ್ರ್ಯ ದಿನ)

ಶ್ರೀನಿವಾಸ ಉಡು...
ಸಂಪಾದಕ...

...ಟ್ಟ
... ತಾನು
... ಈಗ ತಾನು

ಪುಸ್ತಕವನ್ನೋದುವ ಗೆಳೆಯಗೆಳತಿಯರಿಗೆ

ಕನ್ನಡ ಬಂಧು,

ಪುಸ್ತಕವನ್ನು ನಿನ್ನ ಕೈಯ್ಯಲ್ಲಿಡುವಾಗ ಎರಡು ಮಾತು ಹೇಳಬೇಕೆನ್ನಿಸುತ್ತದೆ.

ಕಳೆದ ನಾಲ್ಕೈದು ವರ್ಷಗಳಲ್ಲಿ ನಾನು ಆಗಾಗ ಬರೆದ ಕತೆಗಳು 'ಕತೆಗಾರ,' 'ಕೀರ್ತಿ ಕಿರಣ,' 'ಪ್ರಜಾಮತ,' 'ಕನ್ನಡ ನುಡಿ,' 'ಸೇವಾ' ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ, ಒಂದೆರಡು ಕಥಾಸಂಗ್ರಹಗಳಲ್ಲಿ ಸ್ಥಾನಪಡೆದಿವೆ. ಆದರೆ ನನ್ನ ಕತೆಗಳ ಸಂಕಲನ ಹೊರಬೀಳುತ್ತಿರುವುದು ಇದೇ ಮೊದಲು. ಇದಕ್ಕೆ ಶ್ರೀ. ಶ್ರೀನಿವಾಸ ಉಡುಪರು ಮತ್ತು ಶ್ರೀ. ಪಿ. ಕೆ. ನಾರಾಯಣ ಅವರು ಕಾರಣರು. ಅವರಿಬ್ಬರ ಸೂಚನೆ, ನೆರವು ಇಲ್ಲದಿದ್ದರೆ ಈ ಕಥಾ ಸಂಕಲನ ಹೊರಬೀಳುತ್ತಿರಲಿಲ್ಲ. ಈ ಸಂಗ್ರಹ ವಸಂತಮಾಲಿಕೆಯ ಪುಷ್ಪವಾಗಿ ಅರಳಬೇಕೆಂದು ಗೊತ್ತಾದ ಮೇಲೂ ಪ್ರಕಟಣೆ ತಡವಾಯಿತು. ಹೊಸಕತೆಗಳ ಹಸ್ತಪ್ರತಿ ಶ್ರೀ. ಶ್ರೀನಿವಾಸ ಉಡುಪರ ಕೈಸೇರಲು ಸುಮಾರು ಆರು ತಿಂಗಳಾಯಿತು. ಅವರು ತೋರಿಸಿದ ತಾಳ್ಮೆ, ಸಹಕಾರಗಳಿಗಾಗಿ ನಾನು ಕೃತಜ್ಞನಾಗಿದ್ದೇನೆ. ಈ ಕೃತಿಯಲ್ಲಿ ಓದಲು ಅರ್ಹವಾದದ್ದು ...ನಾದರೂ ಇದ್ದರೆ ಅದನ್ನು ಕನ್ನಡಿಗರ ಮುಂದಿಟ್ಟ ಕೀರ್ತಿ ಶ್ರೀ. ಉಡುಪರದು ... ಶ್ರೀ. ನಾರಾಯಣ ಅವರದು; ಬೆಳಕು ಕಾಣದೆ ಉಳಿದಿದ್ದರೆ ...ಿತ್ತು ಎನ್ನುವಂತಹುದಿದ್ದರೆ ಅದನ್ನು ಬಯಲಿಗೆ ತಂದ ದಿಟ್ಟತನದ ...ು.

ಇಲ್ಲಿನ ಕೆಲವು ಕತೆಗಳ ವಿಷಯವಾಗಿ ಎರಡು ಮಾತು. "ಕಪ್ಪು ಹುಡುಗಿ" ಕನ್ನಡ ಸಾಹಿತ್ಯ ಪರಿಷತ್ತು ೧೯೪೭ರಲ್ಲಿ ನಡೆಸಿದ ಅಖಿಲ ಕರ್ನಾಟಕ ಸಣ್ಣ ಕತೆಗಳ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ ಪಡೆಯಿತು, ಅದೇ ವರ್ಷ ಮದರಾಸಿನ ಕರ್ಣಾಟಕ ಸೇವಾಸಂಘ ನಡೆಸಿದ ಸಣ್ಣ ಕತೆಗಳ ಸ್ಪರ್ಧೆಯಲ್ಲಿ "ಪ್ರಣಯಿಗಳು" ಎರಡನೆಯ ಸ್ಥಾನ ಪಡೆಯಿತು. 'ಕಪ್ಪು ಹುಡುಗಿ' "ಕನ್ನಡ ನುಡಿ"ಯ ವಿಶೇಷ ಸಂಚಿಕೆಯಲ್ಲಿ, 'ಪ್ರಣಯಿಗಳು' 'ಸೇವಾ' ಪತ್ರಿಕೆಯ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿವೆ. 'ಆ ನನ್ನ ಚಾಪೆ,' ಮತ್ತು 'ಮಹತ್ವಪೂರಿತ ಭೇಟಿ' ಬೆಂಗಳೂರಿನ 'ಕತೆಗಾರ' ಪತ್ರಿಕೆಯಲ್ಲಿ ಪ್ರಕಟವಾಗಿವೆ. ಈ ಕತೆಗಳನ್ನು ಈ ಸಂಗ್ರಹದಲ್ಲಿ ಸೇರಿಸಿಕೊಳ್ಳಲು ಒಪ್ಪಿಗೆಯಿತ್ತ ಆ ಸಂಸ್ಥೆಗಳ ಅಧಿಕಾರಿಗಳ ಮತ್ತು ಪತ್ರಿಕೆಗಳ ಸಂಪಾದಕರ ಸಹೃದಯತೆಯನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಸಂಕಲನದ ಮೊದಲ ಐದು ಕತೆಗಳು ಅಚ್ಚಾಗುತ್ತಿರುವುದು ಇದೇ ಮೊದಲು.

ಈ ಕತೆಗಳಲ್ಲಿ ಯಾರೊಬ್ಬರ ಮನಸ್ಸನ್ನು ನೋಯಿಸುವುದಾಗಲಿ, ಯಾರೊಬ್ಬ ವ್ಯಕ್ತಿಯ ವಿಷಯವಾಗಿ ಟೀಕೆ ಮಾಡುವುದಾಗಲಿ ನನ್ನ ಗುರಿಯಲ್ಲ. ಇಲ್ಲಿನ ವ್ಯಕ್ತಿಗಳು ನನ್ನ ಕಲ್ಪನಾರಾಜ್ಯದ ನಿವಾಸಿಗಳು. ಹಾಗೆಯೇ ನನ್ನ ಅನುಭವಗಳನ್ನು ತೋಡಿಕೊಳ್ಳುವುದೂ ನನ್ನ ಉದ್ದೇಶವಲ್ಲ. ಆದರೆ ಕತೆಗಾರನ ಕೃತಿ ಅವನ ಅನುಭವಗಳ, ಜೀವನದರ್ಶನದ ನೆರಳಾಗುವುದು ಅನಿವಾರ್ಯ; ಹಾಗೆಯೇ ನನ್ನ ಜೀವನದ ಅನುಭವಗಳ ಛಾಯೆ ಈ ಕೃತಿಗಳ ಮೇಲೆ ಬಿದ್ದಿರಬಹುದು. ಆದಮಾತ್ರಕ್ಕೆ ನಿಜವಾದ ವ್ಯಕ್ತಿಗಳನ್ನಾಗಲಿ, ಘಟನೆಗಳನ್ನಾಗಲಿ ಇಲ್ಲಿನ ಕತೆಗಳೊಡನೆ ಸಂಬಂಧಿಸಬಾರದೆಂದು ಬಿನ್ನಹ. ಇದು ನಾನು ಕಂಡ ಜೀವನದ ಚಿತ್ರ ಮಾತ್ರ, ಆತ್ಮವೃತ್ತವಲ್ಲ. ಎಷ್ಟೋ ಸಲ ಜೀವನದ ಹಾದಿಯಲ್ಲಿ ಆ ದೃಶ್ಯ, ಈ ಚಿತ್ರ ಕಂಡಾಗ ಹಿರಿಯರಾದ 'ಅಂಬಿಕಾತನಯದತ್ತ'ರ "ವಸಂತಮುಖ"ದ ಮೂರು ಪಂಗ್ತಿಗಳು ನನ್ನ ಮನಸ್ಸಿನಲ್ಲಿ ಹಾದು ಹೋಗಿವೆ-

ಇದುವೆ ಜೀವ
ಇದು ಜೀವನ
ಪವನದಂತೆ ಪಾವನ

ಟ್ಟಿ
ತಾನು
ಈಗ ತಾನು

ನಿಜ, ಜೀವನ ಏನೇ ಆಗಲಿ, ಹೇಗೇ ಸಾಗಲಿ "ಪವನದಂತೆ ಪಾವ
ಈ ಪಂಗ್ತಿಗಳಲ್ಲಿ ಎರಡನೆಯದು ಈ ಸಂಗ್ರಹಕ್ಕೆ ಹೆಸರನ್ನಿತ್ತಿದೆ. 'ಇ
ಜೀವನ' ಎಂಬ ದೃಷ್ಟಿಯಿಂದ ಈ ಕೃತಿಗಳನ್ನು ನೀವು ಓದಬೇಕಲ್ಲದೆ 'ಇ
ಕತೆಗಾರನ ಜೀವನ' ಎಂಬ ದೃಷ್ಟಿಯಿಂದಲ್ಲ ಎಂದು ಸಹೃದಯರಿಗೆ ಹೇಳಬೇ
"ಪವನದಂತೆ ಪಾವನವಾದ" ಜೀವನವನ್ನು ಅರ್ಥಮಾಡಿಕೊಳ್ಳುವ ಯ
ಇಲ್ಲಿ ಮಾಡಿದ್ದೇನೆ. ಈ ಪುಸ್ತಕ ಸ್ವಲ್ಪ ಮಟ್ಟಿಗಾದರೂ ನಿನ್ನ ಅಂತಃಕ
ವನ್ನು ಕಲಕಿದರೆ ನಾನು ಧನ್ಯ, ಹಾಗಾಗದಿದ್ದರೆ ನಿನ್ನ ಕ್ಷಮೆ ಬೇಡುತ್ತೇನ

ನಿನ್ನವ

ಬೆಂಗಳೂರು.
೧೦—೮—'೪೯

ಎಲ್. ಎಸ್. ಶೇಷಗಿರಿ ರಾವ

ಪರಿವಿಡಿ

ಅರ್ಪಣೆ

ನನ್ನ ಸಾಹಿತ್ಯ ಪ್ರೇಮಕ್ಕೆ ಮೊದಲಿನಿಂದ ಪ್ರೋತ್ಸಾಹವಿತ್ತು
ನನ್ನ ಸಾಹಿತ್ಯ ಸೇವೆಯನ್ನು ತಮ್ಮ ಹರಕೆಯಿಂದ ಬೆಳೆಸುತ್ತಿರುವ

ಪೂಜ್ಯ ತಂದೆ ತಾಯಿಯರಿಗೆ

ಭಕ್ತಿ ಗೌರವ ಪ್ರೇಮಪೂರ್ವಕವಾಗಿ

ಮುಯ್ಯಿ

ಹನುಮಪುರಕ್ಕೆ ಹೋಗಬೇಕೆಂದು ಯಜಮಾನರು ತಿಳಿಸಿದಾಗ ಚಿನ್ನಪ್ಪನಿಗೆ ಬಂದ ಭಾವನೆಗಳು ಹಲವು. ಹನುಮಪುರ ಅವನು ಹುಟ್ಟಿ ಬೆಳೆದ ಸ್ಥಳ; ಅದನ್ನು ಬಿಟ್ಟು ಆಗಲೇ ಇಪ್ಪತ್ತೈದು ವರ್ಷವಾಗಿತ್ತು. ಈ ಇಪ್ಪತ್ತೈದು ವರ್ಷಗಳಲ್ಲಿ ಒಂದು ಸಲವೂ ಅವನು ಅಲ್ಲಿ ಕಾಲಿಟ್ಟಿರಲಿಲ್ಲ. ಬೇಕೆಂದೇ ಅವನು ಆ ಸ್ಥಳಕ್ಕೆ ಹೋಗುವುದನ್ನು ತಪ್ಪಿಸಿಕೊಂಡಿದ್ದ. ಈಗ ಯಜಮಾನರು ಮರುದಿನ ಬಸ್ಸನ್ನು ಹನುಮಪುರಕ್ಕೆ ತೆಗೆದುಕೊಂಡು ಹೋಗಬೇಕೆಂದಾಗ ಅವನು ಹಿಂದೆಗೆದ.

"ಮತ್ತೆ ಯಾರನ್ನಾದರೂ ಕಳುಹಿಸಿಕೊಡಲು ಸಾಧ್ಯವಾದರೆ—" ರಾಗವೆಳೆದ.

"ಇಲ್ಲ, ಚಿನ್ನಪ್ಪ. ಮತ್ತೆ ಯಾರನ್ನೂ ಕಳುಹಿಸುವುದಕ್ಕೆ ನನಗೆ ಒಪ್ಪಿಗೆಯಿಲ್ಲ. ಹನುಮಪುರದಿಂದ ಕೊಪ್ಪಕ್ಕೆ ಹೋಗೋ ಗುಡ್ಡ ಘಾಟುಗಳ ರಸ್ತೆಯಲ್ಲಿ ಬಸ್ಸನ್ನು ಮತ್ತೆ ಯಾರೂ ನಿನ್ನ ಹಾಗೆ ಬಿಡಲಾರರು. ಅದೂ ಮದುವೆ ಮನೆಗೆ ಹೋಗೋ 'ಪಾರ್ಟಿ'ಗೋಸ್ಕರ ಬಸ್ಸು. ಪಟೇಲ ಮಾದೇ ಗೌಡರಿಗೆ ಹೇಳಿದ್ದೇನೆ– ನಮ್ಮ ಕಂಪೆನೀಲಿರೋ ಡ್ರೈವರುಗಳಲ್ಲೆಲ್ಲ ತುಂಬಾ ಗಟ್ಟಿಗನಾದವನನ್ನೇ ಕಳುಹಿಸುತ್ತೇನೆ ಅಂತ."

"ಮಾದೇ ಗೌಡರ ಮನೆಗೇ, ಸಾರ್?"

"ಹುಂ. ಮಾದೇ ಗೌಡರ ಮಗನಿಗೆ ಮದುವೆ. ಅವರು ಗೊತ್ತೇನು ನಿನಗೆ?"

"ಹುಂ. ಎಲ್ಲೋ ಸ್ವಲ್ಪ ಅಷ್ಟೆ."

"ಅವರ ಮಗನಿಗೆ ನಾಡಿದು ಕೊಪ್ಪದಲ್ಲಿ ಮದುವೆ. ಇರ್‍ಸ್ವೆ. ಹುಟ್ಟಿ ತಾನು ಒಬ್ಬನೇ ಹುಡುಗ. ಗಂಡಿನವರೆಲ್ಲ ನಾಳೆ ಹನುಮಪುರದಿಂದ ಹೊ ಈಗ ತಾನು ಮಾದೇ ಗೌಡರು ನನಗೆ ಬಹಳ ಬೇಕಾದ ಸ್ನೇಹಿತರು. ನೀನ

ನನಗೆ ಧೈರ್ಯ. ಆ ರಸ್ತೇಲಿ ಲೀಲಾಜಾಲವಾಗಿ ಬಸ್ ಬಿಡುತ್ತಿ, ಸುಖವಾಗಿ ಮದುವೆ ಮನೆಯವರನ್ನು ಕೊಪ್ಪಕ್ಕೆ ಕರೆದುಕೊಂಡು ಹೋಗಿಬಿಡುತ್ತಿ ಅಂತ."

ಚಿನ್ನಪ್ಪ ಮಾತನಾಡಲಿಲ್ಲ.

"ಯಾಕೆ ಚಿನ್ನಪ್ಪ ಅನುಮಾನಿಸ್ತೀ? ಮಾದೇ ಗೌಡರು ಬಹಳ ಹೆದರ್‍ತಾ ಇದ್ರು–ಏನಪ್ಪಾ ಈ ಗುಡ್ಡಗಳು ಕಣಿವೆಗಳ ಮಧ್ಯೆ ಬಸ್ ಪ್ರಯಾಣ ಅಂದರೆ ಹೇಗೋ ಏನೋ, ಮದುವೆ ಮನೆಗೆ ಹೋಗೋದು, ಹೆಂಗಸರು ಮಕ್ಕಳು ಎಲ್ಲ ಇರ್ತಾರೆ ಅಂತ. ನಾನೇ ಹೇಳಿದೆ, ನಿಮಗೆ ಸ್ವಲ್ಪವೂ ಹೆದರಿಕೆ ಕೂಡ ಆಗದ ಹಾಗೆ ನಿಮ್ಮನ್ನು ಕರೆದುಕೊಂಡು ಹೋಗಿ ಬಿಡೋ ಧೀರನ್ನ ಕಳಿಸ್ತೇನೆ ಅಂತ. ಮದುವೆಗೆ ಹೋಗೋ ಪಾರ್ಟಿ, ಅಲ್ಲದೆ ಮಾದೇ ಗೌಡರದೂ ಹಿಡಿತದ ಕೈಯ್ಯಲ್ಲ. ಇನಾಮು ಸಿಕ್ಕೀತು."

"ಸರಿ, ಸ್ವಾಮಿ'' ಎಂದು ಅಲ್ಲಿಂದ ಕಾಲ್ತೆಗೆದ ಚಿನ್ನಪ್ಪ.

ಮರುದಿನ ಮಾದೇಗೌಡರ ಮನೆಯ ಮುಂದೆ ಹತ್ತು ಗಂಟೆಗೆ ಬಸ್ ಬಂದು ನಿಂತಿತು. ಮಾದೇಗೌಡರ ಭಾವಮೈದ ಬಂದು ಅದಕ್ಕೆ ಹೂವುಗೀವು ಹಾಕಿ, ಅಲಂಕಾರ ಮಾಡಿದ. ಹುಡುಗರಿಗಂತೂ ಆನಂದವೇ ಆನಂದ. ಬಸ್ಸಿನೊಳಕ್ಕೆ ನುಗ್ಗುವರು, ಇಲ್ಲಿ ಕುಳಿತುಕೊಳ್ಳುವರು, ಅಲ್ಲಿ ಕುಳಿತುಕೊಳ್ಳು ವರು, ಕೂಗುವರು, ಕುಣಿಯುವರು. ಚಿನ್ನಪ್ಪನು ಮಾತ್ರ ಅಲ್ಲಾಡಲಿಲ್ಲ, ತನ್ನ 'ಸೀಟ'ನ್ನು ಬಿಟ್ಟೇಳಿಯಲಿಲ್ಲ. ಕಂಡಕ್ಟರ್ ಆರೋಗ್ಯಸಾಮಿಗೆ ಕೂಡ ಆಶ್ಚರ್ಯ, ''ಇದೇನು ಹೀಗಿದ್ದಾನೆ ಇವತ್ತು ಚಿನ್ನಪ್ಪ?" ಎಂದು. ತನ್ನ 'ಸೀಟ'ನಲ್ಲಿ ಹಿಂದಕ್ಕೆ ಒರಗಿಕೊಂಡು ಬಸ್ಸಿನ ಚಾವಣಿಯನ್ನು ದೃಷ್ಟಿಸುತ್ತಿದ್ದ ಚಿನ್ನಪ್ಪ. ಅವನ ಮನಸ್ಸು ಮೂವತ್ತು ವರ್ಷಗಳನ್ನು ದಾಟಿ ಹಿಂದಕ್ಕೆ ಹೋಗಿತ್ತು.

ಚಿನ್ನಪ್ಪನ ತಾಯಿ ತಂದೆ ಇದ್ದದ್ದು ಹಸುಮಪುರದಲ್ಲಿ. ಆಸ್ತಿವಂತ ರಲ್ಲದಿದ್ದರೂ ಮರ್ಯಾದೆಯಿಂದಿದ್ದವರು. ಚಿನ್ನಪ್ಪನ ತಾಯಿ ಗಂಡನ ನೆ[illegible] ಬಂದಾಗ ನಿಂಗೇಗೌಡರು ಪಟೇಲರಾಗಿದ್ದರು. ನಿಂಗೇಗೌಡರೆಂದರೆ [illegible]ರಿಗೆಲ್ಲ ಬಹಳ ಭಯ, ಭಕ್ತಿ. ದೇವರಿಗಂಜಿ ಆತ್ಮಸಾಕ್ಷಿಯಾಗಿ [illegible]ತುವ ಮನುಷ್ಯ ಅವರು. ಬೇಕಾದಷ್ಟು ಭೂಮಿಕಾಣಿ ಬಹಳ

ಮಾಡಿಕೊಂಡಿದ್ದರೂ ಅನ್ಯಾಯದಿಂದ ಒಂದು ಕಾಸನ್ನೂ ಸಂಪಾದಿಸಿದವರಲ್ಲ. ಮೊಸರು ಕಡೆದರೆ ಬೆಣ್ಣೆ ಬರುವ ಬದಲು ವಿಷ ಬಂದಂತೆ ಅವರ ಮಕ್ಕಳು ಮಾದೇಗೌಡ, ನಂಜೇಗೌಡ. ನಿಂಗೇಗೌಡರು ಸ್ವತಃ ಕಷ್ಟಪಟ್ಟವರು, ಅದರಿಂದ ಬಡವರ ವಿಷಯದಲ್ಲಿ ಅವರಿಗೆ ಸಹಾನುಭೂತಿ. ಮಾದೇಗೌಡ, ನಂಜೇಗೌಡರು ಬೆಳ್ಳಿಯ ತೊಟ್ಟಿಲಲ್ಲಿ ತೂಗಿಕೊಂಡವರು. ಮೊದಲಿನಿಂದ ಊರ ಪೋಲಿ ತಂಡಕ್ಕೆ ಅವರು ಮುಖಂಡರು. ವಯಸ್ಸಾಗುತ್ತ ಮೈ ಕೈ ಬಲಿತು, ತರುಣ ರಾದ ಹಾಗೆಲ್ಲ ಅವರ ಹಾವಳಿ ಹೆಚ್ಚಾಗುತ್ತ ಹೋಯಿತು. ಯಾವುದೋ ಕಳ್ಳತನದ ಕೇಸಿನಲ್ಲಿ ನಂಜೇಗೌಡನ ಮೇಲೆ ಅನುಮಾನವಿತ್ತು. ಅವನು ಊರನ್ನೇ ಬಿಟ್ಟು ಓಡಿ ಹೋದ. ಇದಾದ ಒಂದೆರಡು ವರ್ಷಕ್ಕೆ ನಿಂಗೇ ಗೌಡರು ಕಣ್ಣುಮುಚ್ಚಿದರು. ಮಾದೇಗೌಡ ಪಟೇಲನಾದ; ನಂಜೇಗೌಡ ವಾಪಸ್ಸು ಬಂದ.

ಧರ್ಮರಾಯನಂತಹ ತಂದೆ ಬದುಕಿದ್ದಾಗಲೇ ಆಡಬಾರದ ಆಟ ಆಡುತ್ತಿದ್ದ ಅಣ್ಣ ತಮ್ಮಂದಿರು ಈಗ ಪಂಜರದಿಂದ ಹೊರಕ್ಕೆ ಹಾರಿದ ಸಿಂಹಗಳಾದರು. ಮೈಯಲ್ಲಿ ಬಿಸಿ ರಕ್ತ, ಕೈಯಲ್ಲಿ ಕಾಸು, ಸಹಾಯಕ್ಕೆ ಅಧಿಕಾರ, ಅಲ್ಲದೆ ಪೋಲಿಗಳ ತಂಡವೊಂದು; ಇವರ ಹಾವಳಿಗೆ ಮಿತಿಯೇ ಇಲ್ಲವಾಯಿತು. ಇವರಿಗೆ ಎದುರು ಬಿದ್ದವನ ಅವತಾರ ಮುಗಿಯಿತೆನ್ನುವ ಮಟ್ಟಿಗೆ ಬಲಿತರು. ಈ ದರ್ಪದ ಶಿಖರದಲ್ಲಿ ಇವರು ಇದ್ದಾಗಲೇ ನಿಂಗಮ್ಮ–ಚಿನ್ನಪ್ಪನ ತಾಯಿ–ನಂಜೇಗೌಡನ ಕಣ್ಣಿಗೆ ಬಿದ್ದದ್ದು.

ನಿಂಗಮ್ಮ ಹೊಲದಲ್ಲಿ ಕೆಲಸಮಾಡುತ್ತಿದ್ದ ಗಂಡನಿಗೆ ಹಿಟ್ಟು ತೆಗೆದು ಕೊಂಡು ಹೋಗಿ ಕೊಟ್ಟು ಹಿಂದಕ್ಕೆ ಬರುತ್ತಿದ್ದಳು. ತನ್ನ ಗೆಳೆಯರೊಡನೆ ಹೋಗುತ್ತಿದ್ದ ನಂಜೇಗೌಡ ದೂರದಿಂದ ಅವಳನ್ನು ನೋಡಿದ. "ಯಾರೀ ಹೆಣ್ಣು?" ಎಂದ.

"ರಾಮಪ್ಪನ ಎಂಡ್ರು" ತಂಡದಲ್ಲಿ ಒಬ್ಬ ಹೇಳಿದ.

ಅದಾದ ಮೂರು–ನಾಲ್ಕು ದಿನಗಳಿಗೆ ನಂಜೇಗೌಡ ಕುಡಿದು ಬಿಟ್ಟಿ ದ್ದವನು, ನಿಂಗಮ್ಮನನ್ನು ಮತ್ತೆ ಕಂಡ. ನಿಂಗಮ್ಮ ಮನೆಯ ತಾನು ಬೆರಣಿ ಆರಿಸುತ್ತಿದ್ದಳು. ನಂಜೇಗೌಡ ಬಂದದ್ದನ್ನು ಅವ ಈಗ ತಾನು

ನೋಡಲಿಲ್ಲ. ನಂಜೇಗೌಡ ದೂರದಿಂದಲೇ ಅವಳನ್ನು ಕಂಡ; ಬಿಲ್ಲಿನಂತೆ ಬಾಗಿದ್ದ ಅವಳ ಮೈ ಎಂದಿಗಿಂತ ಸುಂದರವಾಗಿ ಕಂಡಿತು ಅವನಿಗೆ. ಅವಳ ತಲೆಗೂದಲು ಮುಂದೆ ಬಾಗಿ ಹಣೆಯ ಮೇಲಾಡುತ್ತಿತ್ತು. ಗಾಳಿ ಸೆರಗಿನ ಕೊನೆಯೊಡನೆ ಆಡುತ್ತಿತ್ತು.

"ನಿಂಗೀ" ಎಂದ ನಂಜೇಗೌಡ.

ತಟ್ಟನೆ ಮೇಲೆದ್ದಳು ನಿಂಗಮ್ಮ. ನಂಜೇಗೌಡ ಹತ್ತಿರ ಬಂದದ್ದೂ ಅರಿವಿರಲಿಲ್ಲ ಅವಳಿಗೆ. ತಲೆಯೆತ್ತುತ್ತಲೇ ಕುಡಿತದ ಫಲವಾಗಿ ಕೆಂಪಾಗಿದ್ದ ಕಣ್ಣಿನ ನೋಟ ಅವಳನ್ನು ಬೆದರಿಸಿತು. ಸುಮ್ಮನೆ ನಿಂತಳು.

ನಂಜೇಗೌಡನೂ ಅವಳನ್ನೆ ನೋಡುತ್ತ ನಿಂತ. ಕೊನೆಗೆ ಅವಳೇ ಕೇಳಿದಳು:-"ಏನು ಬಂದದ್ದು?"

"ರಾಮಪ್ಪ ಅನ್ನ?"

"ಇಲ್ಲ. ಹೊಲದಿಂದಲೇ ಬಂದಿಲ್ಲ."

ಮತ್ತೆ ನಂಜೇಗೌಡ ಅವಳನ್ನು ದೃಷ್ಟಿಸುತ್ತ ನಿಂತ. ನಿಂಗಮ್ಮನಿಗೆ ಏನುಮಾಡಲೂ ತೋರದಾಯಿತು. ಗುಡಿಸಲೊಳಕ್ಕೆ ಹೋಗಲು ತಿರುಗಿದಳು. ನಂಜೇಗೌಡ ಬಂದು ಅವಳ ಕೈಹಿಡಿದ. 'ಅಯ್ಯೋ' ಎಂದು ಚೀರಿ ಕೈ ಬಿಡಿಸಿಕೊಳ್ಳಲು ಯತ್ನಿಸಿದಳು ನಿಂಗಮ್ಮ. ನಂಜೇಗೌಡ ಕೈಯ್ಯನ್ನು ಬಿಗಿಯಾಗಿ ಹಿಡಿದಿದ್ದ. ಅಷ್ಟು ಹೊತ್ತಿಗೆ ಯಾರೋ 'ಥೂ ನಾಯಿ' ಎನ್ನುತ್ತ ನಂಜೇಗೌಡನನ್ನು ಹಿಂದಿನಿಂದ ಒದ್ದರು, ಅಷ್ಟು ದೂರಹೋಗಿ ಬಿದ್ದ ಗೌಡ.

ಒದ್ದವರು ಬೇರೆಯಾರೂ ಅಲ್ಲ, ರಾಮಪ್ಪ. ಹೊಲದಿಂದ ಬರುತ್ತಿದ್ದವನು ತನ್ನ ಮನೆಯ ರಸ್ತೆಯಲ್ಲಿ ತಿರುಗುವ ಹೊತ್ತಿಗೂ, ನಂಜೇಗೌಡ ನಿಂಗಮ್ಮನ ಕೈ ಹಿಡಿಯುವ ಹೊತ್ತಿಗೂ ಸರಿಹೋಯಿತು. ಅವಳ ಕೂಗು, ಕೈ ಬಿಡಿಸಿಕೊಳ್ಳಲು ಪಟ್ಟ ಸಾಹಸ, ಎಲ್ಲದಕ್ಕೂ ಅವನೇ ಸಾಕ್ಷಿಯಾಗಿದ್ದ.

"ನಿಂಗೇಗೌಡನ ಮಗನಾದ್ದಕ್ಕೆ ಬದುಕಿದೆ. ಮತ್ತೊಬ್ಬನಾಗಿದ್ದರೆ ಇಲ್ಲೇ ಸಾಯುತ್ತಿದ್ದೆ, ಹೋಗಾಚೆ" ಎಂದು ಉಗುಳಿ ರಾಮಪ್ಪ ಗುಡಿಸಲೊಳಕ್ಕೆ

ಇದಾದ ನಾಲ್ಕು ದಿನಕ್ಕೆ ರಾಮಪ್ಪನ ದೇಹ ಅವನ ಹೊಲದಲ್ಲಿ ಸಿಕ್ಕಿತು. ಕುಡುಗೋಲಿನೇಟಿನಿಂದ ಪ್ರಾಣಹೋಗಿತ್ತು. ಪೋಲೀಸಿನವರು ಅನುಮಾನದ ಮೇಲೆ ನಂಜೇಗೌಡನನ್ನೂ ಇನ್ನೂ ಕೆಲವರನ್ನೂ ದಸ್ತಗಿರಿ ಮಾಡಿದರು; ಆದರೆ ಅವರ ವಿರುದ್ಧ ಸಾಕ್ಷಿಯೇನೂ ದೊರೆಯದೆ ಅವರನ್ನು ಬಿಟ್ಟುಬಿಟ್ಟರು. ಊರಿನಿಂದ ಬಂದಿದ್ದ ನಿಂಗಮ್ಮನ ಅಣ್ಣ, ತಂಗಿಯ ಕತೆಯನ್ನೆಲ್ಲ ಕೇಳಿ, ಇನ್ನು ಅವಳು ಅಲ್ಲಿರುವುದು ಕ್ಷೇಮವಲ್ಲವೆಂದು, ಅವಳನ್ನೂ ಅವಳ ಒಂದು ವರ್ಷದ ಕೂಸು ಚಿನ್ನಪ್ಪನನ್ನೂ ತನ್ನ ಊರಿಗೆ ಕರೆದುಕೊಂಡುಹೋದ.

ಚಿನ್ನಪ್ಪ ಬೆಳೆದಂತೆ ಕ್ರಮೇಣ ಈ ವಿಷಯವೆಲ್ಲ ಅವನಿಗೆ ತಾಯಿಯಿಂದ ತಿಳಿದು ಬಂದಿತ್ತು. ಸೋದರಮಾವನ ಮನೆಯಲ್ಲಿ ಅವನ ಬಾಲ್ಯ ಅಷ್ಟೇನೂ ಸುಖಕರವಾಗಿರಲಿಲ್ಲ. ಅವನ ಸೋದರಮಾವ ಇದ್ದದ್ದು ದೊಡ್ಡ ಊರಿನಲ್ಲಿ. ಯಾವುದೋ ಕಚೇರಿಯಲ್ಲಿ ಜವಾನನಾಗಿದ್ದ. ಮನೆಯಲ್ಲಿ ಎಮ್ಮೆ ಕಟ್ಟಿಕೊಂಡು ಹಾಲು ಮಾರಿ ಒಂದಿಷ್ಟು ದುಡ್ಡು ಮಾಡುತ್ತಿದ್ದ. ಅಣ್ಣ ನಮ್ಮವನಾದರೆ ಅತ್ತಿಗೆ ನಮ್ಮವಳೇ? ನಿಂಗಮ್ಮ ಅಣ್ಣನ ಮನೆಯಲ್ಲಿ ಬಹಳ ಕಷ್ಟಪಡಬೇಕಾಯಿತು, ಆದರೆ ಮಗ ಬೆಳೆದು ಮುಂದಕ್ಕೆ ಬರಲೆಂದು ಎಲ್ಲವನ್ನೂ ಸಹಿಸಿದಳು. ಹಾಗೂ ಹೀಗೂ ಕಷ್ಟಪಟ್ಟು, ಅವರಿವರ ಗೆಳೆತನ ಮಾಡಿ, ಅವರಿವರ ಕೈಕಾಲು ಕಟ್ಟಿ ಚಿನ್ನಪ್ಪ ಡ್ರೈವಿಂಗ್ ಕಲಿತ. ಬಸ್ ಕಂಪೆನಿಯಲ್ಲಿ ಡ್ರೈವರ್ ಕೆಲಸವೂ ಸಿಕ್ಕಿತು. ಆದರೆ ವಿಧಿ ಕೊಡುವ ಪಾಯಸದಲ್ಲಿ ಯಾವಾಗಲೂ ನೊಣವಿರಲೇಬೇಕೆಂಬ ನಿಯಮವೇನೊ! ಅವನಿಗೆ ಕೆಲಸವಾದ ಹದಿನೈದು ದಿನಕ್ಕೆ ನಿಂಗಮ್ಮ ಕಣ್ಮುಚ್ಚಿ ನಡೆದಳು.

ಆವರಿಂದಲೇ ಯಜಮಾನರು ಹಸುಮಪುರಕ್ಕೆ ಹೋಗಬೇಕೆಂದಾಗ ಚಿನ್ನಪ್ಪ ಬೆಚ್ಚಿದುದು. ಅದರಲ್ಲಿಯೂ ಮಾದೇಗೌಡರ ಮನೆಗೆಂದು ಹೇಳಿದಾಗ ಚಕಿತನಾದ. ದಿನವೆಲ್ಲ ಅವನ ಮನಸ್ಸಿನಲ್ಲಿ ಕಡೆಗೋಲು ಹಾಕಿ ಕಡೆಯುತ್ತಿರುವಂತಾಗಿತ್ತು. ಮನಸ್ಸೆಲ್ಲ ಕಲಕಿಹೋಗಿತ್ತು. ಯಜಮಾನರಿಗೆ ಹೋಗಿ ಇದ್ದ ಸ್ಥಿತಿಯನ್ನು ತಿಳಿಸಿಬಿಡುವುದೇ? ತಿಳಿಸಿ, 'ನಾನು ಅಲ್ಲಿಗೆ ಹೋಗಲಾರೆ' ಎಂದು ಹೇಳಿಬಿಡುವುದು ವಿಹಿತವಲ್ಲವೆ? ಆದರೆ ಅವರು ತನ್ನಲ್ಲಿ ಎಷ್ಟು ವಿಶ್ವಾಸವಿಟ್ಟಿದ್ದಾರೆ? ಇಷ್ಟು ಜನ ಡ್ರೈವರುಗಳಲ್ಲಿ ತನ್ನನ್ನೇ ಆರಿಸಿ ನಿಯಮಿಸಿದ್ದಾರೆ. ಹೋಗಿಯೇ ಹೋಗುತ್ತೇನೆ ಎಂದು ನಂಬಿಕೆಯಿಟ್ಟಿದ್ದಾರೆ. ಈ

ಒಲ್ಲೆ ಎಂದರೆ ಅವರೇನು ಮಾಡಬೇಕು? ಆದರೆ ತನ್ನ ತಂದೆಯನ್ನು ಕೊಂದು ತಾಯ ಬಾಳಿಗೆ ವಿಷಬೆರೆಸಿದ ನೀಚರ ಮನೆಯ ಸಂಭ್ರಮಕ್ಕೆ ತಾನು ಪಾಲುಗಾರನಾಗುವುದೆ? ಅಥವ ವಿಧಿಯೇ ಅವರನ್ನು ತನ್ನ ವಶಮಾಡಿದೆಯೇ? ಮಾದೇಗೌಡ ಮಾತ್ರವಲ್ಲ, ಅವನ ಸಂಸಾರದವರೆಲ್ಲರ ಪ್ರಾಣ ತನ್ನ ಕೈಯ್ಯಲ್ಲಿ ವಿಧಿ ತಂದುಕೊಟ್ಟಿದೆ, ಈಗ ಮುಯ್ಯಿ ತೀರಿಸಿಕೊಳ್ಳದಿರುವುದು ಮೂರ್ಖತನವಲ್ಲವೆ? ತನ್ನ ಪ್ರಾಣ ಹೋದರೂ ಚಿಂತೆಯಿಲ್ಲ, ತನಗಾಗಿ ಅಳುವವರು, ತನ್ನ ಸಾವಿನಿಂದ ನಷ್ಟಪಡುವವರು ಯಾರೂ ಇಲ್ಲ. ತಂದೆಯ ಸಾವು, ತಾಯಿಯ ನೋವು ಇದಕ್ಕೆ ಪ್ರತೀಕಾರ ಮಾಡಿದಂತಾಗುವುದು.

ಯೋಚನೆ ಮಾಡಿದಂತೆಲ್ಲ ಈ ಕೊನೆಯ ಭಾವನೆ ಅವನ ಮನಸ್ಸನ್ನು ಸೆಳೆಯಿತು. ತನ್ನ ಮನೆಯೊಂದನ್ನು ಮಾತ್ರವಲ್ಲ, ಹತ್ತಾರು ಸಂಸಾರಗಳನ್ನು ಹಾಳುಮಾಡಿದ ಇವರಿಗೆ ತಕ್ಕ ಶಿಕ್ಷೆ ವಿಧಿಸಲೆಂದೇ ದೇವರು ತನಗೆ ಈ ಅವಕಾಶ ಕಲ್ಪಿಸಿಕೊಟ್ಟಿದ್ದಾನೆ ಎಂದು ತೋರಿತು. ತನ್ನ ತಾಯಿ ಮಾದೇಗೌಡನನ್ನು, ನಂಜೇಗೌಡನನ್ನು ಎಷ್ಟು ಸಲ ಶಪಿಸಿದ್ದಳು! ತಾನು, ಅವರು ತನ್ನ ಕೈಗೆ ಸಿಕ್ಕರೆ ಸಾಕು, ತಕ್ಕ ಬುದ್ಧಿ ಕಲಿಸುತ್ತೇನೆ ಎಂದು ಎಷ್ಟು ಸಲ ಯೋಚನೆ ಮಾಡಿರಲಿಲ್ಲ! ತನ್ನ ತಾಯಿಯಂತೆ, ತನ್ನಂತೆ–ಎಷ್ಟು ಜನರ ಶಾಪವಿತ್ತೊ ಆ ಸಂಸಾರಕ್ಕೆ. ಎಷ್ಟು ಬೆಂದ ಕರುಳುಗಳ ನಿಟ್ಟುಸಿರ ಬೇಗೆ ತಾಗಿತ್ತೊ ಆ ಮನೆಗೆ. ಅವರು ಯಾರಿಗೆ ಅನ್ಯಾಯ ಮಾಡಿದ್ದರೊ ಅವರಿಂದಲೆ ಪ್ರತೀಕಾರ ಮಾಡಬೇಕೆಂದು ವಿಧಿ ತನಗೆ ಈ ಕೆಲಸ ನಿಯಮಿಸಿರಬೇಕು! ಯೋಚಿಸಿದ ಹಾಗೆಲ್ಲ–ಇವರಿಗೆ ಶಿಕ್ಷೆ ಮಾಡಲು ವಿಧಿ ಆರಿಸಿದ ಸಾಧನ ತಾನು, ತಾನು ಈಗ ಹಿಂಜರಿದರೆ, ಮನಸ್ಸು ಬೆಣ್ಣೆಯಾಗಲು ಬಿಟ್ಟರೆ, ಪಾಪ ಮಾಡಿದಂತೆ ಎಂದು ತೋರಿತು ಚಿನ್ನಪ್ಪನಿಗೆ.

ರಾತ್ರಿಯನ್ನೆಲ್ಲ ಇದೇ ಯೋಚನೆಯಲ್ಲಿ ಕಳೆದ. ಕಣ್ಣು ಮುಚ್ಚಿದರೆ ಸಿನಲ್ಲಿಯೂ ಇದೇ ಯೋಚನೆ. ತನ್ನ ತಾಯಿ ಬದುಕಿದ್ದಂತೆ, ಅವಳು ತ್ತಿಗೆಯ ಮನೆಯಲ್ಲಿ ಪಡಬಾರದ ಕಷ್ಟಪಡುತ್ತಿದ್ದಂತೆ ಕನಸು ಕಂಡ. ಕೆಯ ಮರಣದ ದೃಶ್ಯ, ಮುಖದ ವೇದನೆ, ಕಣ್ಣಿನಲ್ಲಿ ನಟ್ಟಿದ್ದ ದೈನ್ಯ ಸಾಯಿತು.

ಬೆಳಗಾಗುವ ಹೊತ್ತಿಗೆ ಚಿನ್ನಪ್ಪ ಮನಸ್ಸು ಮಾಡಿದ್ದ—ಮಾದೇಗೌಡನ ಮನೆಯವರಿಗೆಲ್ಲ ಇವತ್ತು ಆಯುಸ್ಸು ತುಂಬಿ ಬಂದಿದೆ ಎಂದು.

ಮಾದೇಗೌಡರ ಮನೆಯ ಮುಂದೆ ಬಸ್ಸು ಬಂದು ನಿಂತಿತು. ಮುದುಕನೊಬ್ಬ ಹೊರಗೆ ಬಂದು, ಚಿನ್ನಪ್ಪ, ಆರೋಗ್ಯಸಾಮಿ ಇಬ್ಬರನ್ನೂ ಊಟಕ್ಕೆ ಕರೆದ. ಚಿನ್ನಪ್ಪ ಹೋಗಲಿಲ್ಲ. ಆರೋಗ್ಯಸಾಮಿಗೆ "ನನಗೆ ಹಸಿವಿಲ್ಲ, ನೀನು ಊಟಮಾಡು," ಎಂದು ಹೇಳಿ ಕಳುಹಿಸಿದ. ಆರೋಗ್ಯಸಾಮಿ ಬಂದ ಮೇಲೆ, "ಆ ಮುದುಕ ಯಾರು?" ಎಂದು ಕೇಳಿದ.

"ಪಟೇಲರ ತಮ್ಮ ನಂಜೇಗೌಡ್ರು"

ಚಿನ್ನಪ್ಪ ಏಕೆ ನಕ್ಕನೆಂಬುದು ಆರೋಗ್ಯಸಾಮಿಗೆ ಅರ್ಥವಾಗಲಿಲ್ಲ.

ಹನುಮಪುರದಿಂದ ಕೊಪ್ಪಕ್ಕೆ ಹೋಗುವ ರಸ್ತೆಯೆಂದರೆ ಯಾವ ಡ್ರೈವರಿಗೇ ಆಗಲಿ ಸ್ವಲ್ಪ ನಡುಕವೇ. ಅದರಲ್ಲಿಯೂ ಮೂರು ತಿರುವುಗಳೆಂದರೆ ಅಪಾಯದ ತವರು. ಸ್ವಲ್ಪ ಎಚ್ಚರಿಕೆ ತಪ್ಪಿದರೆ, ಆಯ ತಪ್ಪಿದರೆ ಘಾಟುಗಳ ಮಧ್ಯ ಇನ್ನೂರು–ಮುನ್ನೂರು ಅಡಿ ಬಸ್ ಉರುಳಬೇಕಾಗಿತ್ತು. ಚಿನ್ನಪ್ಪ ಮೂರು ತಿರುವುಗಳಲ್ಲಿ ಯಾವುದನ್ನಾರಿಸಬೇಕು ಎಂಬುದನ್ನು ಯೋಚನೆಮಾಡುತ್ತಿದ್ದ. ಅವನು ಒಟ್ಟು ಹೋಗಬೇಕಾಗಿದ್ದುದು ಮೂವತ್ತು ಮೈಲಿ, ಅಷ್ಟೆ. ಮೊದಲನೆಯ ತಿರುವಿಗೂ ಮೂರನೆಯ ತಿರುವಿಗೂ ಮಧ್ಯೆ ನಾಲ್ಕೈದು ಮೈಲು ದೂರ. ಚಿನ್ನಪ್ಪನಿಗೆ ಒಂದೇ ಆಸೆ—ಮಾದೇಗೌಡನಿಗೆ, ನಂಜೇಗೌಡನಿಗೆ ಗೊತ್ತಾಗಬೇಕು ತಾನು ಯಾರು ಎನ್ನುವುದು. ತಾನು ಮುಯ್ಯಿ ತೀರಿಸಿಕೊಳ್ಳುತ್ತಿದ್ದೇನೆ ಎಂಬುದು ಅವರಿಗೆ ಅರಿವಾಗಬೇಕು. ಆದರೆ ಅದು ತೀರ ಮುಂಚೆ ಗೊತ್ತಾದರೆ ಅವರು ಬಸ್ಸಿನಿಂದ ಇಳಿದು ಬಿಡಬಹುದು, ಅಥವಾ ಮತ್ತೇನಾದರೂ ಮಾಡಬಹುದು. ತಿರುವು ಹತ್ತಿರ ಬಂದಾಗ ಅವರಿಗೆ ತಾನು ಯಾರು ಎಂಬುದನ್ನು ಹೇಳಬೇಕು, ಆ ಪೆಟ್ಟಿನಿಂದ ಅವರ ಮನಸ್ಸು ಚೇತರಿಸಿಕೊಳ್ಳುವ ಹೊತ್ತಿಗೆ ಬಸ್ಸನ್ನು ತಿರುವಿನಲ್ಲಿ ಕೆಡವಿ ಬಿಡಬೇಕು.

ಆದರೆ ಆರೋಗ್ಯಸಾಮಿ–? ಹುಂ, ದೇವರ ದಯೆ; ಅವನೂ ತನ್ನ ಹಾಗೆಯೇ ಹೆಂಡತಿ, ಮಕ್ಕಳು ಯಾರೂ ಇಲ್ಲದ ಅನಾಥ. ತಾನು ಸತ್ತರೆ ಹೇಗೆ ಚಿಂತೆಯಿಲ್ಲವೋ ಅವನು ಸತ್ತರೂ ಚಿಂತೆಯಿಲ್ಲ.

ಮಕ್ಕಳು, ಹೆಂಗಸರು ಬಸ್ ಹತ್ತುತ್ತಿದ್ದರು. ಬಣ್ಣ ಬಣ್ಣದ ಉಡುಪು ತೊಟ್ಟು, ಬಗೆಬಗೆಯ ಹೂವು ಮುಡಿದು ಹೆಂಗಸರು ಬರುತ್ತಿದ್ದರು. ಚಿಕ್ಕ ಹುಡುಗಿಯರು, ಯೌವನದ ಬೆಡಗಿಯರು, ಮಧ್ಯ ವಯಸ್ಸಿನ ತಾಯಿಯರು, ವೃದ್ಧೆಯರು ಎಲ್ಲ ಇದ್ದರು ಆ ಗುಂಪಿನಲ್ಲಿ. ಆ ಮೇಲೆ ಗಂಡಸರು.

ನಂಜೇಗೌಡ ಹೊರಕ್ಕೆ ಬರುತ್ತಲೇ ಚಿನ್ನಪ್ಪ ಹೇಳಿದ:—''ಸ್ವಾಮಿ ತಾವು ಪಟೇಲರು 'ಫ್ರಂಟ್ ಸೀಟಿ'ಗೆ ಬರಬೇಕು"

'ಆಗಲೇಳಯ್ಯ, ಅದಕ್ಕೇನು' ಎಂದ ನಂಜೇಗೌಡ.

ಅಷ್ಟು ಹೊತ್ತಿಗೆ ಮುದುಕಿಯೊಂದು ಬಂದಿತು. ಅಲ್ಲಿಯೇ ನಿಂತಿದ್ದ ಆರೋಗ್ಯಸಾಮಿಯನ್ನು, 'ಈ ಬಸ್ಸು ಕೊಪ್ಪಕ್ಕೆ ಹೋಗುತ್ತೇನಪ್ಪ?' ಎಂದು ಕೇಳಿತು ಮುದುಕಿ.

"ಹೌದಮ್ಮ"

"ಹತ್ತಬಹುದೇನಪ್ಪ?"

"ಇಲ್ಲಮ್ಮ ಇದು ಮದುವೆ ಮನೆಯವರಿಗೋಸ್ಕರ ಹೋಗೋ ಬಸ್ಸು."

"ನೋಡಪ್ಪ, ಮನಸ್ಸು ಮಾಡು"

"ಇಲ್ಲ ಅಜ್ಜಿ, ನಾನೇನೂ ಮಾಡೋ ಹಾಗಿಲ್ಲ".

"ನೋಡಪ್ಪ, ನನ್ನ ಮಗಳು ಪ್ಲೇಗ್ನಲ್ಲಿ ಓಗ್ಬಿಟ್ಲಂತೆ. ಅವಳ ಗಂಡ ನಿಗೂ ತಗಲೈತಂತೆ. ಎರಡು ಮಕ್ಕಳವೆ, ಕರ್ಕೊಂಡ್ಬರ್ಬೇಕು"

"ಹೌದು, ಅಜ್ಜಿ, ನಾನೇನು ಮಾಡಲಿ ಹೇಳು"

ಒಳಗಿನಿಂದ ಹೆಣ್ಣು ದನಿ ಕೇಳಿತು. ''ಹೋಗಲಿ, ಅವಳನ್ನೂ ಬಿಡಪ್ಪ"

''ಹೌದು, ಅವಳು ಬರಲೇಳು" ನಂಜೇಗೌಡ ದನಿ ಸೇರಿಸಿದ.

ಆರೋಗ್ಯಸಾಮಿ ಸುಮ್ಮನಿದ್ದ. ಮುದುಕಿ ಹತ್ತಿತು.

ಮನೆಯಿಂದ ಕೊನೆಗೆ ಹೊರಗೆ ಬಂದವನು ಮಾದೇಗೌಡ. ಚಿನ್ನಪ್ಪ ಅಣ್ಣತಮ್ಮಂದಿರನ್ನು ದೃಷ್ಟಿಸಿ ನೋಡಿದ. ಅವರಿಬ್ಬರಿಗೆ ವಯಸ್ಸಿನ ವ್ಯತ್ಯಾಸ ಬಹಳ ಇದ್ದಂತೆ ತೋರಲಿಲ್ಲ. ಮುಖದ ರೀತಿ ಒಂದೇ. ಇಬ್ಬರದೂ ಒಳ್ಳೆಯ ಕಟ್ಟಿನ ಮೈ. ಮುಖದಲ್ಲಿ ಕ್ರೌರ್ಯ ಎದ್ದು ಕಾಣುತ್ತಿತ್ತು. ಚಿಕ್ಕ

ವಯಸ್ಸಿನಲ್ಲಿ ಯೌವನ ಆ ಕ್ರೌರ್ಯವನ್ನು ಸ್ವಲ್ಪ ಹಿಂಬದಿಗೊತ್ತಿತ್ತೇನೊ, ವೃದ್ಧಾಪ್ಯದಲ್ಲಿ ಮುಖದಲ್ಲಿ ಉಳಿದಿದ್ದುದು ಅದೊಂದೇ. ಹಣೆಯಲ್ಲಿನ ಗೀರುಗಳು, ಈ ವಯಸ್ಸಿನಲ್ಲಿಯೂ ಹಲ್ಲಿಗೊತ್ತಿದ್ದ ತುಟಿ, ಒಳಕ್ಕೆ ಇಳಿದ ಗಲ್ಲ ಮುಖದ ಕ್ರೌರ್ಯದ ಛಾಯೆಯನ್ನು ಆಳವಾಗಿ ಮಾಡಿದ್ದುವು. ಕಣ್ಣಿನ ಬೆಳಕು ಹಿಂಗಿಹೋಗಿ, ಕಾಮಾಪ ಮಂಕು ಮನೆಮಾಡಿತ್ತು.

ಚಿನ್ನಪ್ಪ ತಮ್ಮನ್ನು ನೆಟ್ಟದೃಷ್ಟಿಯಿಂದ ನೋಡಿದುದನ್ನು ಕಂಡು ಮಾದೇಗೌಡರಿಗೆ ಏನೆನ್ನಿಸಿತೋ, "ನಿಮ್ಮಜಮಾನ್ರು ಏಳವ್ರೆ ಬಲೆ ಪಸಂದಾಗಿ ಬಸ್ ಬಿಡ್ತಿ ಅಂತ ಕಣಪ್ಪ. ಮಕ್ಳುಮರಿ ಅವೆ. ಸ್ವಲ್ಪ ಉಷಾರಾಗಿ ಬಿಡು," ಎಂದರು. ಚಿನ್ನಪ್ಪ ನಕ್ಕುಬಿಟ್ಟ, ಅಷ್ಟೆ.

ಬಸ್ ಹೊರಟಿತು.

ಮೊದಲನೆಯ ತಿರುವು ಇನ್ನು ಎರಡು–ಎರಡೂವರೆ ಮೈಲಿರಬೇಕು. ಚಿನ್ನಪ್ಪ ಪಕ್ಕದಲ್ಲಿದ್ದ ನಂಜೇಗೌಡನನ್ನು ಕೇಳಿದ—"ನಿಮ್ಮೂರಲ್ಲಿ ರಾಮಪ್ಪ ಅಂತಿದ್ದ, ನೆನಪೈತ?"

ನಂಜೇಗೌಡ ಹೊಗೆಸೊಪ್ಪನ್ನು ಚೀಲದಿಂದ ತೆಗದು ಆರಿಸುತ್ತ ಹೇಳಿದ "ಯಾವ ರಾಮಪ್ಪ? ಆ ಎಸರ್ನೋರು ಏಟೋ ಮಂದಿ."

"ಇಲ್ಲೇ ಆರಂಬ ಮಾಡ್ತಾ ಇದ್ದ. ಅವನ ಎಂಡ್ತಿ ನಿಂಗಮ್ಮ ಅಂತಿದ್ಳು"

"ಓ, ಆ ಒಲದಲ್ಲಿ ಒಡದಾಕಿದ್ರಲ್ಲ ಆ ರಾಮಪ್ನ?"

"ಹೂಂ, ಅದೇ ರಾಮಪ್ಪ."

ಇಷ್ಟು ಹೊತ್ತಿಗೆ ಮಾದೇಗೌಡರಿಗೆ ಇದ್ದಕ್ಕಿದ್ದಂತೆ ಕೆಮ್ಮು ಆರಂಭ ವಾಯಿತು. ನಂಜೇಗೌಡ ಚಿನ್ನಪ್ಪನನ್ನು ಬಿಟ್ಟು ಅಣ್ಣನ ಕಡೆ ತಿರುಗಿ, ಬೆನ್ನು ನೀವಿದ. ಚಿನ್ನಪ್ಪ ಬಸ್ಸಿನ ವೇಗವನ್ನು ಕಡಮೆ ಮಾಡಿದ. ಆದರೂ ಮಾದೇ ಗೌಡರ ಕೆಮ್ಮು ನಿಲ್ಲುವ ಹೊತ್ತಿಗೆ ಮೊದಲನೆಯ ತಿರುವು ದಾಟಿ ಎರಡನೆಯ ತಿರುವು ಒಂದು ಮೈಲಿ ಉಳಿದಿತ್ತು.

ಮತ್ತೆ ಚಿನ್ನಪ್ಪನೇ ಮಾತನ್ನು ಆರಂಭಿಸಿದ. "ರಾಮಪ್ಪನ ಎಂಡ್ತಿ ಏನಾದ್ಳು ಗೊತ್ತ?"

ನಂಜೇಗೌಡ ಅಣ್ಣನ ಕೆಮ್ಮು ನಿಂತ ಮೇಲೆ ಸುತ್ತಮುತ್ತ ಪ್ರಕೃತಿಯ ದೃಶ್ಯವನ್ನು ನೋಡುತ್ತಿದ್ದ. ಘಾಟಿಗಳ ಮಧ್ಯೆ ಸಾಗಿದ ರಸ್ತೆ ಅದು. ಎರಡು ಪಕ್ಕದಲ್ಲಿಯೂ ಮೋಡವನ್ನು ಮುಟ್ಟಲೆಳಸಿ ನಿಂದ ಗಿರಿ ಪಂಙ್ತಿಗಳು. ಗಿರಿಗಳಿಗೆ ತೊಡಿಸಿದ ಹಸಿರು. ಒಂದನ್ನೊಂದು ಮೀರಿಸಿ ನಿಲ್ಲಲು ಸ್ಪರ್ಧಿಸಿದ ಮರಗಳು. ಮಧ್ಯೆ ಮರಗಳನ್ನು ಹಿಮ್ಮೆಟ್ಟಿಸಿ ನಿಂತ ಬಂಡೆಗಳು. ಬಸ್ಸು ಈಗ ಮೇಲಕ್ಕೆ ಹತ್ತಿ ತಿರುಗಿಕೊಳ್ಳಬೇಕು.

ಆ ತಿರುವಿನಲ್ಲಿ ಏನಾದರೂ ಆಯ ತಪ್ಪಿದರೆ ಕಣಿವೆ ಅದನ್ನು ನುಂಗಲು ಸಿದ್ಧವಾಗಿತ್ತು.

ಚಿನ್ನಪ್ಪನ ಮಾತು ಕೇಳಿ ನಂಜೇಗೌಡ ತಿರುಗಿದ– "ಎಲ್ಲವ್ನೋ ಆ ಮುಕ್ಕಿ, ಯಾರಿಗೆ ಗೊತ್ತು? ಅವರ ಅಣ್ಣನ್ಜೊತೆಗೆ ಪಟ್ಟಣಕ್ಕೆ ಓದ್ಲ."

"ಔದಲ್ವಾ? ಅವಳು ನಮ್ಮಮ್ಮ. ನಿಮ್ಮ ವಿಷಯ ಎಲ್ಲ ಗೊತ್ತು ನನ್ಗೆ!"

ನಂಜೇಗೌಡ ಬೆಚ್ಚಿಬಿದ್ದ. ಅರ್ಧ ಕ್ಷಣ ಚಿನ್ನಪ್ಪನ ಕಡೆ ದೃಷ್ಟಿಸಿ ನೋಡಿದ. ಚಿನ್ನಪ್ಪ ಇದನ್ನು ಲಕ್ಷ್ಯ ಮಾಡದವನಂತೆ ಮುಂದೆ ರಸ್ತೆಯನ್ನು ದಿಟ್ಟಿಸುತ್ತಿದ್ದ. ಬಸ್ಸು ಪ್ರಯಾಸದಿಂದ ಮೇಲೆ ಸಾಗಿತ್ತು.

ಅಷ್ಟು ಹೊತ್ತಿಗೆ ಹಿಂದಿನಿಂದ ಮಾತು ಕೇಳಿಸಿತು. "ತುಂಬಿದ ಬಸುರಿ, ಕಣಮ್ಮ ಎಂಟು ತಿಂಗಳಾಗಿತ್ತು. ಗಂಡ ಬೇರೆ ಮಲಗವ್ನಂತೆ."

ಈ ಸಲ ಬೆಚ್ಚಿ ಬಿದ್ದವನು ಚಿನ್ನಪ್ಪ ಬಸ್ಸಿನಲ್ಲಿ 'ಆ ಮುದುಕಿ ಇದ್ದುದನ್ನು ಮರೆತೇ ಬಿಟ್ಟಿದ್ದ. ಆರೋಗ್ಯಸಾಮಿ ಹೋದರೇನೊ ಚಿಂತೆಯಿಲ್ಲವೆಂದು ನಿರ್ಧರಿಸಿದ್ದ. ಆದರೆ ಮುದುಕಿ?

ನಂಜೇಗೌಡ ಮಾದೇಗೌಡನಿಗೆ ಪಿಸು ಮಾತಿನಲ್ಲಿ ಏನೋ ಹೇಳುತ್ತಿದ್ದ. ಮುದುಕಿಯ ಧ್ವನಿ ಮತ್ತೆ ಕೇಳಿಸಿತು. "ನಂಗೇನಾಗ್ಬೇಕವ್ವ? ಕಣ್ಮುಚ್ಚಿದ್ರೆ ಸಾಕು ಅಂತ ಇದ್ದೆ. ಈಗ ಇದು ಬೇರೆ ಬಂತು."

ನಿಜ. ಆ ಮುದುಕಿಗೆ ಈ ಆಪತ್ತು ಬಾರದೇ ಇದ್ದಿದ್ದರೆ ಅವಳ ಪ್ರಾಣಕ್ಕೆ ಬೆಲೆ ಇರುತ್ತಿರಲಿಲ್ಲ. ಆದರೆ ಈಗ ಮಕ್ಕಳ ಗತಿ? ಅವರನ್ನು ನೋಡಿಕೊಳ್ಳುವುದಕ್ಕೆ ಮತ್ತೆ ಯಾರಾದರೂ ಇದ್ದಾರೆಯೋ ಇಲ್ಲವೋ!

ಎರಡನೆಯ ತಿರುವೂ ಸಾಗಿ ಹೋಯಿತು.

ಮಾದೇಗೌಡ ನಂಜೇಗೌಡ ಇಬ್ಬರ ಮುಖದಲ್ಲೂ ಭಯ ಮನೆ ಮಾಡಿತ್ತು. ಏನು ಮಾಡಬೇಕೆಂದು ಇಬ್ಬರಿಗೂ ತೋರದು. ಪಿಸು ಮಾತಿನಲ್ಲಿ ಪರಸ್ಪರ ಸಲಹೆ ಕೇಳಿಕೊಂಡರು. "ಬಸ್ ನಿಲ್ಲಿಸು ಎಂದು ಹೇಳುವುದೆ? ನಿಲ್ಲಿಸಿ ಆ ಮೇಲೆ ಮಾಡುವುದೇನು? ಅವನು ನಿಲ್ಲಿಸದಿದ್ದರೆ ತಾವೇನು ಮಾಡಲು ಸಾಧ್ಯ? ಅವನು ಬಸ್ ನಿಲ್ಲಿಸಿದರೆ ಸಾಕು, ನಾವು ಇಷ್ಟು ಜನ ಇದ್ದೇವೆ ಭಯವಿಲ್ಲ. ಆ ಮೇಲೆ ನೋಡಿಕೊಳ್ಳೋಣ" ಎಂದು ಪಿಸುಗುಟ್ಟಿದ ನಂಜೇಗೌಡ. ಮಾದೇಗೌಡ ಸುಮ್ಮನೆ ತಲೆಯ ಲ್ಲಾಡಿಸಿದ. ಚಿನ್ನಪ್ಪ ಬಸ್ ನಿಲ್ಲಿಸದಿದ್ದರೆ ಮಾಡುವುದೇನು? ಅವನೊಡನೆ ಮಾತನಾಡಿ ಪುಸಲಾಯಿಸಬೇಕೆಂದರೆ ಅದಕ್ಕೂ ಸಮಯವಿಲ್ಲ. ಮಾದೇಗೌಡ ಒಂದು ಸಲ ಹಿಂದಕ್ಕೆ ತಿರುಗಿ ನೋಡಿದ, ಮದುಮಗ ತನ್ನ ತಂಗಿಯೊಡನೆ ಮಾತನಾಡುತ್ತಿದ್ದ. ಅವಳು ಅವನನ್ನು ಹಾಸ್ಯಮಾಡುತ್ತಿದ್ದಳೇನೊ ಅವನೂ ನಗುತ್ತಿದ್ದ. ಮಾದೇಗೌಡರ ಕಣ್ಣಿನಲ್ಲಿ ನೀರು ತಂಬಿತು, ತಿರುಗಿ ಬಿಟ್ಟರು.

ಎರಡನೆಯ ತಿರುವೂ ಸಾಗಿ ಹೋದದ್ದು ಕೂಡಲೇ ಚಿನ್ನಪ್ಪನ ಗಮನಕ್ಕೆ ಬರಲಿಲ್ಲ. ಸ್ವಭಾವಸಿದ್ಧವಾದ ಕೌಶಲ್ಯದಿಂದ ಬಸ್ಸನ್ನು ಆ ತಿರುವಿನಲ್ಲಿ ನಡೆಸಿದ್ದ. ಅದು ದಾಟಿ ಹೋದ ಮೇಲೆ ಆ ತಿರುವೂ ಹಿಂದುಳಿಯಿತು ಎಂಬುದು ಗೊತ್ತಾಯಿತು. ಮೂರನೆಯ ತಿರುವು ಇನ್ನೆರಡು ಮೈಲಿ.

ಮುದುಕಿಯ ಮಾತು ಸಾಗಿತ್ತು. "ಒಂದು ಹೆಣ್ಣು, ಒಂದು ಗಂಡು ಮಗು ಐತೆ. ನನಗೂ ಇನ್ಯಾರೂ ಮಕ್ಳಿಲ್ಲ ಕಣವ್ವ. ಗಂಡ ಓದ್ಮೇಲೆ ಏನೇನೊ ಕಷ್ಟ ಅನುಬವ್ಸಿ ಬೆಳಸ್ದೆ ಆ ಉಡ್ಗೀನ. ಆ ಮಕ್ಳಿಗೂ ಬೇರೆ ಗತಿ ಇಲ್ಲ."

ಮುದುಕಿಯನ್ನು ಬಸ್ಸಿನಲ್ಲಿ ಕೂಡಿಸಿದ ಆರೋಗ್ಯಸಾಮಿಯನ್ನು ಮನಸ್ಸಿನಲ್ಲೇ ಬೈದುಕೊಂಡ ಚಿನ್ನಪ್ಪ. ಮೂರನೆಯ ತಿರುವು ನಿಧಾನವಾಗಿ ಹತ್ತಿರ ಬರುತ್ತಿತ್ತು. ಕಡೆಗಣ್ಣಿನಿಂದ ಪಕ್ಕದಲ್ಲಿ ಕುಳಿತಿದ್ದ ಅಣ್ಣತಮ್ಮಂದಿ

ರನ್ನು ನೋಡಿದ. ಇಬ್ಬರ ಮುಖವೂ ಬೆವರಿನಲ್ಲಿ ಮಿಂದಂತಿದ್ದುವು. ತನ್ನ ತಾಯಿಯನ್ನು ಜ್ಞಾಪಿಸಿಕೊಂಡ. ಅವಳ ದಾರುಣ ಜೀವನದ ರುದ್ರ ಸನ್ನಿವೇಶಗಳೆಲ್ಲ ಅವನ ಮನಸ್ಸಿನಲ್ಲಿ ಹಾದು ಹೋದುವು. ತಾಯಿ ಎಷ್ಟು ಕಷ್ಟದಿಂದ ತನ್ನನ್ನು ಬೆಳಸಿದಳು! ತೀರ ಚಿಕ್ಕ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡರೂ ತನಗಾಗಿ ಬಾಳಿದಳು— ಈ ಮುದುಕಿ ತನ್ನ ಮಗಳಿಗಾಗಿ ಬಾಳಿದಂತೆ. ಆ ಯೋಚನೆ ಬರುತ್ತಲೇ ಅವನ ಮೈ ನಡುಗಿತು. ಕಷ್ಟದಿಂದ, ಪ್ರೇಮದಿಂದ ಮುದುಕಿ ಬೆಳೆಸಿದ ಮಗಳು ಕಣ್ಮುಚ್ಚಿ, ಈಗ ಅವಳ ಅನಾಥ ಮಕ್ಕಳು ಮುದುಕಿಯ ಪಾಲಿಗೆ ಬಂದಿವೆ. ಮುದಕಿಗೇನಾದರೂ ಆದರೆ ಈ ಮಕ್ಕಳ ಗತಿ ಏನು? ಆದರೆ ಅದಕ್ಕಾಗಿ ತನ್ನ ಸೇಡನ್ನು ತೀರಿಸಿಕೊಳ್ಳದೆ ಬಿಡುವುದೆ? ಮತ್ತೆ ಇಂತಹ ಅವಕಾಶ ಸಿಕ್ಕೀತೇ?

ಮುದುಕಿ ಹೇಳುತ್ತಿತ್ತು. "ಕೊಪ್ಪದಿಂದ ಎಂಟು ಮೈಲಿ ಓಗ್ಬೇಕು ಹಳ್ಳಿಗೆ"

ಹುಂ, ಮುದುಕಿ ಎಷ್ಟು ವಿಶ್ವಾಸದಿಂದ, ಕೊಪ್ಪ ತಲುಪುತ್ತೇನೆ ಎಂಬ ಧೈರ್ಯದಿಂದ ಮಾತಾಡುತ್ತಿದ್ದಾಳೆ! ಹಳ್ಳಿಯಲ್ಲಿ ಅವಳ ಮಗಳ ಗಂಡ ಎಷ್ಟು ಕಾತರದಿಂದ ಕಾಯುತ್ತಿದ್ದಾನೊ—ಮುದುಕಿ ಬಂದರೆ ಮಕ್ಕಳನ್ನು ಅವಳ ಮಡಿಲಲ್ಲಿಟ್ಟು ನಿಶ್ಚಿಂತೆಯಾಗಿ ಕಣ್ಮುಚ್ಚಬಹುದೆಂದು. ಆ ಮಕ್ಕಳು ಅವರಿವರ ಕೈಯಲ್ಲಿ ಸಿಕ್ಕಿ ಎಷ್ಟು ಆತುರದಿಂದ ಅಜ್ಜಿಯ ಬರವನ್ನು ಎದಿರುನೋಡುತ್ತಿವೆಯೊ!

ಮತ್ತೆ ಚಿನ್ನಪ್ಪ, ಮಾದೇಗೌಡ ನಂಜೇಗೌಡರನ್ನು ನೋಡಿದ. ಮೂರನೆಯ ತಿರುವು ಹತ್ತಿರ ಬರುತ್ತಿತ್ತು. ಅವರಿಬ್ಬರ ನೋಟ ಅವನ ಮುಖದಲ್ಲಿ ನೆಟ್ಟಿತ್ತು.

ಮೂರನೆಯ ತಿರುವನ್ನೂ ಬಸ್ಸು ಸುರಕ್ಷಿತವಾಗಿ ದಾಟಿತು.

ಚಿನ್ನಪ್ಪನ ಮನಸ್ಸಿನಲ್ಲಿ ಸಾವಿರ ಚೇಳು ಕಡಿಯುತ್ತಿದ್ದುವು. "ಏನು ಹುಚ್ಚು ಕೆಲಸ ಇದು! ಗುರುತು ಪರಿಚಯವಿಲ್ಲದ ಯಾವುದೇ ಮುದುಕಿಯ ಕತೆ ಕೇಳಿ ಇಂತಹ ಅವಕಾಶ ಕಳೆದುಕೊಳ್ಳುವುದೇ! ಮೂರ್ಖ ನೀನು" ಎಂದು ಕೂಗುತ್ತಿತ್ತು ಮೈಯ್ಯಲ್ಲಿ ಓಡುತ್ತಿದ್ದ ರಕ್ತ. "ಹೂಂ, ಕೊಪ್ಪಕ್ಕೆ ಇನ್ನು

ಹನ್ನೆರಡು ಮೈಲಿ. ಅಲ್ಲಿಗೆ ಮುಟ್ಟಿದ ಮೇಲೆ ನಿನ್ನ ಗತಿ ಏನು! ಅವರಿಗೆ ಆಗಲೇ ನೀನು ನಿಂಗವ್ವನ ಮಗ ಎಂದು ಹೇಳಿದ್ದಿಯೆ, ಕೊಪ್ಪ ತಲುಪಿದ ಮೇಲೆ ಅವರು ನಿನ್ನನ್ನು ಹಾಸ್ಯಮಾಡುವುದಿಲ್ಲವೆ?" ಎಂದು ಕೇಳಿತು ಹೃದಯ. "ಯಾರು ಏನೇ ಹೇಳಲಿ, ಆ ಮುದುಕಿಯ ಮೊಮ್ಮಕ್ಕಳಿಗೆ ಜೀವದಾನವಾಯಿತು. ನಿನ್ನ ಸೇಡಿಗಿಂತ ಅವುಗಳ ಬಾಳು ದೊಡ್ಡದು" ಎಂದು ಸಮಾಧಾನ ಹೇಳಿತು ಮನಸ್ಸು. "ಹೂಂ, ಹೌದು" ಎಂದುಕೊಂಡ ಚಿನ್ನಪ್ಪ.

'ಧಡ್'

ಬಸ್ಸಿನ ಹಿಂದಿನ ಚಕ್ರದ ಉಸಿರಡಗಿತ್ತು. ಚಕ್ರ ತಗ್ಗುತ್ತಲೇ ಬಸ್ ನಡುಗಿತು. ಬಸ್ಸಿನಲ್ಲಿ ಕೂತವರೆಲ್ಲ 'ಅಯ್ಯೋ' ಎಂದರು. ಚಿನ್ನಪ್ಪ ಹಲ್ಲು ಕಚ್ಚಿ 'ಬ್ರೇಕ್' ಹಾಕಲು ಯತ್ನಿಸಿದ. ಆಗಲಿಲ್ಲ. ಬಸ್ ರಸ್ತೆಯ ಅಂಚಿನಲ್ಲಿ ಜಾರಿ ಕೆಳಗುರುಳಿತು.

* * *

ಎರಡು ದಿನ ಕಳೆದಿತ್ತು. ಪೋಲೀಸ್ ಇನ್ಸ್‌ಪೆಕ್ಟರು, ಬಸ್ ಕಂಪೆನಿ ಮಾಲೀಕರು, ಮಾದೇಗೌಡನ ಮಗ, ಎಲ್ಲ ಮಾತನಾಡುತ್ತ ಕುಳಿತಿದ್ದರು.

"ಸದ್ಯ, ನೀವು ಉಳಿದದ್ದು ನಮಗೆಲ್ಲ ಬಹಳ ಸಂತೋಷ," ಮಾಲೀಕರೆಂದರು.

"ಬದುಕಿ ಬಾಳಬೇಕಾದವರು ಯಾರೂ ಹೋಗಲಿಲ್ಲ, ಅದೇ ಪುಣ್ಯ. ನಂಜೇಗೌಡರು, ಮಾದೇಗೌಡರು ಇಬ್ಬರಿಗೂ ವಯಸ್ಸಾಗಿತ್ತು, ಮುದುಕಿಯೂ ಇವತ್ತಲ್ಲ ನಾಳೆ ಕಣ್ಮುಚ್ಚುತ್ತಿತ್ತು." ಇನ್ಸ್‌ಪೆಕ್ಟರ್ ನುಡಿದರು.

"ಡ್ರೈವರ್?" ಮಾದೇಗೌಡನ ಮಗ ಕೇಳಿದ.

"ಅವನಿಗೆ ಅಣ್ಣ ತಮ್ಮ ಯಾರೂ ಇಲ್ಲ, ತಂದೆತಾಯಿಯೂ ಇಲ್ಲ, ಮದುವೆ ಆಗಿರಲಿಲ್ಲ. ನಮ್ಮ ಕಂಪೆನೀಲೆಲ್ಲ ಬಹಳ ಗಟ್ಟಿಗ ಅನ್ನಿಸಿಕೊಂಡಿದ್ದ ಅವನು, ಅದೇ ನನಗೆ ದುಃಖ," ಮಾಲೀಕರು ಉತ್ತರ ಕೊಟ್ಟರು.

"ಪಾಪ, ಚೆನ್ನಾಗಿಯೇ ಬಸ್ ಬಿಟ್ಟ. ಹಿಂದಿನ ಚಕ್ರ ಕೈಕೊಡದೇ ಇದ್ದಿದ್ದರೆ ಹೋಗ್ತಾ ಇದ್ವಿ ಕೊಪ್ಪಕ್ಕೆ," ಮಾದೇಗೌಡನ ಮಗ ಹೇಳಿದ.

"ಅಂತೂ ಚಿನ್ನಪ್ಪ ಚಿನ್ನದಂತಹ ಮನುಷ್ಯ," ಬಸ್ ಮಾಲೀಕರೆಂದರು.

ನೀರಿನಲ್ಲಿ ಹುಟ್ಟಿದ್ದು

ನಾರಾಯಣರಾಯರು ಯೋಚನೆಯಲ್ಲಿ ಮಗ್ನರಾಗಿದ್ದರು. ಎದುರಿಗಿದ್ದ 'ಕ್ಯಾಲೆಂಡರ್' ಆಗಲೇ ಮೇ ತಿಂಗಳ ಕೊನೆ ಬಂದಿತೆಂದು ಸಾರುತ್ತಿತ್ತು. ಮೇ ತಿಂಗಳಿನೊಡನೆ ವೈಶಾಖ ಮಾಸವು ಮುಗಿಯುತ್ತ ಬಂದಿತೆಂಬುದನ್ನೂ ಅವರ ಮನಸ್ಸು ಒತ್ತಿ ಹೇಳುತ್ತಿತ್ತು. ಈ ಜ್ಯೇಷ್ಠ ಮಾಸ ಮುಗಿಯುವುದರಲ್ಲಾದರೂ ಮಗಳ ಕೊರಳಲ್ಲಿ ಮಂಗಳ ಸೂತ್ರ ಬಿದ್ದರೆ ಸಾಕೆಂದು ಹಂಬಲಿಸುತ್ತಿದ್ದರು. ಆ ವರ್ಷ ಇಂಟರ್ಮೀಡಿಯೆಟ್ ಪರೀಕ್ಷೆಗೆ ಕುಳಿತಿದ್ದಳು, ಉತ್ತೀರ್ಣಳಾಗುವುದರಲ್ಲಿ ಸಂದೇಹವೇ ಇರಲಿಲ್ಲ. ಹದಿನೇಳು ವರ್ಷ ಮುಗಿದು ಹದಿನೆಂಟರಲ್ಲಿ ಕಾಲಿಟ್ಟಿದ್ದಳು. ಮೂರು ವರ್ಷದಿಂದ ವರ ಹುಡುಕಿ ಬೇಸತ್ತಿದ್ದರು ರಾಯರು. ಇನ್ನು ಮೂರೇ ತಿಂಗಳಿಗೆ ರಾಯರು ಸರ್ಕಾರಿ ಕೆಲಸದಿಂದ ನಿವೃತ್ತರಾಗಬೇಕಾಗಿತ್ತು. ಆದುದರಿಂದ ಈ ವರ್ಷವಾದರೂ ಅವಳ ವಿವಾಹವನ್ನು ಮಾಡಿ ಕೃತಕೃತ್ಯರಾಗಬೇಕೆಂದು ರಾಯರ ಯತ್ನ.

ಕಮಲ—ಮಗಳು—ಕಾಫಿ ತೆಗೆದುಕೊಂಡು ಕೊಠಡಿಗೆ ಪ್ರವೇಶಿದಳು.

"ರಾಜು ಎದ್ದನೇನಮ್ಮ?"

"ಇನ್ನೂ ಇಲ್ಲ, ಅಣ್ಣ"

ಕಾಫಿಯ ಬಟ್ಟಲನ್ನು ಮೇಜಿನ ಮೇಲಿಟ್ಟು ಮಾಯವಾದಳು ಮಗಳು.

ರಾಯರು ಮಗಳನ್ನೇ ದಿಟ್ಟಿಸಿ ನೋಡುತ್ತಿದ್ದರು. ಕಮಲ ತೀರ ಸುಂದರಿಯೇನಲ್ಲ. ತಾವರೆಯಂತಹ ಕಣ್ಣು, ಸಂಪಿಗೆಯಂತಹ ಮೂಗು, ಗುಲಾಬಿಯ ಕೆನ್ನೆ, ದಾಳಿಂಬೆಯ ಬೀಜದಂತಹ ದಂತಪಂಕ್ತಿ, ಪಡೆದು ಬಂದ ದೇವ ಕನ್ನೆಯಲ್ಲ. ಆದರೆ ಎಂತಹರಿಗೂ ಸೌಂದರ್ಯವನ್ನು ತಂದುಕೊಡುವ ವಯಸ್ಸಿನಲ್ಲಿದ್ದಳು. ವಯಸ್ಸಿಗೆ, ವಿದ್ಯೆಗೆ ತಕ್ಕ ವೈಯಾರ, ಮಂದಗಮನ, ಕಣ್ಣಿನ ಚಾಂಚಲ್ಯ ಸೇರಿದ್ದುವು.

ರಾಜು, ರಾಯರ ತಂಗಿಯ ಮಗ. ಆ ವರ್ಷ ಫೈನಲ್ ಆನರ್ಸಿನಲ್ಲಿದ್ದನು. ಹುಡುಗ ಬುದ್ಧಿವಂತನೆಂದು ಅವನ ಜೊತೆಯವರು, ಉಪಾಧ್ಯಾಯರು ಎಲ್ಲ ಗೌರವಿಸುತ್ತಿದ್ದರು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವನೆಂಬುದರಲ್ಲಿ ಯಾವ ಸಂದೇಹವೂ ಇರಲಿಲ್ಲ. ಆದರೆ ಮೊದಲನೆಯ ತರಗತಿಯಲ್ಲಿ ತೇರ್ಗಡೆಯಾಗುವೆನೇ ಎಂದು ಅವನು ಅನುಮಾನಿಸುತ್ತಿದ್ದ. ರಾಯರಿಗೆ ಮಗಳನ್ನು ರಾಜುವಿಗೆ ಕೊಡಬೇಕೆಂದು ಆಸೆ; ಅವರ ತಂಗಿಗೂ ಅದು ಒಪ್ಪಿಗೆಯೇ. "ರಾಜು ಒಪ್ಪಿದರೆ ನನ್ನ ಅಡ್ಡಿಯೇನೂ ಇಲ್ಲ." ಎಂದಿದ್ದರು ತಂಗಿಯ ಗಂಡ. ಆದರೆ ಅವರು ಸೋದರಳಿಯನೊಡನೆ ಈ ವಿಷಯ ಪ್ರಸ್ತಾಪಿಸಿದರೆ ನೇರವಾಗಿ ಏನೂ ಉತ್ತರ ಕೊಡದೆ ಮಾತು ದಾಟಿಸುವನು ರಾಜು.

ಹಿಂದಿನ ದಿನ ಸಂಜೆ ರಾಯರ ಮನೆಗೆ ಬಂದಿದ್ದ ರಾಜು. ರಾತ್ರಿ ಅಲ್ಲಿಯೇ ಇದ್ದು ಬೆಳಗ್ಗೆ ಹೋಗುವಂತೆ ಬಲವಂತಪಡಿಸಿದರು ರಾಯರ ಹೆಂಡತಿ. ರಾಜು ಸೋದರ ಮಾವನನ್ನು ನೋಡಲು ಆತುರದಿಂದ ಬಂದಿದ್ದ; ಅವನು ಬಂದಾಗ ರಾಯರು ಮನೆಯಲ್ಲಿರಲಿಲ್ಲ. ಅವರು ಹಿಂದಿರುಗಿದಾಗ ಆಗಲೇ ರಾತ್ರಿ ಒಂಬತ್ತು ಗಂಟೆ. ರಾಯರ ಮನೆ ಮಲ್ಲೇಶ್ವರದ ಹದಿನೈದನೇ ಕ್ರಾಸ್ ರಸ್ತೆಯಲ್ಲಿ. ರಾಜುವಿನ ಮನೆ ನರಸಿಂಹರಾಜ ಕಾಲೊನಿಯಲ್ಲಿ "ರಾತ್ರಿ ಇಷ್ಟು ಹೊತ್ತಿನಲ್ಲಿ ಆರು ಮೈಲಿ ಹೋಗಬೇಕೆ? ಬೆಳಗ್ಗೆ ಹೋಗುವಿಯಂತೆ" ಎಂದರು ರಾಯರು. ಸೋದರಮಾವ–ಸೋದರತ್ತೆಯ ಮಾತಿಗೆ ತಲೆಬಾಗಿ ನಿಂತ ರಾಜು. ಆ ಮಾತು ಈ ಮಾತು ಆಡುತ್ತ ರಾಯರ ಹೆಂಡತಿ, "ಇನ್ನೇನು ಓದಾಯಿತಲ್ಲಪ್ಪ, ಮದುವೆ ಯಾವಾಗ?" ಎಂದರು.

"ಆಗವೆ ಇರುತ್ತದೆಯೇ ಅತ್ತೆ? ಒಂದಲ್ಲ ಒಂದು ದಿನ ಆಗುತ್ತೆ"

"ಓಹೊ, ಮದುವೆಯಾಗಲು ಒಪ್ಪಿಗೆ ಇಲ್ಲದೆ ಇಲ್ಲ" ಎಂದು ಗ್ರಹಿಸಿದರು ರಾಯರ ಹೆಂಡತಿ. ಗಟ್ಟಿಯಾಗಿ, "ಆಗದೆ ಹೋಗುತ್ತದೆಯೇ? ಯಾವಾಗ ಆಗುತ್ತದೆ ಎಂದು ಕೇಳಿದೆ" ಎಂದರು.

ರಾಜು ಸುಮ್ಮನಿದ್ದ.

"ನಮ್ಮ ಕಮಲೂ ನಿನ್ನನ್ನೇ ಮಾಡಿಕೊಳ್ಳುತ್ತೀನಿ ಅಂತ ತಪಸ್ಸು ಮಾಡುತ್ತಾಳಪ್ಪ"

"ಥೂ ಹೋಗೇ, ಶುದ್ಧ ಸುಳ್ಳು" ಎನ್ನುತ್ತ ಎದ್ದು ಹೋದಳು ಕಮಲು. ರಾಜುವಿನ ಕಣ್ಣು ಕಮಲೂ ಕಡೆಗೆ ಹೋಗಲಿಲ್ಲವೆಂಬುದನ್ನು ರಾಯರ ಹೆಂಡತಿ ಗಮನಿಸದಿರಲಿಲ್ಲ.

"ಬೇಗ ಮದುವೆ ಮಾಡಬೇಕು; ಇರುವವನು ಒಬ್ಬನೇ ಮಗ ಎಂದರು ಮೊನ್ನೆ ನಿಮ್ಮ ತಾಯಿ. ಹಿಂದಿನ ಬಾಂಧವ್ಯ ಬಿಟ್ಟು ಹೋಗಕೂಡದು ಅಂತ ಅವರಿಗೂ ಒಪ್ಪಿಗೆ. ನೀನು ಮನಸ್ಸು ಮಾಡಬೇಕಪ್ಪ"

"ಈಗ ಮದುವೆಗೇನು ಆತುರ ಅತ್ತೆ?"

ಈ ಚರ್ಚೆ ಮುಂದುವರಿಸಿ ಪ್ರಯೋಜನವಿಲ್ಲವೆಂದು ಮನಗಂಡು, ಮಾತನ್ನು ಆಕೆ ಬೇರೆ ಕಡೆ ತಿರುಗಿಸಿದರು. ರಾತ್ರಿ ಗಂಡನಿಗೆ ಸೂಕ್ಷ್ಮವಾಗಿ, "ರಾಜುವಿಗೆ ಮದುವೆಯೇನೂ ಬೇಡವಾಗಿಲ್ಲ. ಆದರೆ ಕಮಲೂನ ಮಾಡಿಕೊಳ್ಳೋದು ಅಂದರೆ ಮೂಗೆಳೆಯುತ್ತಾನೆ" ಎಂದು ತಿಳಿಸಿದರು.

ರಾಯರ ಚಿಂತೆಗೆ ಇದೇ ಕಾರಣ. ಏನಾದರೂ ಮಾಡಿ ರಾಜೂನ ಒಪ್ಪಿಸಿದರೆ ಕೃತಾರ್ಥನಾದೆ ಎಂದು ಯೋಚಿಸುತ್ತಿದ್ದರು. ಕೊನೆಗೆ ತಮ್ಮ ಚಿಕ್ಕ ಮಗ ಕಿಟ್ಟುವನ್ನು ಕರೆದು, "ಈ ಕಾಗದ ಸೀತಾರಾಮಯ್ಯನಿಗೆ ಕೊಟ್ಟು ಬಾ" ಎಂದು ಕಳುಹಿಸಿದರು. ಐದು ನಿಮಿಷದಲ್ಲಿ ಹುಡುಗ ಬಂದು, "ಕೊಟ್ಟೆ ಅಣ್ಣ, ಆಗಬಹುದು ಅಂತ ಹೇಳು ಅಂದರು" ಎಂದ.

ರಾಜು ನಾಚುತ್ತ ಕೊಠಡಿಯೊಳ ಹೊಕ್ಕ. ಎಲ್ಲರೂ ಎದ್ದ ಮೇಲೆ ಇಷ್ಟು ತಡವಾಗಿ ಎದ್ದೆನಲ್ಲ ಎಂದು ನಾಚಿಕೆಯಾಗಿತ್ತು ಅವನಿಗೆ.

"ಓ ಬಾರಯ್ಯ ದೊರೆ, ಕಾಫಿ ಆಯಿತೊ?" ರಾಯರು ಸೋದರಳಿಯನನ್ನು ಸ್ವಾಗತಿಸಿದರು.

"ಇಲ್ಲ, ಆಗತ್ತೆ. ಏಳೋದು ಬಹಳ ಹೊತ್ತಾಗಿ ಹೋಯಿತು. ಹಾಳು ನಿದ್ದೆ ಬಂದು, ಹೊತ್ತೇ ಗೊತ್ತಾಗಲಿಲ್ಲ."

"ಅಯ್ಯೋ ಹೋಗಲಿ ಬಿಡು. ಏನು ಮಾಡೋದಕ್ಕೆ ಸಾಧ್ಯ? ಅದಲ್ಲದೆ ಈಗ ನಿರಾಲೋಚನೆಯಾಗಿ ನಿದ್ದೆ ಮಾಡಿದ ಹಾಗೆ, ಆ ಮೇಲೆ ಸಾಧ್ಯವೆ?"

ಕಮಲು ಕಾಫಿ ತಂದು ಮೇಜಿನ ಮೇಲಿಟ್ಟು ಹೋದಳು. ರಾಯರು ಆ ಈ ಮಾತು ಆಡುತ್ತ "ನಿಮ್ಮ ರಿಸಲ್ಟ್ಸ್ ಯಾವಾಗ?" ಎಂದರು.

"ಇನ್ನೇನು ಎರಡು—ಮೂರು ದಿನದಲ್ಲಿ. ಅದೇ ಯೋಚನೆಯಾಗಿದೆ."

"ನಿನಗೇನಯ್ಯ ಯೋಚನೆ? ಕಬ್ಬು ಸಿಗಿದ ಹಾಗೆ ಸಿಗೀತಿ ಫಸ್ಟ್ ಕ್ಲಾಸ್‌ನ"

"ಇಲ್ಲ ಮಾವ, ಅದೇ ಸ್ವಲ್ಪ ಅನುಮಾನ"

"ನೀವು ಈಗಿನ ಕಾಲದ ಹುಡುಗರಪ್ಪ. ಇದೆಲ್ಲ, ನಿಮಗೆ ಸರಿ ಹೋಗೋದಿಲ್ಲ. ಇಲ್ಲದೇ ಇದ್ದಿದ್ದರೆ—"

ರಾಜು ಕುತೂಹಲ ಕೆರಳಿತು. "ಇಲ್ಲದೇ ಇದ್ದಿದ್ದರೆ—?"

"ನಮ್ಮ ಸೀತಾರಾಮಯ್ಯನ್ನ ಕೇಳಬಹುದಾಗಿತ್ತು."

"ಅಂದರೆ—?"

"ನಮ್ಮ ಸೆಕ್ರೆಟೇರಿಯಟ್ಟನಲ್ಲಿ ಸೀತಾರಾಮಯ್ಯ ಅಂತ ಗುಮಾಸ್ತರಿದ್ದಾರೆ. ಜೋತಿಷ್ಯ, ಹಸ್ತ ಸಾಮುದ್ರಿಕ ಎರಡರಲ್ಲೂ ಮಹಾಘಟ್ಟಿಗ. ಅವನು ಹೇಳಿದ್ದು ಸುಳ್ಳಾದದ್ದು ಇದುವರೆಗೆ ಕೇಳಿಲ್ಲ ನಾನು. ಅವನಿಗೆ ಕೈ ತೋರಿಸಬಹುದಾಗಿತ್ತು."

ರಾಜು 'ಈಗಿನ ಕಾಲದ ಹುಡುಗ'ನೇ, ರಾಯರೆಂದಂತೆ. ಆದರೆ ತನ್ನ ಪರೀಕ್ಷೆಯ ಫಲಿತಾಂಶವನ್ನು ಈಗಲೇ ಹೇಳುವ ಬ್ರಹ್ಮ ಎದುರಿಗಿದ್ದಾನೆ ಎಂದಾಗ ಅವನ 'ಈಗಿನ ಕಾಲ'ದ ರೀತಿ ಸ್ವಲ್ಪ ಹಿಂದಕ್ಕೆ ಸರಿಯಿತು. ರಾಯರೂ ಮೌನವನ್ನು ಗಮನಿಸದಿರಲಿಲ್ಲ.

"ಹೋಗೋಣವೇನು ಬೇಕಾದರೆ ಅವರ ಮನೆಗೆ? ಮುಂದಿನ ರಸ್ತೆಯಲ್ಲೇ ಅವರ ಮನೆ. ಇಷ್ಟು ಹೊತ್ತಿನಲ್ಲಿ ಮನೆಯಲ್ಲಿರುತ್ತಾರೆ."

ರಾಜುವಿಗೆ 'ಹೂಂ' ಎಂದು ಹೇಳಲು ಬಿಗುಮಾನ, ಈ ಶಾಸ್ತ್ರಗಳಲ್ಲೆಲ್ಲ ತನಗೆ ನಂಬಿಕೆ ಇದೆ ಅಥವ ತಾತ್ಕಾಲಿಕವಾಗಿಯಾದರೂ ಬಂದಿದೆ ಎಂದು ತೋರಿಸಿಕೊಳ್ಳಲು ಅವನ ಮನಸ್ಸು ಒಪ್ಪಲಿಲ್ಲ. ರಾಯರೂ ಇದನ್ನು ಅರ್ಥ ಮಾಡಿಕೊಂಡು, 'ಸರಿ ಹಾಗಾದರೆ, ಹೋಗೋಣ ಬಾ' ಎಂದರು.

"ಓಹೋಹೋ, ಬನ್ನಿ ಸಾರ್"

ರಾಯರನ್ನೂ ರಾಜುವನ್ನೂ ಸ್ವಾಗತಿಸಿದ ವ್ಯಕ್ತಿ ಒಳ್ಳೆ ಕಟ್ಟು ಮಸ್ತಾದ ಆಳು. ಮುಖದಲ್ಲಿ ವಿಭೂತಿ ರಾರಾಜಿಸುತ್ತಿತ್ತು.

"ದಯಮಾಡಿಸಿ. ಇವರು ಯಾರೋ?"

"ಇವನು ನನ್ನ ತಂಗಿ ಮಗ, ರಾಜಾರಾವ್ ಅಂತ. ನಿಮಗೆ ಕೈ ತೋರಿಸ ಬೇಕು ಅಂತ ಕರೆದುಕೊಂಡು ಬಂದೆ. ಬಿಡುವಿದ್ದರೆ—"

"ಓ ಅದಕ್ಕೇನು ಸಾರ್, ಸರಿಯಾದ ಸಮಯಕ್ಕೆ ದಯಮಾಡಿಸಿದಿರಿ. ಈಗ ತಾನೆ ದೇವರಪೂಜೆ ಮುಗಿಸಿದೆ," ಎಂದು ಹೇಳಿ ಸೀತಾರಾಮಯ್ಯ ಒಳ ಗಡೆ ಹೋಗಿ ಎರಡು ಹೂವು ತಂದು ಇಬ್ಬರಿಗೂ ಕೊಟ್ಟು, "ಎಲ್ಲಿ ಸಾರ್, ಬಲಗೈ ಕೊಡಿ" ಎಂದರು.

'ಕೈ ತೋರಿಸಿ ಅವಲಕ್ಷಣ ಎನ್ನಿಸಿಕೊಂಡರು' ಎಂಬ ಗಾದೆ ಮನಸ್ಸಿನಲ್ಲಿ ನುಸುಳಿ ಹೋಯಿತು ರಾಜೂಗೆ.

ಸೀತಾರಾಮಯ್ಯ ಕೈಯ್ಯನ್ನೇ ದೃಷ್ಟಿಸಿ ನೋಡುತ್ತಿದ್ದರು. ಆ ಮೇಲೆ ಕೈ ಹೀಗೆ ತಿರುಗಿಸಿದರು, ಹಾಗೆ ಹೊರಳಿಸಿದರು, ಬೆರಳ ಸಂದುಗಳನ್ನು ಪರೀಕ್ಷಿಸಿದರು, ಉಗುರನ್ನು ನೋಡಿದರು. ರಾಜು ರಾಯರ ಕಡೆ ನೋಡಿದ. ಅವರು ಕೊಟಡಿಯಲ್ಲಿದ್ದ ಚಿತ್ರಗಳನ್ನು ಪರೀಕ್ಷಿಸುತ್ತಿದ್ದರು.

"ತಾವೇನೂ ಪರೀಕ್ಷೆಯ ವಿಷಯ ಯೋಜನೆ ಇಟ್ಟುಕೊಳ್ಳಬೇಡಿ, ಸಾರ್. ಖಂಡಿತ ಫಸ್ಟ್‌ಕ್ಲಾಸಿನಲ್ಲಿ ತೇರ್ಗಡೆಯಾಗತ್ತೆ."

ರಾಜುವಿನ ಮುಖ ಅರಳಿತು. ರಾಯರು ಕಣ್ಣುಕೊನೆಯಿಂದಲೇ ಅದನ್ನು ಗಮನಿಸಿದರು.

"ತಮಗೆ ವಯಸ್ಸೆಷ್ಟು ಸಾರ್?"

"ಇಪ್ಪತ್ತೆರಡು."

"ಅಂದರೆ?"

"ಇಪ್ಪತ್ತೊಂದು ತುಂಬಿ ಆರು ತಿಂಗಳಾಯಿತು."

"ಸ್ವಲ್ಪ ತಾಳಿ" ಎಂದು ಸೀತಾರಾಮಯ್ಯ ಒಳಗೆ ಹೋಗಿ ಓಲೆಗರಿ

ಗ್ರಂಥವೊಂದನ್ನು ತಂದರು. ಅದರ ಮೇಲಿದ್ದ ಅರಿಶಿನ ಕುಂಕುಮದಿಂದಲೇ ಅದನ್ನು ದೇವರ ಮನೆಯಿಂದ ತಂದರೆಂಬುದು ವ್ಯಕ್ತವಾಯಿತು.

"ಎಲ್ಲಿ, ಈ ಕಡ್ಡಿ ಪುಸ್ತಕದಲ್ಲಿ ಹಾಕಿ"

ರಾಜು ಅದರಂತೆ ಮಾಡಿದ. ಸೀತಾರಾಮಯ್ಯನವರು ಪುಸ್ತಕ ತೆರೆದು ನೋಡಿದರು, 'ಪಿಟಿಪಿಟಿ' ಎಂದು ತುಟಿಯಲುಗಾಡಿಸಿದರು. ಆ ಮೇಲೆ 'ಸರಿ ಸರಿ' ಎಂದರು.

"ಏನಪ್ಪಾ ಸರಿಸರಿ?" ರಾಯರು ಕೇಳಿದರು.

"ಕೈನೋಡಿಯೇ ಅಂದುಕೊಂಡೆ, ಆದರೂ ತಾಳೆ ನೋಡೋಣ ಎಂದು ಪುಸ್ತಕ ತಂದೆ. ಇವರಿಗೆ ಇನ್ನು ಮೂರು ತಿಂಗಳಲ್ಲಿ ಮದುವೆಯಾಗುತ್ತದೆ."

ರಾಜುವಿನ ಎದೆ ಹಾರಿತು. ಸುಮ್ಮನಿದ್ದ.

"ಕನ್ಯೆ ಯಾರಾಗಬಹುದೋ?" ರಾಯರ ಪ್ರಶ್ನೆ.

"ಹುಡುಗಿ ವಿದ್ಯಾವಂತಳು, ಒಳ್ಳೆಯವಳು. ನೀರಿನಲ್ಲಿ ಹುಟ್ಟಿದ ಪದಾರ್ಥದ ಹೆಸರಿರುವವಳು''

"ಸಾಮುದ್ರಿಕದಲ್ಲಿ ಇದೆಲ್ಲ ತಿಳಿಯುತ್ತದೆಯೇ!" ಎಂದುಕೊಂಡ ರಾಜು. ಮಾತನಾಡಲಿಲ್ಲ.

ಅಲ್ಲಿಗೆ ಅದೃಷ್ಟ ಪರೀಕ್ಷೆ ಮುಗಿಯಿತು. ರಾಜು ಲೋಕಾಭಿರಾಮವಾಗಿ ಎರಡು ನಿಮಿಷ ಮಾತನಾಡಿ ಮನೆಯ ಕಡೆ ಹೊರಟ.

ಅವನು ಹೊರಟ ಮೇಲೆ ರಾಯರು ಸೀತಾರಾಮಯ್ಯನನ್ನು ಕೇಳಿದರು; "ಎಲ್ಲ ಸರಿಯೇ, ಸೀತಾರಾಮಯ್ಯ; ಅವನು ಫಸ್ಟ್ ಕ್ಲಾಸ್ ಬಂದರೆ ನಿಮ್ಮ ಎರಡನೇ ಮಾತನ್ನು ಉಪಯೋಗಿಸಿಕೊಂಡು 'ಕಮಲೂನ ಮದುವೆ ಮಾಡಿಕೊ' ಎನ್ನಬಹುದು. ಆದರೆ ಅದೇ ಸುಳ್ಳಾದರೆ–?"

"ಅದು ಖಂಡಿತ ಸುಳ್ಳಾಗೊಲ್ಲ, ಸಾರ್. ಹುಡುಗನ ಕೈ ನೋಡಿದರೇ ತಿಳಿಯುತ್ತೆ, ಬಹಳ ಬುದ್ಧಿವಂತ, ಪರೀಕ್ಷೆಯಲ್ಲಿ ಹೆಸರು ತೆಗೆದುಕೊಳ್ಳುತ್ತಾನೆ ಅಂತ, ಮೊದಲನೆಯ ಮಾತು ನಿಜವಾದ ಮೇಲೆ ಎರಡನೆಯದು ಸುಳ್ಳಾದೀತೆ?"

ಇದಾಗಿ ಆಗಲೇ ಐದಾರು ದಿನಗಳು ಉರುಳಿದ್ದುವು.

"ಸಾರ್"

"ಯಾರು?' ಅನ್ನುತ್ತ ಹೊರಗೆ ಬಂದರು ರಾಯರು.

"ಹೊ ಹೊ ಸೀತಾರಾಮಯ್ಯ! ಬನ್ನಿ ಒಳಗೆ" ಎಂದು ಕರೆದು ಕೊಂಡು ಹೋದರು. ಆ ಮಾತು ಈ ಮಾತು ಆದ ಮೇಲೆ, ನಿಮ್ಮ ಸೋದರಳಿಯನಿಗೆ ಫಸ್ಟ್ ಕ್ಲಾಸ್ ಬಂದಿತಂತೆ!" ಎಂದರು ಸೀತಾರಾಮಯ್ಯ.

"ಹೌದು, ನಿಮಗೆ ಯಾರು ಹೇಳಿದರು?"

"ಅವರೇ ಹೇಳಿದರು. ನಿನ್ನೆ ಮನೆಗೆ ಬಂದಿದ್ದರು."

"ಅದೇನು?"

"ನಿಮ್ಮ ಉಪಕಾರ ಎಂದಿಗೂ ಮರೆಯಲಾರೆ. ನೀವು ಹೇಳಿದಂತೆಯೇ ಎಲ್ಲ ಆಯಿತು ಸಾರ್, ನನಗೆ ಇದುವರೆಗೆ ಈ ಶಾಸ್ತ್ರಗಳಲ್ಲಿ ನಂಬಿಕೆ ಇರಲಿಲ್ಲ. ಈಗ ಬಂತು. ನೀವು ಹೇಳಿದ ಎರಡು ವಿಷಯಗಳೂ ಹಾಗೆಯೇ ಆದದ್ದು ಆಶ್ಚರ್ಯ ಅಂತ ಹೇಳಿ, ಹಣ್ಣು ಹಂಪಲ ಹೂವು ಕೊಟ್ಟು ಹೋದರು."

ರಾಯರು ದಿಗ್ಗನೆ ಎದ್ದು ಕುಳಿತರು. "ಎರಡು ವಿಷಯ? ಒಂದು ಪರೀಕ್ಷೆಯದು, ಇನ್ನೊಂದು?"

"ಹೆಣ್ಣಿನದ್ದು"

"ಅಂದರೆ–!"

"ಮೊದಲು ನನ್ನ ಹತ್ತಿರವೂ ಸರಿಯಾಗಿ ಬಾಯಿಬಿಡಲಿಲ್ಲ. ನಾನೂ ನೇರವಾಗಿ, 'ಕಮಲೂನ ಮದುವೆ ಮಾಡಿಕೊಳ್ಳೋದಕ್ಕೆ ಒಪ್ಪಿದಿರ?' ಅಂತ ಕೇಳೋ ಹಾಗಿರಲಿಲ್ಲ, ನಮ್ಮ ಪಿತೂರಿ ಬಯಲಾಗತ್ತೆ ಅಂತ. ಆ ಮೇಲೆ, 'ಎರಡನೇದು ಹೇಗೆ ನಿಜವಾಯಿತು ಅನ್ನೋದೂ ಹೇಳಿ ಬಿಡಿ. ನನ್ನಿಂದ ಉಪಕಾರವಾಯಿತು ಅಂತೀರಿ, ಎಲ್ಲ ವಿವರ ಹೇಳಿದರೆ ಉಪಕಾರ ತೀರಿಸಿದ ಹಾಗಾಯಿತು' ಅಂದ ಮೇಲೆ ಹೇಳಿದರು."

"ಏನು ಹೇಳಿದ?"

ಸೀತಾರಾಮಯ್ಯ ಸುತ್ತ ಒಂದು ಸಲ ನೋಡಿದರು–ಪತಗಳಿಂದ ಸ್ಫೂರ್ತಿ ಪಡೆಯುವಂತೆ. ಗಂಟಲು ಸರಿ ಮಾಡಿಕೊಂಡರು. ರಾಯರು ಈ ಚಿಹ್ನೆಗಳನ್ನು ಗಮನಿಸಿ, "ಸಂಕೋಚ ಪಡಬೇಡಿ, ಸೀತಾರಾಮಯ್ಯ, ಹೇಳಿ" ಎಂದರು.

"ಅವರ ಕಾಲೇಜಿನ ಫಸ್ಟ್ ಆನರ್ಸ್‌ನಲ್ಲಿ ಒಂದು ಹುಡುಗಿ ಇದೆಯಂತೆ. ಅದನ್ನು ಮದುವೆಯಾಗಬೇಕು ಅಂತ ನಿಮ್ಮ ಅಳಿಯನಿಗೆ ಆಸೆ ಇತ್ತಂತೆ. ಆ ಹುಡುಗಿಯೂ ನಿಮ್ಮ ಜನವೇ ಅಂತೆ, ಅಲ್ಲದೆ ಅವರ ಮನೆಯವರೆಲ್ಲ ನಿಮ್ಮ ತಂಗಿಯವರ ಮನೆಯವರಿಗೆ ಚೆನ್ನಾಗಿ ಗೊತ್ತಂತೆ. ಆದದ್ದರಿಂದ ಹುಡುಗಿ ಒಪ್ಪಿದರೆ ತಮ್ಮ ಮನೆಯವರು, ಅವರ ಮನೆಯವರು ಅಡ್ಡಿ ಮಾಡುವುದಿಲ್ಲ ಎಂದು ನಂಬಿಕೆ ಇತ್ತಂತೆ. ಆದರೆ ಹುಡುಗಿಯನ್ನು ಕೇಳುವುದಕ್ಕೆ ಸಂಕೋಚವಾಗುತ್ತಿತ್ತಂತೆ. ಪರೀಕ್ಷೆಯಲ್ಲಿ ಫಸ್ಟ್ ಕ್ಲಾಸ್ ಬಂದಮೇಲೆ, 'ಸೀತಾರಾಮಯ್ಯನವರು ಹೇಳಿದ ಒಂದು ಮಾತು ನಿಜವಾಯಿತು. ಇನ್ನೊಂದೂ ಏಕೆ ನಿಜವಾಗಬಾರದು' ಎನ್ನಿಸಿತಂತೆ. ಧೈರ್ಯ ತಂದುಕೊಂಡು ಮೊನ್ನೆ ಮಾತನಾಡಿಸಿದರಂತೆ. ಹುಡುಗಿ ಅವರನ್ನು ಮದುವೆಯಾಗಲು ಒಪ್ಪಿದೆಯಂತೆ. ಬಹಳ ನಾಚಿಕೆ ಪಟ್ಟುಕೊಂಡು ನಿಮ್ಮ ಅಳಿಯ ಇದನ್ನೆಲ್ಲ ಹೇಳಿದರು."

"ಅಳಿಯ, ಒಳ್ಳೆ ಅಳಿಯ," ಸಿಡುಕಿನಿಂದ ಉತ್ತರ ಕೊಟ್ಟರು ರಾಯರು. "ಹಾಳಾಯಿತು ನಿಮ್ಮ ಶಾಸ್ತ್ರ."

"ಶಾಸ್ತ್ರ ಹಾಳಾಗಲಿಲ್ಲ ಸಾರ್. ನಿಜವಾಯಿತು. ಹುಡುಗಿಯ ಹೆಸರು ಪದ್ಮ ಅಂತೆ–'ನೀರಿನಲ್ಲಿ ಹುಟ್ಟಿದ ಪದಾರ್ಥ', ಅದಕ್ಕೇ ಅವರು ನನ್ನ ಮಾತಿನಿಂದ ಧೈರ್ಯ ತಂದುಕೊಂಡರು."

ರಾಯರು ಉತ್ತರ ಕೊಡಲಿಲ್ಲ.

"ತಮಗೆ ವಿಷಯ ಗೊತ್ತೋ ಇಲ್ಲವೋ ತಿಳಿಸಿ ಹೋಗೋಣಾಂತ ಬಂದೆ. ಅಂತೂ ಶಾಸ್ತ್ರ ಸುಳ್ಳಾಗಲಿಲ್ಲ," ಎನ್ನುತ್ತ ಎದ್ದರು ಸೀತಾರಾಮಯ್ಯನವರು.

ಜಾಣನಿಗೆ ಮಾತಿನ ಪೆಟ್ಟು

"ಹೋಗೋಣವೇ ಇನ್ನು?"

ವಸಂತ ಗಡಿಯಾರ ನೋಡಿಕೊಂಡ, ಎಂಟೂವರೆಯಾಗಿತ್ತು. "ಹೂಂ" ಎಂದು ಎದ್ದ.

ಇಬ್ಬರೂ ಮಾತನಾಡದೆ ಪಾರ್ಕಿನ ಗೇಟಿನ ಕಡೆ ಸಾಗಿದರು.

ವಸಂತ— ಮೋಹನ ಇಬ್ಬರೂ ತರುಣರು; ಚಿಕ್ಕಂದಿನಿಂದ ಒಟ್ಟಿಗೆ ಬೆಳೆದವರು. ಈಗಲೂ 'ವಾರ್ತಾ ನಿಧಿ' ಕಚೇರಿಯಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು. ಮೊದಲಿನಿಂದ ಇಬ್ಬರೂ ಬುದ್ಧಿವಂತರೆನಿಸಿಕೊಂಡಿದ್ದರು; ಪರೀಕ್ಷೆಗಳಲ್ಲಿ ಉತ್ತಮ ರೀತಿಯಲ್ಲಿ ತೇರ್ಗಡೆಯಾಗಿದ್ದರು. ಇಬ್ಬರೂ ಉತ್ತಮ ಬರೆಹಗಾರರೆಂದು ಹೆಸರು ಪಡೆದಿದ್ದರು. ಕನ್ನಡ ನಾಡಿನ ಯಾವ ಪತ್ರಿಕೆಯ ವಿಶೇಷ ಸಂಚಿಕೆಯೇ ಆಗಲಿ ಇವರ ಲೇಖನವಿಲ್ಲದೆ ಪೂರ್ಣ ವೆನಿಸಲಾರದು ಎನ್ನುವ ಮಟ್ಟಿಗೆ ಖ್ಯಾತಿಪಡೆದಿದ್ದರು. ಮೋಹನ ವಸಂತನನ್ನು ಒಂದು ರೀತಿಯಲ್ಲಿ ಮೀರಿಸಿದ್ದ—ಚಿತ್ರಕಲೆಯಲ್ಲಿಯೂ ಅವನಿಗೆ ಅಪೂರ್ವ ಪರಿಶ್ರಮವಿತ್ತು. ಅವನ ಕತೆಗಳು ಎಷ್ಟರ ಮಟ್ಟಿಗೆ ಪರಿಣಾಮ ಕಾರಿಯಾಗಿರುತ್ತಿದ್ದುವೋ ಅಷ್ಟೇ ಪರಿಣಾಮಕಾರಿಯಾಗಿರುತ್ತಿದ್ದುವು ಅವನ ಚಿತ್ರಗಳು. ತನಗೆ ತೋರಿದ ಹೊಸ ಭಾವನೆಗಳಿಗೆ ಒಂದು ಸಲ ಪದದ ಉಡಿಗೆ ತೊಡಿಸುವನು, ಒಂದು ಸಲ ಬಣ್ಣಗಳಲ್ಲಿ ವ್ಯಕ್ತಪಡಿಸುವನು.

ವಸಂತ—ಮೋಹನ ಇಬ್ಬರ ಮನಸ್ಸನ್ನೂ ಕಲುಕುವ ಸಂಗತಿಯೊಂದು ಜರುಗಿತು. ಕನ್ನಡ ಸಾಹಿತ್ಯ ಸಂಘದವರು ಸಣ್ಣ ಕತೆಗಳ ಸ್ಪರ್ಧೆಯು ನ್ನೇರ್ಪಡಿಸಿ ಒಂದು ಪ್ರಕಟಣೆ ಕೊಟ್ಟರು. ಸ್ಪರ್ಧೆಯ ಮೊದಲನೆಯ ಬಹುಮಾನ ಇನ್ನೂರು ರೂ; ಎರಡನೆಯ ಬಹುಮಾನ ನೂರಿಪ್ಪತ್ತೈದು ರೂ; ಮೂರನೆಯ ಬಹುಮಾನ ಎಪ್ಪತ್ತೈದು ರೂ. ಸಂಘದ ರಜತ ಮಹೋತ್ಸ ವಕ್ಕಾಗಿ ಏರ್ಪಡಿಸಿದ್ದ ಸ್ಪರ್ಧೆ ಇದು. ಹಣಕ್ಕಿಂತ ಹೆಚ್ಚಾಗಿ ಕತೆಗಾರರನ್ನು ಹುರಿದುಂಬಿಸಿದ್ದು ಸ್ಪರ್ಧೆ ಕನ್ನಡ ಸಾಹಿತ್ಯ ಸಂಘದಿಂದ ನಡೆಯು ವುದೆಂಬ ವಿಷಯ. ಈ ಸ್ಪರ್ಧೆಯಲ್ಲಿ ಬಹುಮಾನ ಪಡೆಯುವುದು

ಕತೆಗಾರನಿಗೆ ಹೆಮ್ಮೆಯ ಸಂಗತಿ. ವಸಂತ, ಮೋಹನ ಇಬ್ಬರೂ ಸಹಜವಾಗಿ ಸ್ಪರ್ಧೆಗೆ ಕತೆಗಳನ್ನು ಕಳುಹಿಸಬೇಕೆಂದು ನಿರ್ಧರಿಸಿದರು.

ಕತೆಗಳನ್ನು ಕಳುಹಿಸಲು ಇನ್ನು ಉಳಿದಿದ್ದುದು ಎಂಟೇ ದಿನ. ಇವತ್ತು ಸಂಜೆ ಗೆಳೆಯರಿಬ್ಬರೂ ಅಡ್ಡಾಡಲು ಹೊರಟಿದ್ದರು. ಆ ಮಾತು ಈ ಮಾತು ಮುಗಿದು ಸ್ಪರ್ಧೆಯ ವಿಷಯ ಬಂತು. ವಸಂತನಿಗೆ ಇನ್ನೂ ಸರಿಯಾದ ವಸ್ತುವೇ ಹೊಳೆದಿರಲಿಲ್ಲ. ಅವನಿಗೆ ಸ್ಪರ್ಧೆಯಲ್ಲಿ ಮೋಹನನಿಗಿಂತ ಹೆಚ್ಚು ಹುಚ್ಚಿತ್ತು. ಎಷ್ಟೋ ಸಲ ತನಗೆ ಮೊದಲನೆಯ ಬಹುಮಾನ ಬಂದಂತೆ ಭಾವಿಸುವನು, ಉತ್ಸವದಲ್ಲಿ ಶ್ರೀಮನ್ಮಹಾರಾಜರ ಕೈಯಿಂದ ಬಹುಮಾನ ಪಡೆಯುವ ರೀತಿಯನ್ನು ಕಲ್ಪಿಸಿಕೊಳ್ಳುವನು. ದೊಡ್ಡ ಚಪ್ಪರ, ಸಹಸ್ರಾರು ಮಂದಿ— ನಾಡಿನ ಪ್ರತಿಭಾವನ್ವಿತ ನಾಯಕರು, ಸಾಹಿತಿಗಳು, ಹಿರಿಯಕಿರಿಯ ಬರೆಹಗಾರರು, ಅಧಿಕಾರಿಗಳು ನೆರೆದಿರುವಾಗ— ತಾನು ಹೋಗಿ ಮಹಾರಾಜರ ಕೈಯಿಂದ ಬಹುಮಾನ ಪಡೆದಂತೆ, ಚಪ್ಪರವೆಲ್ಲ ಕಿವಿಕಿವುಡಾಗುವಂತೆ ಚಪ್ಪಾಳೆಯಿಂದ ಮೊಳಗಿದಂತೆ ಕನಸು ಕಾಣುವನು. ಇದರ ಜೊತೆಗೆ ಮತ್ತೊಂದು ಆಸೆಯಿತ್ತು. ಇನ್ನು ನಾಲ್ಕೈದು ತಿಂಗಳಲ್ಲಿ 'ವಾರ್ತಾನಿಧಿ' ವಾರ ಪತ್ರಿಕೆಯ ಸಹಸಂಪಾದಕರ ಸ್ಥಾನ ಖಾಲಿಯಾಗುವುದೆಂದು ಗೊತ್ತಿತ್ತು. ಸ್ಪರ್ಧೆಯಲ್ಲಿ ಬಹುಮಾನ ಬಂದರೆ ಆ ಸ್ಥಾನ ತನಗೇ ಸಿಕ್ಕುವುದೆಂಬ ಭರವಸೆಯೂ ಇತ್ತು.

ಇನ್ನು ಎಂಟು ದಿನಕ್ಕೆ ಕತೆ ಕಳುಹಿಸಬೇಕಾಗಿದ್ದರೂ ಕತೆಗೆ ತಕ್ಕ ವಸ್ತು ಯಾವುದೂ ಸಿಕ್ಕದೆ ಪೇಚಾಟಕ್ಕೆ ಗುರಿಯಾಗಿದ್ದ ವಸಂತ. ಇವತ್ತು ಸಂಜೆ ಸ್ಪರ್ಧೆಯ ಮಾತು ಬಂದಾಗ ಮೋಹನ, "ನನಗೆ ಎರಡು ಪ್ಲಾಟ್ ಹೊಳೆದಿದೆ. ಯಾವುದನ್ನು ಆರಿಸಿಕೊಳ್ಳಲಿ ಎನ್ನುವುದೇ ತಿಳಿಯದೆ ಹೋಗಿದೆ," ಎಂದ.

"ಒಬ್ಬರೇ ಒಂದಕ್ಕಿಂತ ಹೆಚ್ಚು ಕಳುಹಿಸಕೂಡದೆಂದು ಮಾಡಿದ್ದಾರೆ. ಇಲ್ಲದಿದ್ದರೆ ಎರಡೂ ಕಳುಹಿಸಬಹುದಾಗಿತ್ತು," ವಸಂತನೆಂದ.

"ಈಗಲೇ ಇನ್ನೂರು— ಮುನ್ನೂರು ಕತೆಗಳು ಬರುವುದು ಖಂಡಿತ. ಆಗಂತೂ ಸಾವಿರಾರು ಬಂದು ಬಿಡುತ್ತಿದ್ದುವು ಅಷ್ಟೆ. ಸಿಲ್ವರ್ ಜೂಬಿಲಿಗೆ

ಇನ್ನು ಮೂರು ತಿಂಗಳಿದೆ, ಅಷ್ಟರಲ್ಲಿ ಫಲಿತಾಂಶ ಹೊರಬೀಳಬೇಕು, ಬಹುಮಾನ ಬಂದ ಕತೆಗಳನ್ನು ಅಚ್ಚು ಮಾಡಬೇಕು. ಕೆಲಸ ಸ್ವಲ್ಪ ಇದೆಯೇ? ಅದಕ್ಕೋಸ್ಕರವೇ ಒಬ್ಬರು ಒಂದಕ್ಕಿಂತ ಹೆಚ್ಚು ಕತೆ ಕಳುಹಿಸ ಕೂಡದೆಂದು ನಿಯಮ ಮಾಡಿದ್ದಾರೆ" ಮೋಹನ ಉತ್ತರ ಕೊಟ್ಟ.

ಅವನು ಯೋಚನೆ ಮಾಡುತ್ತಿದ್ದ ವಸ್ತುಗಳು (Plots) ಯಾವುವೆಂದು ಕೇಳಬೇಕೆಂದು ವಸಂತನಿಗನ್ನಿಸಿತು. ಆದರೆ ಅವನು ಮತ್ತೇನಾದರೂ ಭಾವಿಸಿಯಾನು; ತನ್ನ ವಸ್ತುಗಳನ್ನು ಹೇಳಲು ಅವನಿಗೆ ಇಷ್ಟವಿದೆಯೋ ಇಲ್ಲವೋ ಎಂದು ಸುಮ್ಮನಾದ. ಮೋಹನನೇ ಹೇಳಿದ. "ಎರಡು ಪ್ಲಾಟೂ ಹೇಳುತ್ತೇನೆ, ನಾನು ಆರಿಸಿಕೊಳ್ಳಬೇಕೆಂದಿರುವುದನ್ನೂ ಹೇಳುತ್ತೇನೆ; ನಿನಗೆ ಹೇಗೆ ತೋರುತ್ತದೆ ನೋಡು"

ವಸಂತ ಕೇಳಿದ. ಮೋಹನ ಎರಡು ವಸ್ತುಗಳನ್ನೂ ಹೇಳಿ, ಎರಡನ್ನೂ ಹೇಗೆ ಬೆಳೆಸಬಹುದು, ಪ್ರತಿಯೊಂದರ ಪರಿಣಾಮ ಹೇಗಾಗುತ್ತದೆ ಎಂಬುದನ್ನು ವಿವರಿಸಿದನು. ತಾನು ಅವೆರಡರಲ್ಲಿ ಯಾವ ವಸ್ತುವನ್ನು ಸ್ಪರ್ಧೆಗೆ ಆರಿಸಿಕೊಳ್ಳಬೇಕೆಂದಿದ್ದಾನೆ ಎಂಬುದನ್ನೂ ಹೇಳಿ, ಇನ್ನೊಂದನ್ನು ಆ ಮೇಲೆ ತೆಗೆದುಕೊಂಡು ಕತೆಯ ರೂಪ ಕೊಡಬೇಕೆಂದಿರುವೆನೆಂದ. ಮೋಹನ ಮಧ್ಯೆ ತನಗೆ ತೋರಿದ ನಾಲ್ಕು ಮಾತು ಹೇಳಿದ. ಆ ಹೊತ್ತಿಗೆ ಅವರು ಪಾರ್ಕ್ ತಲುಪಿದರು. ಅಲ್ಲಿ ಬೆಂಚಿನ ಮೇಲೆ ಕುಳಿತಾಗ ಇಬ್ಬರ ಮನಸ್ಸೂ ಮೋಹನ ಹೇಳಿದ ಕತೆಗಳಲ್ಲಿ ತಲ್ಲೀನವಾಗಿದ್ದುವು. ಮೋಹನನೇ ಮೊದಲು ಎಚ್ಚೆತ್ತವನು. "ಹೋಗೋಣವೇ ಇನ್ನು?" ಎಂದ.

ವಸಂತ ಗಡಿಯಾರ ನೋಡಿಕೊಂಡು, "ಹೂಂ" ಎಂದ.

ಇಬ್ಬರೂ ಎದ್ದು 'ಪಾರ್ಕಿ'ನ ಗೇಟಿನ ಕಡೆ ನಡೆದರು. ಅಷ್ಟು ದೂರ ಸಾಗಿದ ಮೇಲೆ "ಮತ್ತೆ ಬೆಳಿಗ್ಗೆ ಆಫೀಸಿನಲ್ಲಿ ಸೇರುತ್ತೇವಲ್ಲ" ಎಂದು ಒಬ್ಬರನ್ನೊಬ್ಬರು ಬೀಳ್ಕೊಟ್ಟು ತಮ್ಮ ಮನೆಗಳಿಗೆ ನಡೆದರು.

ವಸಂತನ ದೇಹ ಯಂತ್ರದಂತೆ ಕೆಲಸಮಾಡುತ್ತಿತ್ತು. ಕಾಲು ತಾನಾಗಿಯೇ ಮುಂದೆ ಸಾಗಿತ್ತು.

ಅವನ ಮನಸ್ಸನ್ನೆಲ್ಲ ಆವರಿಸಿದ್ದುದು ಮೋಹನನ ಕತೆಗಳು. ನಿಜವಾಗಿ ಎರಡು ಕತೆಗಳೂ ಸೊಗಸಾಗಿದ್ದುವು. ವಸಂತನಿಗನ್ನಿಸಿತು

ಮೋಹನ ಆರಿಸಿಕೊಂಡ ವಸ್ತುವಿಗಿಂತ ಬಿಟ್ಟದ್ದೇ ಸ್ವಲ್ಪ ಚೆನ್ನಾಗಿದೆ ಎಂದು. "ವರ್ಡ್ಸ್‌ವರ್ತ್‌ನಂತಹ ಕವಿಗೇ ತನ್ನ ಕೃತಿಗಳಲ್ಲಿ ನಿಜವಾಗಿ ಹಿರಿಮೆ ಇರುವುವು ಯಾವುದು ಎಂದು ಗೊತ್ತಾಗಲಿಲ್ಲ!" ಎಂದುಕೊಂಡ. ಅಂತೂ ಈ ವಸ್ತುಗಳನ್ನು ತೆಗೆದುಕೊಂಡು ತಕ್ಕ ಕಲೆಯೊಡನೆ ಕತೆ ರಚಿಸಿದರೆ ನಿಜವಾಗಿ ಎರಡು ಅತ್ಯುತ್ತಮ ಸಣ್ಣ ಕತೆಗಳಾಗುವುವು ಎನ್ನಿಸಿತು ವಸಂತನಿಗೆ. "ಈ ಸಲ ಮೊದಲನೆಯ ಬಹುಮಾನ ಮೋಹನನಿಗೆ ಮುಡಿಪು," ಎಂದುಕೊಂಡ. ಆ ಯೋಚನೆ ಬಂದ ಕೂಡಲೇ ಮನಸ್ಸಿಗೆ ಇರಿದಂತಾಯಿತು. ಮೊದಲನೆಯ ಬಹುಮಾನದ ಜೊತೆಗೆ ಸಹಸಂಪಾದಕರ ಸ್ಥಾನವೂ ಅವನಿಗೇ,'' ಎಂದು ಹೇಳಿತು ಬುದ್ಧಿ. ಆದಾದ ಮೇಲೆ ಮೋಹನ ತನ್ನ ಮೇಲಿನ ಸ್ಥಾನವನ್ನು ಪಡೆಯುವನು; ಅವನು ಹೇಳಿದಂತೆ ತಾನು ನಡೆಯಬೇಕು.

"ಹುಂ, ಹಣೇಲಿ ಏನೇನು ಬರೆದಿದೆಯೋ!'' ಎಂದುಕೊಂಡ.

ಆದರೆ, ಆ ವಿಷಯವನ್ನು ಅಷ್ಟು ಸುಲಭವಾಗಿ ಮರೆಯಲು ಸಾಧ್ಯವಾಗಲಿಲ್ಲ. ಸ್ಪರ್ಧೆಗೆ ಗೊತ್ತಾಗಿದ್ದ ದಿನಗಳು ಮುಗಿಯುತ್ತ ಬಂದಿದ್ದುವು. ತಾನು ಕತೆ ಕಳುಹಿಸಬೇಡವೆ? ಕಳುಹಿಸಿದರೆ ಬಹುಮಾನ ಬಾರದೇ ಇದ್ದರೂ ಚಿಂತೆಯಿಲ್ಲ, 'ಚೆನ್ನಾಗಿದೆ' ಎನ್ನಿಸಿಕೊಳ್ಳುವಂತಹ ಕತೆಯನ್ನಾದರೂ ಕಳುಹಿಸಬೇಡವೆ? ಅದಕ್ಕೆ ಒಂದು ವಸ್ತುವೂ ಹೊಳೆದಿಲ್ಲ, ಮತ್ತೆ ಕತೆ ಕಳುಹಿಸುವುದೆಲ್ಲಿ ಬಂತು? "ಇದೇ ವಿಧಿಯ ಅಣಕ' ಎಂದುಕೊಂಡ ವಸಂತ; ತನಗೆ ಒಂದು ಉತ್ತಮ ವಸ್ತುವೂ ಹೊಳೆದಿಲ್ಲ, ಮೋಹನ್ನಿಗೆ ಎರಡು ಸೊಗಸಾದ ವಸ್ತುಗಳು ಸಿಕ್ಕಿವೆ; ವಿಧಿಗೆ ತನ್ನ ಮೇಲೇಕೆ ಈ ಮುನಿಸು?

ದಾರಿ ಸವೆದು ಮನೆ ಸಿಕ್ಕಿದರೂ ಮನಸ್ಸಿನ ಗೊಂದಲಕ್ಕೆ ಮುಕ್ತಾಯ ಸಿಗಲಿಲ್ಲ.

ವಸಂತ ಕಣ್ಣು ಬಿಟ್ಟಾಗ ಅವನ ಮೇಜಿನ ಮೇಲಿದ್ದ ಕ್ಯಾಲೆಂಡರ್ ಅಂದು ೧೫ನೆ ತಾರೀಖು ಎಂಬುದನ್ನು ತಿಳಿಸಿತು. 'ಓ ಇವತ್ತೇ ಸಾಹಿತ್ಯ ಸಂಘದ ಕತೆಗಳ ಸ್ಪರ್ಧೆಯ ಫಲಿತಾಂಶ ಹೊರ ಬೀಳೋದು' ಎಂದುಕೊಂಡ. ಆ ಯೋಚನೆಯೊಡನೆ ಮತ್ತೆ ಕೆಲವು ಯೋಚನೆಗಳು ಬಂದುವು.

ತಾನು ಮಾಡಿದ್ದು ನ್ಯಾಯವೇ? ಮೋಹನ ಹೇಳಿದ ವಸ್ತುವನ್ನು ಬಳಸಿಕೊಂಡು ತಾನು ಕತೆ ಬರೆದು ಕಳುಹಿಸಿದುದು ತಪ್ಪಲ್ಲವೇ? ಬಹುಮಾನದ ಮೋಹಕ್ಕಾಗಿ ಹೀಗೆ ಆತ್ಮವಂಚನೆ ಮಿತ್ರದ್ರೋಹ ಮಾಡಬಹುದೇ? ಕೂಡಲೇ ಮನಸ್ಸು ಹೇಳಿತು— ಬಹುಮಾನ ಮಾತ್ರವಲ್ಲ. ಸಹಸಂಪಾದಕತ್ವ ಕೂಡ ಈ ಫಲಿತಾಂಶವನ್ನವಲಂಬಿಸಿದೆ ಎಂದು. ಸ್ಪರ್ಧೆಯಲ್ಲಿ ಬಹುಮಾನ ಪಡೆದವರೇ ಆ ಸ್ಥಾನ ಪಡೆಯುವರೆಂದು ಯಾರೂ ಬಾಯಿಬಿಟ್ಟು ಹೇಳಿರಲಿಲ್ಲ, ಏಕೆಂದರೆ ಇವರಿಬ್ಬರಲ್ಲಿ ಒಬ್ಬರಿಗೆ ಬಹುಮಾನ ಬಂದೇ ಬರುವುದೆಂಬ ನಂಬಿಕೆ ಏನು? ಆದರೆ ಆ ಸ್ಥಾನ ಖಾಲಿಯಾದರೆ ಅದಕ್ಕೆ ಹಕ್ಕಿದ್ದವರು ಇವರಿಬ್ಬರು; ಉಳಿದ ಎಲ್ಲ ರೀತಿಗಳಲ್ಲಿಯೂ ಇಬ್ಬರೂ ಸರಿಸಮಾನರು; ಆದುದರಿಂದ ಈ ಸ್ಪರ್ಧೆಯಲ್ಲಿ ಇಬ್ಬರಲ್ಲಿ ಯಾರೊಬ್ಬರಿಗಾದರೂ ಬಹುಮಾನ ಬಂದರೆ ಮತ್ತೊಬ್ಬರಿಗಿಂತ ಅವರಿಗೆ ಆ ಸ್ಥಾನ ಸಿಗುವುದು ಸುಲಭವಾಗುವುದು ಎಂಬುದು ಸ್ಪಷ್ಟವಾಗಿತ್ತು. ಆದರೂ ತಾನು ಮಾಡಿದ್ದು ಅನ್ಯಾಯ ಎಂದು ವಸಂತನ ಮನಸ್ಸು ಸಾರಿ ಹೇಳುತ್ತಿತ್ತು. ಇಷ್ಟು ಮಾಡಿಯೂ ತನಗೆ ಬಹುಮಾನ ಬಾರದಿದ್ದರೆ—! ವ್ರತ ಕೆಟ್ಟೂ ಸುಖವಿಲ್ಲದಂತಾಯಿತು. ಬಹುಮಾನ ಬಂದರೆ? ಕತೆ ಪ್ರಕಟವಾದಾಗಲಾದರೂ ಮೋಹನನಿಗೆ ನಿಜಾಂಶ ತಿಳಿಯುವುದು. ವಸಂತ ತಾನು ಹೇಳಿದ ವಸ್ತುವನ್ನುಪಯೋಗಿಸಿಕೊಂಡು ಕತೆ ಬರೆದನೆಂದು ಸಿದ್ಧಾಂತ ಮಾಡಿ ತೋರಿಸಲು ಮೋಹನನ ಬಳಿ ಯಾವ ಸಾಕ್ಷ್ಯ ಸಾಹಿತ್ಯವೂ ಇರಲಿಲ್ಲ. ಆದರೆ ತನಗೆ, ಅವನಿಗೆ ಇಬ್ಬರಿಗಾದರೂ ನಿಜಾಂಶ ತಿಳಿದಿರುವುದಿಲ್ಲವೇ? ಇದಾದ ಮೇಲೆ ತಮ್ಮಿಬ್ಬರ ಬಾಂಧವ್ಯ ಮೊದಲಿನಂತಿರಲು ಸಾಧ್ಯವೆ? ಅಲ್ಲದೆ ಮೋಹನ ಇದನ್ನು ತನ್ನ ಗೆಳೆಯರ ಮುಂದೆ ಹೇಳಬಹುದು. ಅವನು ಹತ್ತು ಜನರಿಗೆ ಹೇಳಿದರೆ ನಾಲ್ಕು ಜನರಾದರೂ ನಂಬದಿರುವರೇ? ನಂಬದಿದ್ದರೆ ಹೋಗಲಿ, ತನ್ನ ವಿಷಯದಲ್ಲಿ ಅವರಿಗೆ ಅನುಮಾನವಾದರೂ ಬಾರದೆ ಇದ್ದೀತೆ? ತನಗೆ ಬಹುಮಾನ ಬಾರದಿದ್ದರೇ ಒಳ್ಳೆಯದೆನ್ನಿಸಿತು ಒಂದು ಸಲ. ಬಹುಮಾನ ಬಾರದಿದ್ದರೆ ಕತೆ ಪ್ರಕಟವಾಗುವುದಿಲ್ಲ. ಈ ಪ್ರಕರಣ ಇಲ್ಲಿಗೇ ಮುಗಿದುಹೋಗುವುದು. ಆದರೆ, ಸಹಸಂಪಾದಕರ ಸ್ಥಾನ—!

ಬಿಡಿಸಲಾರದ ಗೊಂದಲ ಮನೆಮಾಡಿದೆ ತನ್ನ ಮನಸ್ಸಿನಲ್ಲಿ ಎನ್ನಿಸಿತು ವಸಂತನಿಗೆ. ಅಷ್ಟರಲ್ಲಿ ರಾಧ ಬಂದು, "ಕಾಫಿ ಆರಿಹೋಗುತ್ತಿದೆ, ಏಳಬಾರದೆ?" ಎಂದಳು. ವಸಂತ ಹಾಸಿಗೆ ಬಿಟ್ಟೆದ್ದ.

ಆಫೀಸು ಹತ್ತಿರ ಬರುತ್ತ ಬರುತ್ತ ವಸಂತನ ಹೃದಯದ ಬಡಿತ ವೇಗವಾಯಿತು. 'ತಮ್ಮಲ್ಲಿ ಯಾರಿಗಾದರೂ ಬಹುಮಾನ ಬಂದಿರಲಿ, ಬಂದಿರದಿರಲಿ, ಪತ್ರಿಕೆಯಲ್ಲಿ ಪ್ರಕಟಣೆಗೆಂದಾದರೂ ಫಲಿತಾಂಶ ಆಗಲೇ ಕಚೇರಿಗೆ ಬಂದಿರುತ್ತದೆ,' ಎಂದು ಮನಸ್ಸು ಜ್ಞಾಪಿಸಿತು.

ಸೈಕಲ್ಲನ್ನು ಜವಾನನ ಕೈಯ್ಯಲ್ಲಿ ಕೊಟ್ಟು ಕಟ್ಟಡದೊಳಗೆ ಅವನು ಕಾಲಿಡುವ ಹೊತ್ತಿಗೆ ಮೋಹನ ಕೊಠಡಿಯಿಂದ ಬಂದ.

'Congratulations ವಸಂತ್. ಫಸ್ಟ್ ಪ್ರೈಜ್ ಹೊಡೆದು ಬಿಟ್ಟೆ'

"ನಿನಗೆ?"

"ಸೆಕೆಂಡ್ ಪ್ರೈಜ್"

ಮೋಹನನನ್ನು ಅಭಿನಂದಿಸುವುದನ್ನೂ ವಸಂತ ಮರೆತು ತನ್ನ ಕೊಠಡಿಗೆ ಓಡಿದ.

"ಇವನಿಗೇನಾಗಿದೆ? ಹೀಗೇಕೆ ಮಾಡುತ್ತಾನೆ?" ಎಂದು ಆಶ್ಚರ್ಯ ಪಡುತ್ತ ತನ್ನ ಕೊಠಡಿಗೆ ಹಿಂದಿರುಗಿದ ಮೋಹನ.

ಆಗಲೇ ನಾಲ್ಕು ತಿಂಗಳು ಉರುಳಿತ್ತು. ವಸಂತ ಈಗ 'ವಾರ್ತಾನಿಧಿ' ವಾರ ಪತ್ರಿಕೆಗೆ ಸಹಸಂಪಾದಕ. ವಿಶೇಷ ಸಂಚಿಕೆಯಲ್ಲಿ ಅವನ ಕತೆ ಪ್ರಕಟವಾದಾಗ ಮೋಹನ ಏನೂ ಹೇಳಲಿಲ್ಲ. ಅವನ ರೀತಿಯಲ್ಲೂ ಯಾವ ಬದಲಾವಣೆಯೂ ತೋರಿಬರಲಿಲ್ಲ. ಮೊದಲಿನಂತೆ ನಗುನಗುತ್ತ ಇರುತ್ತಿದ್ದ. ವಸಂತ ಸಹಸಂಪಾದಕನಾದ ಮೇಲೂ ಅವನ ವರ್ತನೆಯಲ್ಲಿ ಯಾವ ವ್ಯತ್ಯಾಸವೂ ತೋರಿಬರಲಿಲ್ಲ. ವಸಂತನಿಗೆ ಮಾತ್ರ ಮೋಹನನೊಡನೆ ಮೊದಲಿನಂತೆ ನಡೆದುಕೊಳ್ಳುವುದು ಕಷ್ಟವಾಯಿತು. ಅವನ ಮನಸ್ಸು ಮೋಹನನೊಡನೆ ಸಲಿಗೆಯಿಂದ ವರ್ತಿಸಲು ಅಳುಕುತ್ತಿತ್ತು. ತಮ್ಮ ಸಾಹಿತ್ಯರಚನೆಯ ವಿಷಯದಲ್ಲಿಯಂತೂ ಈಗ ಅವರು ಮಾತನಾಡುತ್ತಲೇ ಇರಲಿಲ್ಲ.

"ಪೋಸ್ಟ್"

"ವಸಂತ ಎದ್ದು ಹೋಗಿ ಕಾಗದ ತೆಗೆದುಕೊಂಡ. ಲಕ್ಕೋಟೆ ಒಡೆದು ಪತ್ರ ಓದಿದ, ಅವನಿಗೆ ದಿಗ್ಭ್ರಮೆಯಾಯಿತು. 'ಎದ್ದಿದ್ದೇನೋ, ಮಲಗಿದ್ದೇನೋ' ಎಂದು ಕಣ್ಣುಜ್ಜಿ ಮತ್ತೆ ಓದಿದ.

ಕಾಗದ ಮದ್ರಾಸಿನಲ್ಲಿ ನಡೆಯುತ್ತಿದ್ದ ಅಖಿಲ ಭಾರತ ಚಿತ್ರಕಲಾ ಪ್ರದರ್ಶನದ ಕಚೇರಿಯಿಂದ ಬಂದಿತ್ತು. ವಸಂತನ 'ಇನ್ನೂ ಬಾರನೇಕೆ?' ಎಂಬ ಚಿತ್ರಕ್ಕೆ ಬಹುಮಾನ ಬಂದಿರುವುದೆಂದೂ, ಇನ್ನು ಒಂದು ವಾರಕ್ಕೆ ಬಹುಮಾನ ವಿನಿಯೋಗವಾಗುವುದೆಂದೂ, ಮದರಾಸಿನ ಗವರ್ನರರು ಬಹುಮಾನ ವಿನಿಯೋಗ ಮಾಡುವರೆಂದೂ, ತಪ್ಪದೆ ಉತ್ಸವಕ್ಕೆ ಬಂದು ಬಹುಮಾನ ಸ್ವೀಕರಿಸಬೇಕೆಂದೂ ಪ್ರದರ್ಶನದ ವ್ಯವಸ್ಥಾಪಕರು ತಿಳಿಸಿದ್ದರು.

ಅಂದು ವಸಂತ ರಜೆ ತೆಗೆದುಕೊಂಡಿದ್ದುದರಿಂದ ಕಚೇರಿಗೆ ಹೋಗಬೇಕಾಗಿರಲಿಲ್ಲ. "ರಜ ತೆಗೆದುಕೊಂಡದ್ದೇ ಒಳ್ಳೆಯದಾಯಿತು, ಈ ದಿಗ್ಭ್ರಮೆಯಲ್ಲಿ ಕೆಲಸವೇನು ಸಾಗುತಿತ್ತು?" ಎಂದುಕೊಂಡ ವಸಂತ.

ಸಂಜೆ 'ವಾರ್ತಾನಿಧಿ' ದಿನ ಪತ್ರಿಕೆಯ ಸಂಚಿಕೆ ಬಂತು. ಮೊದಲನೆಯ ಪುಟದಲ್ಲೇ ವಸಂತನ ಭಾವ ಚಿತ್ರ. ಚಕಿತನಾಗಿ ವಸಂತ ಕೆಳಗಿದ್ದ ಪಙ್ತಿಗಳನ್ನು ಓದಿದ:

"ಶ್ರೀ ವಸಂತರಾಯರವರು"

"ವಾರ್ತಾನಿಧಿ ವಾರ ಪತ್ರಿಕೆಗೆ ಇತ್ತಿಚೀಗೆ ಸಹ ಸಂಪಾದಕರಾದ ಶ್ರೀ. ವಸಂತರಾಯರಿಗೆ ಈಗ ಮದರಾಸಿನಲ್ಲಿ ನಡೆಯುತ್ತಿರುವ 'ಅಖಿಲ ಭಾರತ ಚಿತ್ರಕಲಾ ಪ್ರದರ್ಶನ'ದಲ್ಲಿ 'ಇನ್ನೂ ಬಾರನೇಕೆ?' ಎಂಬ ಚಿತ್ರಕ್ಕಾಗಿ ೨,೦೦ ರೂ.ಗಳ ಬಹುಮಾನ ದೊರೆತಿದೆ ಎಂದು ತಿಳಿದು ಬಂದಿದೆ. ಶ್ರೀಯುತರಿಗೆ ಇತ್ತೀಚಿಗೆ ಕನ್ನಡ ಸಾಹಿತ್ಯ ಸಂಘದವರು ನಡೆಸಿದ ಅಖಿಲಕರ್ನಾಟಕ ಕಥೆಗಳ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ದೊರತ್ತದ್ದು ವಾಚಕರಿಗೆ ತಿಳಿಯದಿಲ್ಲ. ಸಾಹಿತ್ಯ, ಚಿತ್ರಕಲೆಗಳೆರಡಲ್ಲಿಯೂ ಅದ್ವಿತೀಯ ಯಶಸ್ಸನ್ನು ಗಳಿಸಿರುವ ನಮ್ಮ ತರುಣ ಗೆಳೆಯರಿಗೆ 'ವಾರ್ತಾನಿಧಿ'ಯ ಪರವಾಗಿ ಅಭಿನಂದನೆಗಳನ್ನರ್ಪಿಸಿ, ಇದರಂತೆಯೇ ಅವರ ಪ್ರತಿಭೆಗನುಗುಣವಾಗಿ ಹಲವು ಸನ್ಮಾನಗಳು ಅವರಿಗೆ ಲಭಿಸಲಿ ಎಂದು ಹಾರೈಸುತ್ತೇವೆ."

ಮೋಹನ ಇನ್ನೇನು ಮಲಗಬೇಕು ಎಂದುಕೊಳ್ಳುವ ಹೊತ್ತಿಗೆ 'ಮೋಹನ್' ಎಂದು ಯಾರೋ ಕೂಗಿದಂತಾಯಿತು. ಮೋಹನ ಬಾಗಿಲು ತೆರೆದು ಹೊರಗೆ ಬಂದ.

"ಓಹೋ, ವಸಂತ! ಏನಪ್ಪ ರಾತ್ರಿ ಇಷ್ಟು ಹೊತ್ತಿನಲ್ಲಿ ಬಂದುಬಿಟ್ಟೆ! ಒಳಗೆ ಬಾ"

ಇಬ್ಬರೂ ಮೋಹನನ ಕೊಠಡಿಯೊಳಗೆ ಬಂದು ಕುಳಿತರು.

"ನಿನಗೆ ಮೈ ಸ್ವಸ್ಥವಿಲ್ಲ ಅಂತ ರಜ ತೆಗೆದುಕೊಂಡಿದ್ದಿ ಅಂತ ಮ್ಯಾನೇಜರ್ ಹೇಳಿದರಲ್ಲ! ಅಷ್ಟು ಅರ್ಜೆಂಟಾಗಿ ನೋಡಬೇಕಾಗಿದ್ದರೆ ಹೇಳಿಕಳುಹಿಸಿದ್ದರೆ ನಾನೇ ನಿಮ್ಮ ಮನೆಗೆ ಬರುತ್ತಿದ್ದೆ. ರಾತ್ರಿ ಈ ಚಳಿ, ಗಾಳಿಯಲ್ಲಿ ಬರಬೇಕಾಗಿತ್ತೆ!" ಮೋಹನ್ ಎಂದ.

ವಸಂತ ಸುಮ್ಮನೆ ಗೋಡೆ ನೋಡುತ್ತ ಕುಳಿತಿದ್ದ. ಮೋಹನನಿಗೆ ಅವನ ರೀತಿ ಅರ್ಥವಾಗಿಯೂ ಆಗದಂತಿತ್ತು. ಅವನೂ ಸುಮ್ಮನೆ ಕುಳಿತ. ಕೊನೆಗೆ ವಸಂತನೇ ಮಾತನಾಡಿದ. "ತಪ್ಪೊಪ್ಪಿಕೊಂಡು ಕ್ಷಮಾಪಣೆ ಬೇಡಲು ಬಂದಿದ್ದೇನೆ, ಮೋಹನ್"

ಅರ್ಥವಾಗದವನಂತೆ ಕೇಳಿದ ಮೋಹನ—"ಅಂದರೆ?"

"ಕಥಾಸ್ಪರ್ಧೆಗೆ ನಿನ್ನ ಕಥೆ ಕದ್ದು ನಾನು ಕಳುಹಿಸಬಾರದಾಗಿತ್ತು. ಅದು ಕಳುಹಿಸಿದಾಗಿನಿಂದ ಎಷ್ಟು ಸಂಕಟಪಟ್ಟಿದ್ದೇನೆ ಎಂಬುದು ನನಗೇ ಗೊತ್ತು, ಮೋಹನ್. ಬಹುಮಾನದ ಆಸೆಗೆ, ಸಹಸಂಪಾದಕತ್ವದ ಆಸೆಗೆ ಮನಸ್ಸು ಸೋತು ಹಾಗೆ ಮಾಡಿದೆ; ಕತೆ ಕಳುಹಿಸಿದಾಗಿನಿಂದ ಕರುಳು ಕತ್ತರಿಸುತ್ತಿದೆ. ನನ್ನ ಕತೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದೇನೆ ಎಂದು ಕಾಗದ ಬರೆದುಬಿಡೋಣ ಎನ್ನಿಸಿತು, ಆದರೆ ಹೇಡಿ ಮನಸ್ಸು 'ಬಹುಮಾನವೇ ಬಾರದೆ ಇರಬಹುದು. ಸುಮ್ಮನೆ ಏಕೆ ಗಲಾಟೆ ಎಬ್ಬಿಸಬೇಕು?' ಎಂದು ಸಮಾಧಾನ ಹೇಳಿತು. ಬಹುಮಾನ ಬಾರದಿದ್ದರೆ ಎಷ್ಟೋ ಚೆನ್ನಾಗಿತ್ತು. ಆನಂತರದಿಂದ ನಿನ್ನ ಮುಖ ನೋಡುವುದಕ್ಕೇ ನನಗೆ ನಾಚಿಕೆಯಾಗುತ್ತಿದೆ. ನಾಳೆ ಬೆಳಗ್ಗೆ ಸಾಹಿತ್ಯ ಸಂಘಕ್ಕೆ ನಿಜಾಂಶ ತಿಳಿಸಿ ಕಾಗದ ಬರೆಯುತ್ತೇನೆ. ನಿನ್ನ ಕ್ಷಮೆ ಬೇಡಬೇಕೆಂದು ಬಂದೆ; ದಯವಿಟ್ಟು ಕ್ಷಮಿಸಿಬಿಡು, ಮೋಹನ್."

ವಸಂತನ ಕಣ್ಣ ಕೊನೆಯಲ್ಲಿ ನೀರ ಹನಿ ಮಿಂಚುತ್ತಿದ್ದುದನ್ನು ಮೋಹನ ನೋಡಿದ.

"ನಾನೂ ಕ್ಷಮೆ ಬೇಡಬೇಕು, ವಸಂತ್. ಮದರಾಸಿಗೆ ನಿನ್ನ ಹೆಸರಿನಲ್ಲಿ ನಾನೇ ಚಿತ್ರ ಕಳುಹಿಸಿಕೊಟ್ಟೆ. ಇವತ್ತು ಕಚೇರಿಗೆ ಬಹುಮಾನಗಳ ವಿವರ ಬಂತು. ನಾನೇ ಪತ್ರಿಕೆಯಲ್ಲಿ ನಿನ್ನ ಚಿತ್ರ ಹಾಕಿಸಿದವನು."

"ನೀನೇ ಮದರಾಸಿಗೆ ಚಿತ್ರಕಳುಹಿಸಿದೆ ಎಂದು ನನಗೆ ಗೊತ್ತಾಯಿತು."

"ಅದು ಹೇಗೆ?" ಮೋಹನ ಆಶ್ಚರ್ಯದಿಂದ ಕೇಳಿದ.

"ಚಿತ್ರದ ಕೆಳಗೆ 'ಅವರ ಪ್ರತಿಭೆಗನುಗುಣವಾಗಿ ಹಲವು ಸನ್ಮಾನಗಳು ದೊರೆಯಲೆಂದು ಹಾರೈಸುತ್ತೇವೆ'' ಎಂದಿರಲಿಲ್ಲವೇ? ಅದರ ವ್ಯಂಗ್ಯದಿಂದಲೇ ನನಗೆ ಎಲ್ಲ ಅರ್ಥವಾಯಿತು."

ಸ್ವಲ್ಪ ಹೊತ್ತು ಇಬ್ಬರೂ ಮಾತನಾಡಲಿಲ್ಲ. ಕೊನೆಗೆ ಮೋಹನ ಹೇಳಿದ—"ಆದದ್ದು ಆಗಿ ಹೋಯಿತು. ನನ್ನ ಮುಯ್ಯಿ ತೀರಿತು. ನೀನೇನೂ ಸಂಘಕ್ಕೆ ಕಾಗದ ಬರೆಯಬೇಡ."

ವಸಂತನ ಬಲವಂತದಿಂದ ಮೋಹನ ಎರಡು ಸ್ಪರ್ಧೆಗಳ ಬಹುಮಾನಗಳ ಹಣವನ್ನೂ ತೆಗೆದುಕೊಂಡ. ಆದರೆ ಅದನ್ನು ಉಪಯೋಗಿಸದೆ, ಸಣ್ಣ ಕತೆಗಳ ಸ್ಪರ್ಧೆ ನಡೆಸುವುದಕ್ಕೆಂದು 'ವಾರ್ತಾನಿಧಿ' ಪತ್ರಿಕೆಗೆ ಕೊಟ್ಟಿದ್ದಾನೆ. ಆದರೆ ಅವರಿಬ್ಬರು ಈಗ ಯಾವ ಸ್ಪರ್ಧೆಯಲ್ಲಿಯೂ ಭಾಗವಹಿಸುವುದಿಲ್ಲ.

ಅವರು ತೋರಿಸಿದ ದಾರಿ

೧

ಮದುವೆಯ ಚಪ್ಪರದಲ್ಲಿ ಇನ್ನೂ ದೀಪ ಉರಿಯುತ್ತಿತ್ತು. ಹುಡುಗರೆಲ್ಲ ಆಗಲೇ ಮಲಗಿ ನಿದ್ದೆ ಹೋಗಿದ್ದರು. ಉಳಿದವರಿಗೂ ಹಾಸಿಗೆ ಕಂಡರೆ ಸಾಕೆನ್ನಿಸಿತ್ತು. ಬೆಳಗ್ಗೆ ನಾಗೋಲಿ, ಸಂಜೆ ಮೆರವಣಿಗೆ ಎಲ್ಲ ಮುಗಿದು, ಮದುವೆಯ ಶಾಸ್ತ್ರಗಳೆಲ್ಲ ಮುಗಿದಂತೆಯೇ ಆಗಿದ್ದುದರಿಂದ ಒಂದು ಸಮಾಧಾನ. ಅಂತೂ ಒಬ್ಬೊಬ್ಬರಾಗಿ ತಮ್ಮ ಕೆಲಸ ಮುಗಿಸಿ ಹಾಸಿಗೆಯನು ಕಂಡರೆ ಸಾಕೆಂದು ಜಾರುತ್ತಿದ್ದರು. ಒಂದು ಮೂಲೆಯಲ್ಲಿ ಮಾತ್ರ ಕೆಲವರು ಮುದುಕರು ಕೂತು ಮಾತನಾಡಿಕೊಳ್ಳುತ್ತಿದ್ದರು.

ಅವರ ಮಾತು ಆ ವಿಷಯ ಈ ವಿಷಯ ಬಳಸಿ ಗಂಡುಮಕ್ಕಳ ವಿಷಯಕ್ಕೆ ಬಂದಿತ್ತು. ಪ್ರತಿಯೊಬ್ಬರೂ ತಮ್ಮ ದುಃಖವನ್ನು ತೋಡಿಕೊಳ್ಳುತ್ತಿದ್ದರು.

"ನಮ್ಮ ಹುಡುಗನ ಹಣೆಯಲ್ಲಿ ಡಿಗ್ರಿ ತೊಗೊಳ್ಳೋದೇ ಬರೆದಿಲ್ಲವೇನೊ! ಆಗಲೇ ಇಪ್ಪತ್ತನಾಲ್ಕು ತುಂಬ್ತು ಮೊನ್ನೆ ವೈಶಾಖಕ್ಕೆ." ಒಬ್ಬರೆಂದರು.

"ನಿಮ್ಮ ಹುಡುಗ ಡಿಗ್ರಿ ತಗೊಳಿಲ್ಲ ಅಂತ ಒಂದೇ ನಿಶ್ಚಿಂತೆ. ನಮ್ಮೋನ್ನ ನೋಡಿ. ಬಿ. ಯಸ್ಸಿ. ಮಾಡಿದ. ಆ ಮೇಲೆ ಲಾಯರ್ರಾಗ್ತೇನೆ ಅಂತ ಇನ್ನೆರಡು ಸಾವಿರ ದಂಡಮಾಡಿ ಬಿ. ಎಲ್. ಮಾಡಿದ. ಈಗ ನೊಣ ಹೊಡೀತಾ ಕೂತಿದ್ದಾನೆ. ಸರ್ಕಾರಿ ಕೆಲಸಕ್ಕೆ ಸೇರು ಅಂದ್ರೆ ಅವನಿಗೆ ಮರ್ಯಾದೆಗೆ ಕಡಮೆ ಅಂತೆ," ಇನ್ನೊಬ್ಬರ ಮಾತು.

"ನಮ್ಮ ಶಂಕರ ಕೈತುಂಬ ಸಂಬಳ ತರ್ತಾನೆ, ಆದ್ರೆ ನಮುಗ್ಬಂದ ಭಾಗ್ಯ ಏನೂಂತೀರಿ? ನನಗೆ ನನ್ನ ಹೆಂಡತಿಗೆ ಕಣ್ಣೀರಿನ ಮಜ್ಜಿಗೇನೇ ಗತಿ. ಎಲ್ಲ ಅವನ್ಹೆಂಡ್ತಿ ಆ ತಾಟಕಿ ಪ್ರಭಾವ," ಮತ್ತೊಬ್ಬರು ಹೇಳಿದರು.

"ನಮ್ಮ ಕಿಟ್ಟನಿಗೆ ಮುನ್ನೂರು ರೂ. ಬರತ್ತಂತೆ, ಡೆಲ್ಲೀಲಿ. ನಮಗಿಲ್ಲಿ ತಾಪತ್ರಯ ಏನೂ ಹರೀಲಿಲ್ಲ," ನಾಲ್ಕನೆಯವರು ಹೇಳಿದರು.

"ಅಂತೂ ಏನೇ ಆಗಲಿ, ಮಕ್ಕಳಿಲ್ಲಾಂತ ಕೊರಗೋದು, ಮಕ್ಕಳಾದ ಮೇಲೆ ಅವರಿಗೋಸ್ಕರ ಕೊರಗೋದು, ಆ ಮೇಲೆ ಅವರ ದೆಸೆಯಿಂದ ಕೊರಗೋದು ಮನುಷ್ಯ ಜನ್ಮಕ್ಕೇ ಬಂದಿದೇಂತ ಕಾಣುತ್ತೆ" ಒಬ್ಬ ವೃದ್ಧರು ನುಡಿದರು.

ಅದುವರೆಗೆ ಸುಮ್ಮನೆ ಎಲ್ಲ ಕೇಳುತ್ತ ಕುಳಿತಿದ್ದ ವೆಂಕಟಕೃಷ್ಣಪ್ಪನವರು ಆಗ ಬಾಯಿ ತೆರೆದರು. "ಸರಿಸರಿ, ಅದೆಲ್ಲ ಸುಳ್ಳುಮಾತು. ಎಲ್ಲ ನಾವು ಹುಡುಗರನ್ನ ಹೇಗೆ ಬೆಳೆಸ್ತೀವಿ ಅನ್ನೋದನ್ನ ಅವಲಂಬಿಸಿದೆ. ನಾವು ಮೊದಲಿನಿಂದ ಸರಿಯಾದ ದಾರಿ ತೋರಿಸಿ ಬೆಳಸಿದರೆ ಅವರು ಸರಿಯಾಗಿ ಬಾಳ್ತಾರೆ. ಅದು ಗೊತ್ತಿಲ್ಲದೆ, ಮಕ್ಕಳನ್ನ ಸರಿಯಾಗಿ ಬೆಳೆಸದೆ, ಆ ಮೇಲೆ ಹಣೆಬರಹ ಅಂದರೆ ಏನು ಬಂತು ಭಾಗ್ಯ? ಗಂಡನ್ನ ಬಾಳಿಸದ ಗರತಿ, ಮಕ್ಕಳ್ನ ಬೆಳೆಸದ ತಂದೆತಾಯಿ ಒಂದೇ ಪಙ್ತಿ," ಎಂದರು.

"ನಿಮಗೇನು ವೆಂಟಕೃಷ್ಣಪ್ಪನವರೆ? ಮುತ್ತಿನಂತಹ ಮಗ. ಬುದ್ಧಿವಂತ, ನಿಮಗೆ ವಿಧೇಯನಾಗಿದ್ದಾನೆ, ಸಂಬಳ ತರುತ್ತಾನೆ, ದೇವರು ಅನುಗ್ರಹ ಮಾಡಿದ್ದಾನೆ; ಇತರರಿಗೆ ಬೊಟ್ಟು ತೋರಿಸಬಹುದು." ಮೊದಲು ಮಾತನಾಡಿದವರು ಉತ್ತರ ಕೊಟ್ಟರು.

"ನಮ್ಮ ಮೂರ್ತಿ ಮುತ್ತಿನಂತಹ ಹುಡುಗ ಅನ್ನೋದು ನಿಜ, ಆದ್ರೆ ಅವನ್ನ ಹಾಗೆ ಬೆಳೆಸಿದ್ದಕ್ಕೆ ಅವನು ಮುತ್ತಿನಂತಹ ಹುಡುಗ ಆದ. ಇಲ್ಲದೇ ಇದ್ದಿದ್ದರೆ ನಮ್ಮ ಕೈ ಹತ್ತೋದೇ ಕಷ್ಟವಾಗ್ತಿತ್ತು," ವೆಂಕಟಕೃಷ್ಣಪ್ಪನವರು ಹೆಮ್ಮೆಯಿಂದ ನುಡಿದರು.

ಅಷ್ಟು ಹೊತ್ತಿಗೆ ಒಂದು ಮಗು ಬಂದು, "ತಾತ, ಮಲಗಿಕೊಳ್ಳೋದಕ್ಕೆ ಬರಬೇಕಂತೆ; ಅಣ್ಣ ಕೂಗೂಂದ," ಎಂದಿತು. ಮಗುವಿನ ತಾತ, "ಹೂಂ, ಎಷ್ಟು ಹೊತ್ತಾಯಿತೋ ಏನೋ, ಮಲಗಿಕೊಳ್ಳೋಣ," ಎನ್ನುತ್ತ ಎದ್ದು, ಮಗುವನ್ನೂ ಎತ್ತಿಕೊಂಡು ಒಳಗೆ ಹೋದರು. ಗುಂಪು ಚದರಿತು.

ವೆಂಕಟಕೃಷ್ಣಪ್ಪನವರಿಗೆ ಮಲಗಿಕೊಂಡರೂ ನಿದ್ದೆ ಬರಲಿಲ್ಲ. ಆಗ ತಾನೆ ಆಡಿದ್ದ ಮಾತು ಕಿವಿಯಲ್ಲಿ ನೆಲಸಿತ್ತು. "ಹುಂ, ಇದ್ದದ್ದರಲ್ಲಿ ನಾನೇ ಪುಣ್ಯವಂತ. ಎಲ್ಲರೂ ಮಕ್ಕಳು ತಮ್ಮನ್ನು ಸರಿಯಾಗಿ ನೋಡಿಕೊಳ್ತಾ ಇಲ್ಲ ಅಂತ ವ್ಯಥೆಪಡ್ತಾರೆ. ಪ್ರತಿಯೊಬ್ಬರಿಗೂ ಮಕ್ಕಳ ವಿಷಯದಲ್ಲಿ ಒಂದಲ್ಲ ಒಂದು ದುಃಖ. ನಾನೇ ಪುಣ್ಯವಂತ," ಎಂದುಕೊಂಡರು. ಮಗ ಬಿ. ಎಸ್ಸಿ. ಮಾಡಿದ್ದ. ಚಿಕ್ಕ ವಯಸ್ಸಿನಲ್ಲಿಯೇ ಪ್ರಥಮ ತರಗತಿಯಲ್ಲಿ ತೇರ್ಗಡೆಯಾಗಿದ್ದ. ಈಗ ಸೆಕ್ರೆಟೇರಿಯೆಟ್‌ನಲ್ಲಿ ಗುಮಾಸ್ತೆಯಾಗಿದ್ದ, 45 ರೂ. ಸಂಬಳ ಬರುತ್ತಿತ್ತು. "ದೇವರ ಅನುಗ್ರಹವೇನೋ ನಿಜ. ಆದರೂ ನಾನು ಮೊದಲಿನಿಂದ ಅವನನ್ನ ಸರಿಯಾಗಿ ನೋಡಿಕೊಳ್ಳದೇ ಇದ್ದರೆ ಹುಡುಗ ಕೈ ಹತ್ತುತ್ತಿದ್ದನೆ? ದೊಡ್ಡವರು ಹುಡುಗರಿಗೆ ಸರಿಯಾದ ದಾರಿ ತೋರಿಸಬೇಕು," ಎಂದು ಕೊಂಡು ಬೇರೆ ಮಗ್ಗುಲಿಗೆ ತಿರುಗಿ ಮಲಗಿಕೊಂಡರು.

೨

"ಕ್ಷೀರಸಾಗರಾಆಆಆ ಶಯನಾಆಆ"

ವೆಂಕಟಕೃಷ್ಣಪ್ಪನವರು ಬರೆಯುತ್ತಿದ್ದುದನ್ನು ನಿಲ್ಲಿಸಿ ಹಾಡನ್ನು ಕೇಳಿದರು. ಹಾಡು ಹೇಳುತ್ತಿದ್ದವನು ತಮ್ಮ ಮಗ ಮೂರ್ತಿಯೇ ಎನ್ನುವುದು ಖಚಿತವಾಯಿತು. ತಟ್ಟನೆ ಎದ್ದರು, ಮತ್ತೆ ಏನು ತೋರಿತೋ ಕುಳಿತುಕೊಂಡರು. ಆ ಹಾಡು ಮುಗಿಯಿತು. ಇನ್ನೊಂದು ಹಾಡನ್ನು ಆರಂಭಿಸಿದ ಮೂರ್ತಿ.

"ಜಯಜಯ ಗೋಕುಲ ಬಾಲ"

ಧ್ವನಿ ಇಂಪಾಗಿತ್ತು; ಆದರೆ ಸಂಗೀತ ಶಾಸ್ತ್ರದ ಜ್ಞಾನ ಅಷ್ಟಾಗಿ ಇರಲಿಲ್ಲ ಎನ್ನುವುದು ಸ್ಪಷ್ಟವಾಗಿತ್ತು. ರಾಗ ತಾಳ ಜ್ಞಾನ ಸಾಲದಾಗಿತ್ತು. ವೆಂಕಟಕೃಷ್ಣಪ್ಪನವರಿಗೆ ತಮ್ಮ ಸ್ನೇಹಿತರು ಗೋಪಾಲರಾಯರು ಹಿಂದಿನ ದಿನ ಹೇಳಿದ್ದ ಮಾತು ನೆನಪಿಗೆ ಬಂತು. "ವೆಂಕಟಕೃಷ್ಣಪ್ಪನವರೇ, ನಿಮ್ಮ ಮಗ ನಿನ್ನೆ ನಮ್ಮ ಮನೇಲಿ ಎರಡು ಹಾಡು ಹೇಳಿದ; ಚೆನ್ನಾಗಿ ಹಾಡುತ್ತಾನೆ. ಶಾರೀರ ಸೊಗಸಾಗಿದೆ. ಸರಿಯಾಗಿ ಶಿಕ್ಷಣ ಕೊಡಿಸಿದರೆ ಹುಡುಗ ಮುಂದಕ್ಕೆ ಬರುತ್ತಾನೆ" ಎಂದು.

ಲೇಖಣಿಯನ್ನು ಮೇಜಿನ ಮೇಲಿಟ್ಟು ಮಗನ ಕೊಠಡಿಗೆ ಹೋದರು ವೆಂಕಟಕೃಷ್ಣಪ್ಪ. ಸಂಗೀತದಲ್ಲಿ ತಲ್ಲೀನನಾಗಿದ್ದ ಹುಡುಗನಿಗೆ ತಂದೆ ಬಂದದ್ದು ಗೊತ್ತಾಗಲಿಲ್ಲ. ಇನ್ನೊಂದು ಹಾಡು ಆರಂಭಮಾಡಿದ್ದ.

"ರಘುವಂಶಸುಧಾಂಬುಧಿಚಂದ್ರ ಶ್ರೀ"

"ಮೂರ್ತೀ"

ಹುಡುಗ ಹಾಡು ನಿಲ್ಲಿಸಿ ತಂದೆಯ ಕಡೆ ತಿರುಗಿದ.

"ಬಾ ಇಲ್ಲಿ"

ಹತ್ತಿರ ಬಂದ. ಮುಖದಲ್ಲಿ ಆಶ್ಚರ್ಯ, ಭಯ ಎರಡೂ ಸೇರಿತ್ತು.

"ಸಂಗೀತ ಎಲ್ಲಿ ಕಲಿತೆ?"

"ನಮ್ಮ ಕ್ಲಾಸಿನ ರಾಜಾರಾಂ ತಂದೆ ಆಸ್ಥಾನವಿದ್ವಾಂಸರಪ್ಪಾ. ಅವರ ಮನೆಗೆ ಹೋದಾಗ ಒಂದು ದಿನ 'ಏನಾದರೂ ಹಾಡು' ಅಂದ್ರು. ನನಗೆ ಏನೂ ಬರೋದಿಲ್ಲ ಅಂತ ಹೇಳಿದೆ. 'ಪರವಾಗಿಲ್ಲ, ಬಂದ ಹಾಡು ಬಂದ ಹಾಗೆ ಹೇಳು' ಅಂದ್ರು. ನನಗೆ ಬಂದಹಾಗೆ ಹಾಡೊಂದು ಹೇಳಿದೆ—" ಹುಡುಗ ಅನುಮಾನಿಸುತ್ತ ಹೇಳಿ ನಿಲ್ಲಿಸಿದ.

"ಆ ಮೇಲೆ?''

"ಚೆನ್ನಾಗಿ ಹಾಡುತ್ತೀಯಪ್ಪ, ಸ್ವಲ್ಪ ಅಭ್ಯಾಸ ಮಾಡಿದರೆ ಒಳ್ಳೆಯ ಸಂಗೀತಗಾರನಾಗುತ್ತಿ'' ಅಂತ ಹೇಳಿದರು. ಅವತ್ನಿಂದ ಅವರ ಮನೆಗೆ ಹೋದಾಗ ಸ್ವಲ್ಪ ಸಂಗೀತ ಕಲಿಯುತ್ತೇನೆ.

ವೆಂಕಟಕೃಷ್ಣಪ್ಪನವರು ಒಂದು ನಿಮಿಷ ಹುಡುಗನ ಮುಖವನ್ನೇ ದೃಷ್ಟಿಸುತ್ತಿದ್ದರು. ಆ ಮೇಲೆ ಹೊರಟು ಹೋದರು.

ಮರುದಿನ ಎದ್ದವರೇ ರಾಜಾರಾಂ ಮನೆಗೆ ಹೋದರು. ಆ ಹುಡುಗನ ತಂದೆ ಆಸ್ಥಾನ ವಿದ್ವಾಂಸರೂ ಅವರಿಗೆ ಅಪರಿಚಿತರಲ್ಲ; ಅವರನ್ನು ಕಂಡು ತನ್ನ ಮಗನ ಸಂಗೀತ ಪ್ರೇಮವನ್ನು ಪ್ರಸ್ತಾಪಿಸಿದರು. ಆಸ್ಥಾನ ವಿದ್ವಾಂಸರು, ''ನಿಮ್ಮ ಹುಡುಗನಿಗೆ ಸಂಗೀತದಲ್ಲಿ ಒಳ್ಳೆ ಅಭಿರುಚಿ ಇದೆ. ಇಂಪಾದ ಶಾರೀರ ಇದೆ. ನನ್ನ ಕೈಯಲ್ಲಿ ಬಿಡಿ ಬೇಕಾದರೆ, ನಿಮಗೆ

ನನಗೆ ಇಬ್ಬರಿಗೂ ಹೆಸರು ತರುತ್ತಾನೆ'' ಎಂದರು. ವೆಂಕಟಕೃಷ್ಣಪ್ಪನವರು ಸ್ವಲ್ಪ ಅನುಮಾನಿಸಿದರು. "ಮಗ ಬಿ. ಎ., ಎಂ. ಎ. ತೆಗೆದುಕೊಳ್ಳಲಿ ಎಂದು ನನ್ನ ಆಸೆ ಇತ್ತು. ಸಂಗೀತಕ್ಕೆ ಬಿದ್ದ ಮೇಲೆ ಹೇಗೋ ಏನೋ'' ಎಂದುಕೊಂಡರು. ವಿದ್ವಾಂಸರು "ಮತ್ತೇನೂ ಯೋಚನೆ ಮಾಡಬೇಡಿ, ವೆಂಕಟಕೃಷ್ಣಪ್ಪ, ದೇವರು ಕೊಟ್ಟ ಕೌಶಲ್ಯವನ್ನು ಉಪಯೋಗಿಸದೆ ಕುಕ್ಕು ಹಿಡಿಸುವುದೂ ತಪ್ಪು'' ಎಂದರು. "ಸರಿ, ದೇವರ ಚಿತ್ತ" ಎಂದು ಬಿಟ್ಟರು ವೆಂಕಟಕೃಷ್ಣಪ್ಪನವರು. ಮೂರ್ತಿ ಅದೇ ವಿದ್ವಾಂಸರ ಶಿಷ್ಯನಾದ.

ಅದರ ಫಲ ಇಂದು ಬಿಟ್ಟಿತ್ತು. ಮೂರ್ತಿಯ ಹೆಸರೆಂದರೆ ಮನೆ ಮಾತಾಗಿತ್ತು. 'ಪುರುಷ ಸರಸ್ವತಿ' ಎನ್ನುತ್ತಿದ್ದರು ವಿದ್ವಾಂಸರೆಲ್ಲ ಅವನನ್ನು. ಮಹಾರಾಜರಿಂದ ಬಿರುದು ಬಂದಿತ್ತು. ಬೆಂಗಳೂರಿನ ಜನವೆಲ್ಲ ನೆರೆದಿತ್ತು ಇವತ್ತು ಅವನಿಗೆ ಗೌರವ ಸಲ್ಲಿಸಲು. ಮಾತನಾಡಿದವರೆಲ್ಲ ಅವನನ್ನು ಹೊಗಳುವವರೆ. ಇಂತಹ ಪ್ರತಿಭಾಮೂರ್ತಿ ಇಲ್ಲಿ ಹುಟ್ಟಿದುದು ಈ ಊರಿನ ಭಾಗ್ಯ ಎನ್ನುವವರೆ. ಕೊನೆಯಲ್ಲಿ ದೊಡ್ಡ ಹೂವಿನ ಹಾರ, ಅದರೊಡನೆ ಥಳಥಳಿಸುವ ಚಿನ್ನದ ಹಾರ ಅವನ ಕೊರಳಿಗೆ ಅಧ್ಯಕ್ಷರು ಹಾಕಿದರು. ಮೂರ್ತಿ ಮಾತನಾಡುವುದಕ್ಕೆ ನಿಂತ. "ಅಧ್ಯಕ್ಷರೆ, ಹಿರಿಯರೆ, ಸಂಗೀತಾಭಿಮಾನಿಗಳೆ, ಇಂದು ನನ್ನ ವಿಷಯದಲ್ಲಿ ನೀವು ತೋರಿಸಿರುವ ಆದರ, ನನಗೆ ನೀವು ಮಾಡಿರುವ ಸತ್ಕಾರ ಇವುಗಳಿಂದ ನಾನು ಮೂಕನಾಗಿದ್ದೇನೆ. ಇಂತಹ ಗೌರವ ಭಾಗ್ಯಕ್ಕೆ ನಾನು ಅರ್ಹನಲ್ಲ. ಆದರೂ ತಾವು ವಿಶ್ವಾಸದಿಂದ ನನ್ನಲ್ಲಿರುವ ಅಲ್ಪ ಗುಣವನ್ನೇ ಹಿರಿಯದಾಗಿ ಭಾವಿಸಿ ಇಷ್ಟು ಸತ್ಕಾರ ಮಾಡಿದ್ದೀರಿ. ನಾನು ಸಂಗೀತದಿಂದ ತಮ್ಮ ಸೇವೆ ಮಾಡಲು ಸಾಧ್ಯವಾಗಿದ್ದರೆ, ಅದರ ಕೀರ್ತಿ ಇಬ್ಬರಿಗೆ ಸಲ್ಲಬೇಕು. ನನ್ನ ತೀರ್ಥರೂಪರು ಮತ್ತು ನನ್ನ ಗುರುಗಳು. ನನ್ನ ತೀರ್ಥರೂಪರು ಮೊದಲಿನಿಂದ ನನಗೆ ಪ್ರೋತ್ಸಾಹ ಕೊಡದೆ ಇದ್ದರೆ ನನಗೀ ಭಾಗ್ಯ ಒದಗುತ್ತಲೇ ಇರಲಿಲ್ಲ—''

ಅಷ್ಟು ಹೊತ್ತಿಗೆ ವೆಂಕಟಕೃಷ್ಣಪ್ಪನವರಿಗೆ ಎಚ್ಚರಿಕೆಯಾಯಿತು. ಮದುವೆ ಮನೆಯಲ್ಲಿ ಮಗುವೊಂದು ಗಟ್ಟಿಯಾಗಿ ಅಳುತ್ತಿತ್ತು. ಅದರ ತಾಯಿಗೆ ಇನ್ನೂ ಎಚ್ಚರವಾಗಿರಲಿಲ್ಲವೇನೊ!

ಆಗತಾನೆ ಮುಗಿದ ಕನಸು ಇನ್ನೂ ವೆಂಕಟಕೃಷ್ಣಪ್ಪನವರ ಮನಸ್ಸಿನಲ್ಲಿ ನೆಲಸಿತ್ತು. ಮೂರ್ತಿ 'ಕ್ಷೀರಸಾಗರ ಶಯನ' ಹಾಡುತ್ತಿದ್ದುದು, ತಾವು

ಅವನ ಕೊಠಡಿಗೆ ಹೋದದ್ದು, ಅಂಜುತ್ತಂಜುತ್ತ ತಾನು ಸಂಗೀತ ಕಲಿಯುತ್ತಿದ್ದೇನೆಂದು ಒಪ್ಪಿಕೊಂಡದ್ದು ಎಲ್ಲ ನೆನಪಿತ್ತು. ಹದಿಮೂರು ವರ್ಷಗಳ ಕೆಳಗೆ ನಿಜವಾಗಿ ಹಾಗೆಯೇ ನಡೆದಿತ್ತು. ಕನಸಿನಲ್ಲಿ ನಡೆದಂತೆಯೇ ಮೂರ್ತಿ ತಾನು ರಾಜರಾಂ ಮನೆಯಲ್ಲಿ ಸಂಗೀತ ಅಭ್ಯಾಸ ಮಾಡುತ್ತಿದ್ದೇನೆಂದು ಒಪ್ಪಿದ್ದ. ಆದರೆ ಕನಸಿನಲ್ಲಿ ವೆಂಕಟಕೃಪ್ಪನವರು ವಿದ್ವಾಂಸರನ್ನು ಕಂಡು, ಮೂರ್ತಿ ಅವರಲ್ಲಿ ಸಂಗೀತ ಕಲಿಯಲು ಏರ್ಪಾಡು ಮಾಡಿದರು. ಆದರೆ, ನಿಜವಾದ ಜೀವನದಲ್ಲಿ ಹಾಗೆ ಆಗಿರಲಿಲ್ಲ. "ನೀನು ಸಂಗೀತಕ್ಕೆ ಸೇರಿದ ಮೇಲೆ ಓದಿಗೆ ಎಳ್ಳು ನೀರು ಬಿಟ್ಟ ಹಾಗೆ. ಸದ್ಯ ಓದಿ ಎಸ್. ಎಸ್. ಎಲ್. ಸಿ. ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡು, ಸಾಕು "ಈಗಲೇ ಸ್ನೇಹಿತರು, ಕ್ರಿಕೆಟ್ ಅಂತ ಕುಣಿದು ಕುಪ್ಪಳಿಸೋದರಲ್ಲಿ ಪಾಠ ಬೇಕಿಲ್ಲ ನಿನಗೆ, ಆ ಮೇಲೆ ಕತ್ತೆಕಾಯೋದಕ್ಕೆ ಹೋಗಬೇಕಾಗತ್ತೆ," ಎಂದು ಬಿಟ್ಟಿದ್ದರು. ಮೂರ್ತಿಯ ಸಂಗೀತ ಅಭ್ಯಾಸ ಅಲ್ಲಿಗೆ ನಿಂತಿತು.

ಇದೆಲ್ಲ ನೆನಪಿಗೆ ಬಂತು ವೆಂಕಟಕೃಷ್ಣಪ್ಪನವರಿಗೆ. ಹಾಗಾದರೆ ತಾವು ಮಾಡಿದುದು ತಪ್ಪೇ? ಮೂರ್ತಿ ಸಂಗೀತ ಕಲಿತು ಕೀರ್ತಿಶಾಲಿಯಾಗುವುದಕ್ಕೆ ತಾವೇ ಅಡ್ಡಿಯಾದರೆ? ತಾವು ಅವನನ್ನು ಸಂಗೀತಕ್ಕೆ ಸೇರಿಸಿದ್ದರೆ ಕನಸಿನಲ್ಲಿ ಕಂಡಂತೆ ಅವನು ಯಶಃಪೂರ್ಣನಾಗುತ್ತಿದ್ದನೆ? ಕನಸಿನಲ್ಲಿ ಅವರು ಕಂಡ ವೈಭವ ಮನಸ್ಸನ್ನು ಸೂರೆಗೊಂಡಿತ್ತು. ಈಗ ಗುಮಾಸ್ತೆಯಾಗಿ ನಲವತ್ತೈದು ರೂಪಾಯಿ ತೆಗೆದುಕೊಳ್ಳುತ್ತಿದ್ದ ಮೂರ್ತಿಯೆಲ್ಲಿ? ಕನಸ್ಸಿನಲ್ಲಿ ಕೇಳುವವರ ಕಿವಿಯ ಭಾಗ್ಯವಾಗಿ ಎಲ್ಲರ ಮನ್ನಣೆವಡೆದ ಹಿರಿಯ ವಿದ್ವಾಂಸನೆಲ್ಲಿ? ಏನೂ ತೋರದೆ ಆ ಕಡೆಯಿಂದ ಈ ಕಡೆಗೆ ತಿರುಗಿ ಮಲಗಿದರು. ಗಡಿಯಾರ ಒಂದು ಹನ್ನೆರಡು ಹೊಡೆಯಿತು.

೩

"ಏನು ವೆಂಕಟಕೃಷ್ಣಪ್ಪನೋರೆ ಬಹಳ ಯೋಚನೆ ಮಾಡ್ತಾ ಇದ್ದೀರಿ?"

"ಯೋಚನೆ ಏನ್ಬಂತು ಮಹಾ? ನಮ್ಮ ಮೂರ್ತಿ ಇನ್ನೂ ಏನೂ ಸುದ್ದಿ ಕಳುಹಿಸಲಿಲ್ಲವಲ್ಲಾ ಅಂತ ನೋಡ್ತಾ ಇದ್ದೆ, ಅಷ್ಟೇ"

"ಅಯ್ಯೋ, ಅದಕ್ಯಾಕೆ ಯೋಚನೆ ಮಾಡುತ್ತೀರಿ ಸ್ವಾಮಿ? ನಿಮ್ಮ ಮೂರ್ತಿ ಗೆಲ್ಲೋದರಲ್ಲಿ ಸ್ವಲ್ಪವೂ ಅನುಮಾನವಿಲ್ಲ."

"ಆದರೂ........"

"ಆದರೂ ಗೀದರೂ ಅಂತ ಅಂದುಕೊಳ್ಳಲೇ ಬೇಡಿ. ಮೂರ್ತಿ ಮಾತಾಡಿದನ್ನ ಒಂದು ಸಲ ಕೇಳಿದೋನು ಯಾರೂ ಇನ್ಯಾರಿಗೂ ಓಟು ಕೊಡೋದಕ್ಕೆ ಸಾಧ್ಯವೇ ಇಲ್ಲ."

"ಹೌದು, ರಾಮಯ್ಯ. ಆದರೆ—"

"ಸರಿ ಸರಿ, ಯಾಕಿಷ್ಟು ಅನುಮಾನಿಸ್ತೀರಿ? ಆ ಹುಡುಗನ ನಾಲಿಗೇಲಿ ಸರಸ್ವತಿ ನೆಲಸಿದ್ದಾಳೆ, ಸ್ವಾಮಿ. ಚಿಕ್ಕ ವಯಸ್ಸಿನಿಂದ ಹಾಗೆಯೇ. ಆವಾಗ ೧೯೪೨ರಲ್ಲಿ ಗಲಾಟೆ ಆಯ್ತು ನೋಡಿ, ಆಗ ಇನ್ನೂ ಬಿ. ಎಸ್ ಸಿ. ಲಿ ಓದ್ತಾ ಇದ್ದ. ಹುಡುಗ ಏನು ಪ್ರಚಂಡ ಭಾಷಣ ಮಾಡಿದ ಸ್ವಾಮಿ! ನಾಲ್ಕು ಸಾವಿರ ಜನ ವಿದ್ಯಾರ್ಥಿಗಳು ಸೇರಿದ ಸಭೇಲಿ ಅರ್ಧ ಗಂಟೆ ಒಂದು ಸಲ ತಡವರಿಸದೆ ಕನ್ನಡದಲ್ಲಿ ಮಾತಾಡಿದನೇ! ಅದೂ ಎಂತಹ ಭಾಷಣ! ಇತರರ ಹಾಗೆ ಸುಮ್ಮನೆ 'ಗಾಂಧೀಕಿ, ಜೈ' 'ವಂದೇ ಮಾತರಂ' ಅಂತ ಅರಚಿದನೇ! ಗಂಭೀರವಾಗಿ, ಮನಸ್ಸು ಮುಟ್ಟೋ ಹಾಗೆ ಮಾತನಾಡಿದ! ಕೂದಲು ನರೆತವನು ನಾನು ರಸ್ತೇಲಿ ಹೋಗ್ತಾ ಇದ್ದವನು ಹಾಗೆಯೇ ನಿಂತು ಕೇಳಿದೆ, ಮೈ 'ಜುಂ' ಅಂತು ವೆಂಕಟಕೃಷ್ಣಪ್ನೋರೆ! ಇವತ್ತಿಗೂ ನಮ್ಮ ಮನೆ ಹುಡುಗರು ಜ್ಞಾಪಿಸಿಕೊಳ್ತಾ ಇರ್ತಾರೆ ಅವನ ಉಪನ್ಯಾಸಗಳ್ನ."

"ಅಯ್ಯೋ ಬರೀ ಮಾತಾಡಿದ್ರೆ ಆಯ್ತೆ ರಾಮಯ್ಯ? ಮಾತಿಗೇನು, ಎಲ್ಲರೂ ಆಡುತ್ತಾರೆ."

"ಎಲ್ಲಾರೂ ಆಡ್ತಾರೆ ಸ್ವಾಮಿ, ಬಂದ ಭಾಗ್ಯ ಏನು? ನಿಮ್ಮ ಮೂರ್ತಿ ಹಾಗೇ ಮಾತಾಡೋದಕ್ಕೂ ವರ ಪಡೆದಿರಬೇಕು. ಅಷ್ಟೇ ಅಲ್ಲ, ಆಗಿಂದ ನೋಡಿ, ಎಷ್ಟು ದೊಡ್ಡ ರೀತಿಲಿ ನಡಕೊಂಡು ಬರ್ತಾ ಇದ್ದಾನೆ ಹುಡುಗ! ಇತರ ಕಾಂಗ್ರೆಸ್‌ನೋರ ಹಾಗೆ ಒಳಗಿನ ಕಪ್ಪು ಮುಚ್ಚೋದಕ್ಕೆ ಹೊರಗೆ ಖಾದಿ ಬಿಳುಪಲ್ಲ. ಅಂತಹ ಮಗನ್ನ ಪಡೆಯೋದಕ್ಕೆ ಪುಣ್ಯ ಮಾಡಿರಬೇಕು"

ಅಷ್ಟು ಹೊತ್ತಿಗೆ ಹೊರಗೆ 'ಸಾರ್' ಎಂದು ಯಾರೋ ಕೂಗಿದರು, ಸೈಕಲ್ ಬೆಲ್ಲಿನ ಶಬ್ದವಾಯಿತು. ವೆಂಕಟಕೃಷ್ಣಪ್ಪನವರು ಹೊರಗೆ ಹೋದರು. ಜವಾನನೊಬ್ಬ "ಮೂರ್ತಿರಾಯರು ಈ ಕಾಗದ ಕೊಡು ಅಂದರು, ಸಾರ್" ಎಂದು ಒಂದು ಲಕ್ಕೋಟೆ ಕೊಟ್ಟು ಹೋದ. ಲಕ್ಕೋಟೆ

ಒಡೆದು ನೋಡಿದರು. "ತೀರ್ಥರೂಪರವರಿಗೆ,ತಮ್ಮ ಆಶೀರ್ವಾದದಿಂದ ಚುನಾಯಿತನಾಗಿದ್ದೇನೆ. ಪ್ರತಿಸ್ಪರ್ಧಿ 'ಡಿಪಾಸಿಟ್' ಕಳೆದುಕೊಂಡರು. ನಾನು ಮನೆಗೆ ಬರುವುದು ಹೊತ್ತಾಗಬಹುದು. ತಮಗೆ ಸುದ್ದಿ ತಿಳಿಸಲೆಂದು ಕಾಗದ ಕಳುಹಿಸಿದ್ದೇನೆ."

ವೆಂಕಟಕೃಷ್ಣಪ್ಪನವರು ಒಳಗೆ ಬಂದರು. "ಮೂರ್ತಿಯಿಂದ ಸುದ್ದಿ ಬಂತೇನು?" ರಾಮಯ್ಯನವರು ಕೇಳಿದರು. ವೆಂಕಟಕೃಷ್ಣಪ್ಪ ಲಕೋಟೆಯನ್ನೆ ಅವರಿಗೆ ಕೊಟ್ಟರು.

ಕಾಗದ ಓದಿ ರಾಮಯ್ಯನವರು, "ನಿಮ್ಮ ಭಾಗ್ಯವೇ ಭಾಗ್ಯ. ಮೂರ್ತಿ ಅಂತಹ ಮಗ ಇರೋದೂ ಪುಣ್ಯವೇ. ಇಷ್ಟು ಚಿಕ್ಕ ವಯಸ್ಸಿಗೆ ನ್ಯಾಯವಿಧಾಯಕ ಸಭೆಗೆ ಸದಸ್ಯನಾಗಿ ಆಯ್ಕೆ ಆಗೋದೂ ಅಂದರೆ ಬಾಯಿ ಮಾತೆ?" ಎಂದರು.

"ಏನೋ ಹಿರಿಯರ ಆಶೀರ್ವಾದ."

"ನೋಡ್ತಾ ಇರಿ, ವೆಂಕಟಕೃಷ್ಣಪ್ನೋರೆ, ನನ್ನ ಮಾತು ನಿಜವಾಗತ್ತೊ ಸುಳ್ಳಾಗತ್ತೊ ಅಂತ. ಇನ್ನು ಹತ್ತು—ಹದಿನೈದು ವರ್ಷದಲ್ಲಿ ನಿಮ್ಮ ಮಗ ಮಂತ್ರಿಯಾಗುತ್ತಾನೆ. 'ಡೆಮೊಕ್ರೆಸಿ' ಬರುತ್ತಾ ಇದೆ ಸ್ವಾಮಿ. ಮೂರ್ತಿ ಅಂತಹವರು ಎಷ್ಟು ಜನ ಸಿಗ್ತಾರೆ? ನಿಜವಾಗಿ ಸಾಮರ್ಥ್ಯ ಇರೋನಿಗೆ ನಿಸ್ವಾರ್ಥಸೇವೆ ಸಲ್ಲಿಸಬೇಕು ಅನ್ನೋ ಮನೋಭಾವ ಇರೋದಿಲ್ಲ. ಆ ಸೇವೆಯ ಮನೋಭಾವ ಇರೋನಿಗೆ ನಾಯಕನಾಗೋ ಯೋಗ್ಯತೆ ಇರೋದಿಲ್ಲ. ನಮ್ಮ ಮೂರ್ತಿ ಅಂತಹವರಿಗೆ ಎರಡೂ ಇರತ್ತೆ. ನೋಡ್ತಾ ಇರಿ, ಇನ್ನು ಹತ್ತು— ಹದಿನೈದು ವರ್ಷದಲ್ಲಿ ನಮ್ಮ ಕಣ್ಣ ಮುಂದಿನ ಹುಡುಗ ಇವನೇ ಮಂತ್ರಿಯಾಗ್ತಾನೆ."

"ನಿಮ್ಮಂತಹವರ ಬಾಯಿಹರಕೆಯಿಂದ ಆಗಲೇಳಿ," ಎಂದರು ವೆಂಕಟಕೃಷ್ಣಪ್ಪ. ಅವರ ಮನಸ್ಸು ಆನಂದದಿಂದ, ಹೆಮ್ಮೆಯಿಂದ ತುಂಬಿ ತುಳುಕುತ್ತಿತ್ತು

ಮತ್ತೆ ಎಚ್ಚರಿಕೆಯಾಯಿತು ವೆಂಕಟಕೃಷ್ಣಪ್ಪನವರಿಗೆ. ದೂರದಲ್ಲಿ ಮೂರು— ನಾಲ್ಕು ನಾಯಿಗಳು ಬೊಗಳುತ್ತಿದ್ದುವು.

ವೆಂಕಟಕೃಷ್ಣಪ್ಪನವರ ಮನಸ್ಸು ಐದಾರು ವರ್ಷಗಳ ಹಿಂದಕ್ಕೆ ಹಾರಿತು. ೧೯೪೨ರ ಆಗಸ್ಟ್ ತಿಂಗಳನ್ನು ಅವರು ಮರೆಯುವಂತಿರಲಿಲ್ಲ. ದೇಶದಲ್ಲೆಲ್ಲ ಗಲಭೆಯೋ ಗಲಭೆ. ಸ್ವಾತಂತ್ರ್ಯ ಸಮರದಲ್ಲಿ ದೇಶಾಭಿಮಾನಿಗಳ ರಕ್ತ ಕೋಡಿ ಹರಿಯಿತು. ಆಗ ಒಂದು ದಿನ ಸಂಜೆ ವೆಂಕಟಕೃಷ್ಣಪ್ಪನವರು ತಮ್ಮ ಕಚೇರಿಯಿಂದ ಬರುತ್ತಿದ್ದಾಗ ಯಾರೋ ಹೇಳಿದರು—"ಇವತ್ತು ಕಾಲೇಜ್ ಹುಡುಗರ ಸಭೆಯಲ್ಲಿ ನಿಮ್ಮ ಮೂರ್ತಿ ಮಾತಾಡಿದ. ಎಷ್ಟು ಸೊಗಸಾಗಿ ಭಾಷಣ ಮಾಡಿದ ಎನ್ನುತ್ತೀರಿ! ನನಗೆ ಕೂಡ ಕೆಲಸಕ್ಕೆ ರಾಜಿನಾಮೆ ಕೊಟ್ಟುಬಿಡೋಣ ಎನ್ನಿಸಿತು!" ವೆಂಕಟಕೃಷ್ಣಯ್ಯನವರು ಕೆಂಡವಾದರು. ಈ ಹುಡುಗ ನಮ್ಮ ತಲೆಯ ಮೇಲೆ ಬಂಡೆ ಎಳೆಯುತ್ತಿದ್ದಾನೆ! ಎಂದು ಹಲ್ಲು ಕಡಿದರು. ಅವರಿದ್ದದ್ದು ಒಬ್ಬ ಲಾಯರ ಕಚೇರಿಯಲ್ಲಿ. ಲಾಯರಿಗೆ ತಮ್ಮ ಗುಮಾಸ್ತರ ಮಗ ಕಾಂಗ್ರೆಸ್ ಕಡೆ ಸೇರಿ ಭಾಷಣ ಮಾಡಿದ ಅಂತ ಗೊತ್ತಾದರೆ ಅರ್ಧ ನಿಮಿಷ ವೆಂಕಟಕೃಷ್ಣಪ್ಪನವರನ್ನ ಕೆಲಸದಲ್ಲಿ ಇಟ್ಟುಕೊಂಡಾರೆ!

ಮನೆಗೆ ಅವರು ಬರುವ ಹೊತ್ತಿಗೆ ಮೂರ್ತಿಯೂ ಬಂದಿದ್ದ. ಮಗನನ್ನು ಕೂಗಿದರು.

"ಏನಪ್ಪಾ"

"ಇದೇನು ನಿನ್ನ ತಲೆಹರಟೆ? ಬರೋ ನಾಲ್ಕು ಕಾಸಿಗೆ ಮಣ್ಣು ಹಾಕಿಕೊಡಬೇಕು ಅಂತಿದ್ದಿಯ?"

"ಯಾರಪ್ಪಾ"

"ಇವತ್ತೇನೋ ಭಾಷಣ ಬಗುಳಿದೆಯಂತೆ. ನಿನ್ನ ಡಿಬೇಟ್, ಗಿಬೇಟ್‌ಗೆ ಸೇರಿಕೊಳ್ಳೊದಕ್ಕೆ ಬಿಟ್ಟದ್ದೇ ತಪ್ಪಾಯಿತು. ನಿನಗ್ಯಾಕೆ ಇಲ್ಲದ ಪ್ರತಿಷ್ಠೆ?"

"ಗಾಂಧಿ, ನೆಹ್ರೂ ಎಲ್ಲ ಜೈಲಿನಲ್ಲಿಲ್ಲವೇನಪ್ಪ? ನಮ್ಮ ದೇಶಕ್ಕೋಸ್ಕರ"

"ಓ, ಸಾಕು, ಬಾಯಿಮುಚ್ಚು. ಮಹಾದೊಡ್ಡ ಮನುಷ್ಯ ದೇಶಸೇವೆ ಮಾಡೋದಕ್ಕೆ. ಅಪ್ಪ, ಅಮ್ಮ, ತಂಗಿಯರು ಎಲ್ಲರ ಬಾಯಿಗೂ ಮಣ್ಣು ಹಾಕಿದರೆ ಮುಗಿಯಿತು ನಿನ್ನ ಸೇವೆ. ಮತ್ತೊಂದು ದಿನ ಭಾಷಣ

ಮಾಡೋದಕ್ಕೆ ಹೋಗೋ ಮೊದಲು ಮನೇಲಿ ಎಲ್ಲರಿಗೂ ವಿಷ ಕುಡಿಸಿ, ಪ್ರಾಣ ಹೋಯಿತು ಅಂತ ನಾಡಿ ನೋಡಿ ನಿರ್ಧಾರ ಮಾಡಿಕೊಂಡು ಹೋಗು."

ಅಲ್ಲಿಗೇ ಮೂರ್ತಿಯ ರಾಜಕೀಯ ಸೇವೆ ಮುಗಿಯಿತು.

ಇದೆಲ್ಲ ವೆಂಕಟಕೃಷ್ಣಪ್ಪನವರ ಮನಸ್ಸಿನಲ್ಲಿ ಹಾದು ಹೋಯಿತು. ಇದಕ್ಕೆ ಹಿನ್ನಲೆಯಾಗಿ ನಿಂತಿತ್ತು ಕನಸು. ಕನಸಿನಂತೆ ಆಗಿದಿದ್ದರೆ—! ಮೂರ್ತಿಯು ಒಬ್ಬ ನಾಯಕನೆನಿಸಿಕೊಂಡು, ಮಂತ್ರಿಯಾಗಿದ್ದರೆ! ದೇಶದಲ್ಲೆಲ್ಲ ಅವನ ಕೀರ್ತಿ ಹರಡಿದ್ದರೆ! ಹಾಗೆ ಆಗದಿದ್ದುದಕ್ಕೆ ಯಾರು ಕಾರಣ? ತಾವೆ? ತಾವು ಸರಿಯಾದ ದಾರಿ ತೋರಿಸಲಿಲ್ಲವೆ? ಅವನ ಒಳ್ಳೆಯ ಶ್ರೇಯಸ್ಸಿಗಾಗಿಯೇ ಅಲ್ಲವೆ ತಾವು ಅವನಿಗೆ ಬುದ್ಧಿವಾದ ಹೇಳಿದ್ದು? "ಶ್ರೀಹರಿ, ನಿನ್ನ ಮಾಯೆ", ಎಂದು ಮತ್ತೆ ಕಣ್ಮುಚ್ಚಿದರು ವೆಂಕಟಕೃಷ್ಣಪ್ಪನವರು.

೪

"ಮುಂದಿನ ಗುರುವಾರ ಇಷ್ಟು ಹೊತ್ತಿಗೆ ನಮ್ಮೂರಿಗೆ ಬಂದುಬಿಟ್ಟಿರುತ್ತಾನೆ ಮೂರ್ತಿ."

"ಹೂಂ, ಸೋಮವಾರ ಬೊಂಬಾಯಿ ತಲಪುತ್ತಾನೆ," ವೆಂಕಟಕೃಷ್ಣಪ್ಪ ಉತ್ತರ ಕೊಟ್ಟರು.

"ಬಂದ ಮೇಲೆ ಎಲ್ಲಿ ಕೆಲಸ ಸಿಗತ್ತೋ ನೋಡಬೇಕು," ಹೆಂಡತಿ ನುಡಿದರು.

"ಸರಿ, ಆ ಯೋಚನೆ ಏನು ಬಂತು? ಇಂತಹ ಶಿಕ್ಷಣ ಸಿಕ್ಕಿದೋರೆ ಐದಾರು ಜನ ಒಟ್ಟು ಇಂಡಿಯದಲ್ಲಿ. ಇವನೂ ಬುದ್ಧಿವಂತ, ಸಮರ್ಥ ಅಂತ ಹೊಗಳಿಸಿಕೊಂಡು ಬರುತ್ತಾನೆ. ಬರುವಾಗಲೇ ದೊಡ್ಡ ಕೆಲಸ ಕಾದಿರುತ್ತೆ." ಗಂಡ ಸಮಾಧಾನ ಹೇಳಿದರು.

"ಹಾಗಲ್ಲ ನಾನು ಹೇಳಿದ್ದು. ಯಾವ ಮೂಲೆಗೆ ಕಳಿಸುತ್ತಾರೊ ಏನೊ! ಅಂತ."

"ಇಷ್ಟು ಓದಿ ದೊಡ್ಡ ಕೆಲಸ ಪಡೆದವರ್ನ ಯಾವುದೋ ಮೂಲೆಗೆ ಹಾಕೋದಕ್ಕೆ ಸಾಧ್ಯವಿಲ್ಲ. ಡೆಲ್ಲಿನೊ, ಕಲ್ಕತ್ತಾನೊ, ಅಲಹಾಬಾದೊ,

ಬೊಂಬಾಯಿಯೊ, ಮದ್ರಾಸೊ ಯಾವುದೊ ದೊಡ್ಡ ಪಟ್ಟಣದಲ್ಲೇ ಕೆಲಸ ಸಿಗತ್ತೆ."

"ಅಂತೂ ಮಗ ಅಂತ ಹೆತ್ತದ್ದಕ್ಕೆ ಸಾರ್ಥಕವಾಯಿತು. ಮೊನ್ನೆ ಪಕ್ಕದ ಮನೆ ಸೀತಮ್ಮನೋರು ಕೇಳಿದರು. ''ಏನಮ್ಮಾ, ಮಗ ಬಂದ ಮೇಲೆ ನಮ್ಮನ್ನ ಮಾತುಕೂಡ ಆಡಸ್ತೀರೊ ಇಲ್ಲವೊ?" ಅಂತ. ಪಾರ್ವತಮ್ಮ "ನೀವೇ ಪುಣ್ಯವಂತರಮ್ಮ, ಒಬ್ಬ ಮಗನಾದರೂ ಇಂತಹ ಮಗ ಆಗಬೇಕು, ನಿಮಗೇನು ಕಡಿಮೆ ಇನ್ನು? ಚಿನ್ನದ ನೆಲದ ಮೇಲೆ ಓಡಾಡ್ತೀರಿ" ಅಂತ.

"ಹೌದು. ಆ ಡಾಕ್ಟ್ರು ರಾಜನ್ ಮೊದಲು ನಮಸ್ಕಾರ ಮಾಡಿದ್ರೂ ತಿರುಗಿ ನೋಡ್ತಿರ್ಲಿಲ್ಲ. ಮೊನ್ನೆ ರಸ್ತೇಲಿ ನನ್ನ ಹಿಂದೆ ಬರ್ತಾ ಇದ್ದವರು ತಾವೇ ಕೂಗಿದ್ರು, ನಿಂತ್ಕೊಂಡೆ. "ನಿಮ್ಮ ಮಕ್ಕಳು ಯಾವಾಗ ಬರ್ತಾರೆ ಮಿಸ್ಟರ್ ವೆಂಕಟಕೃಷ್ಣಪ್ಪ?" ಅಂತ ಕೇಳಿದ್ರು."

"ನಿನ್ನೆ ಶಕುಂತಳಮ್ಮ ಹೇಳಿದಳು, ಅವಳು ಸಬ್ ಜಡ್ಜರ ಮನೆಗೆ ಹೋಗಿದ್ದಾಗ, ನಮ್ಮ ತಾರಾನ ಅವರು ಮಾಡ್ಕೊಳ್ಳೊ ಹಾಗಿದ್ರೆ ಮೂರ್ತಿಗೆ ಕೊಟ್ಟು ಮದುವೆ ಮಾಡಬೇಕು ಅಂತ ನಮ್ಮ ಆಸೆ ಅಂತ ಅವರ ಹೆಂಡತಿ ಹೇಳಿದರಂತೆ."

''ಪೋಸ್ಟ್.''

ವೆಂಕಟಕೃಷ್ಣಪ್ಪನವರು ಹೊರಗೆ ಹೋದರು. ಬರುವಾಗ ಕೈಯ್ಯಲ್ಲಿ ಕಾಗದವಿತ್ತು.

"ಯಾರದು ಕಾಗದ?''

"ಮೂರ್ತೀದು. ಅವನಿಗೆ ಅಲ್ಲಿಗೇ ಕಾಗದ ಬಂದಿದೆಯಂತೆ ಇಂಡಿಯಾ ಸರ್ಕಾರದಿಂದ. ನಾನ್ನೂರು ರೂಪಾಯಿ ಮೇಲೆ ಕೆಲಸ ಕೊಟ್ಟಿದ್ದಾರಂತೆ, ಬೊಂಬಾಯಿಯಿಂದ ಇಲ್ಲಿಗೆ ಬಂದು ದೆಹಲಿಗೆ ಹೋಗಬೇಕಂತೆ, ಮೂರು ದಿವಸಕ್ಕಿಂತ ಹೆಚ್ಚು ಇರೋದಕ್ಕೆ ಆಗೊಲ್ಲ ಇಲ್ಲಿ ಅಂತ ಬರ್ದಿದ್ದಾನೆ."

"ನಾನ್ನೂರು ರೂಪಾಯಿಯೇ! ನಮ್ಮ ಪುಣ್ಯ."

ಹೊರಗಡೆ 'ಫಡಫಡಫಡೀಲ್' ಎಂದು ಸಿಡಿಲು ಹೊಡೆಯಿತು. ವೆಂಕಟಕೃಷ್ಣಪ್ಪನವರಿಗೆ ಎಚ್ಚರಿಕೆಯಾಯಿತು. ಮನೆಯ ಹೊರಗೆ ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು.

ಬರಿಯ ಕನಸು! ಆದರೆ? ಕನಸು ನಿಜವಾಗಬಹುದಾಗಿತ್ತಲ್ಲವೆ? ಮೂರ್ತಿ ಬಿ. ಎಸ್‌ಸಿ. ತೇರ್ಗಡೆ ಹೊಂದುತ್ತಲೇ ಅಮೇರಿಕದಲ್ಲಿ ಶಿಕ್ಷಣಪಡೆಯಲು ವಿದ್ಯಾರ್ಥಿವೇತನಕ್ಕೆ ಬೇಡಿಕೆ ಕಳುಹಿಸುತ್ತೇನೆಂದಾಗ ತಾವು ಅಡ್ಡಬಾರದಿದ್ದರೆ ಆಗುತ್ತಿತ್ತೇನೊ! "ಈ ಸ್ಕಾಲರ್‌ಷಿಪ್‌ಗೆ ಫಿಸಿಕ್ಸ್, ಕೆಮಿಸ್ಟ್ರಿ ಎರಡರಲ್ಲೂ ಗಟ್ಟಿಗರಾದವರು ಬೇಕಂತೆ. ನಮ್ಮ ಪ್ರೊಫೆಸರು "ಸಿಲೆಕ್ಷನ್ ಕಮಿಟಿ"ಯಲ್ಲಿದ್ದಾರೆ, ನನ್ನ ಸ್ನೇಹಿತ ನಾಗರಾಜನ ದೊಡ್ಡಪ್ಪ ಇಂಡಿಯಾಸರ್ಕಾರದ ವಿದ್ಯಾಭ್ಯಾಸ ಇಲಾಖೆಯಲ್ಲಿದ್ದಾರೆ, ಸ್ಕಾಲರ್‌ಷಿಪ್ ಸಿಕ್ಕರೂ ಸಿಗಬಹುದು." ಎಂದು ಎಷ್ಟೋ ಹೇಳಿದ ಮೂರ್ತಿ. "ನಿನ್ನ ಇಷ್ಟ ಬಂದ ಹಾಗೆ ಮಾಡು. ಆದರೆ ನೀನು ಸಮುದ್ರಪ್ರಯಾಣ ಮಾಡಿ ಬಂದ ಮೇಲೆ ನಿನ್ನ ಮನೆಯಲ್ಲಿ ನಾನಾಗಲಿ, ನಿಮ್ಮಮ್ಮನಾಗಲಿ ಒಂದು ಲೋಟ ನೀರು ಕುಡಿಯೋದಿಲ್ಲ. ಸಾಯುವ ವರೆಗೆ ನಾವು ಬೇರೆ ಬೇರೆ ಇರಬೇಕು ಅಂತ ನಿನ್ನಿಷ್ಟ ಇದ್ದರೆ ಅಮೇರಿಕಾಕ್ಕಲ್ಲದಿದ್ದರೆ ಆಫ್ರಿಕಾಕ್ಕೆ ಹೋಗು, ನನ್ನನ್ನು ಕೇಳಬೇಡ," ಎಂದು ತಾವು ಹೇಳಿದುದು ಜ್ಞಾಪಕ ಬಂತು. ಹಾಗೆನ್ನದೆ ಹೋಗಿದ್ದರೆ? ಕನಸಿನಲ್ಲಿ ತಾವು ಕಂಡದ್ದು ನಿಜವಾಗಿ ತಮ್ಮ ಜೀವನದಲ್ಲಿ ನಡೆಯುತ್ತಿತ್ತೇನೊ! ಯಾರು ಬಲ್ಲರು? ಹಾಗಾದರೆ ತಾವು ಹೋಗಬೇಡ ಅಂದದ್ದು ಅಪರಾಧವೆ? ಅಲ್ಲಿಗೆ ಹೋಗಿ, ಹೆಂಡ ಕುಡಿದು, ಮಾಂಸ ತಿಂದು, ಜಾತಿ ಕೆಟ್ಟು, ಒಬ್ಬ ಫರಂಗಿ ಹುಡುಗಿಯನ್ನ ಕಟ್ಟಿಕೊಂಡು ಬಂದಿದ್ದರೆ ಗತಿ ಏನು?

ಹೊರಗೆ ಮಳೆ ಸುರಿಯುತ್ತಲೇ ಇತ್ತು. ಗಾಳಿ ಜೋರಾಗಿ, ಚಳಿ ಆರಂಭವಾಗಿತ್ತು. ವೆಂಕಟಕೃಷ್ಣಪ್ಪನವರು ಕಂಬಳಿ ಎಳೆದುಕೊಂಡು ಮಲಗಿದರು. ತಾಲ್ಲೂಕು ಕಚೇರಿಯಲ್ಲಿ ಮೂರು ಗಂಟೆ ಹೊಡೆದ ಶಬ್ದ ಕೇಳಿಸಿತು.

೫

ಶಾಂತಿಯ ಅಮೃತ ವರ್ಷವನ್ನು ಸ್ವರ್ಗ ನೆಲದ ಮೇಲೆ ಕರೆದಿತ್ತು. ಮಳೆ ನಿಂತು ಆಕಾಶವೆಲ್ಲ ಮೋಹಕ ನೀಲಿಯಿಂದ ತುಂಬಿತ್ತು. ನೆಲದ ವಾಸನೆ ಅಹುದೋ ಅಲ್ಲವೋ ಎನ್ನುವಂತೆ ಮೂಗನ್ನು ತಾಕಿ ಹಾರುತ್ತಿತ್ತು. ಕೆರೆಯ ಹೊಸ ನೀರು ಸಂಜೆ ರವಿಯ ಕಿರಣಗಳೊಡನೆ ಆಟವಾಡುತ್ತಿತ್ತು.

ದೂರದಲ್ಲಿ ಕೋಗಿಲೆಯೊಂದು ಹಾಡುತ್ತಿತ್ತು, ಮತ್ತೊಂದು ಕೋಗಿಲೆ ಉತ್ತರ ಕೊಡುತ್ತಿತ್ತು.

ವೆಂಕಟಕೃಷ್ಣಪ್ಪನವರು ಲಾಲ್‌ಬಾಗ್ ಕೆರೆ ಏರಿಯ ಮೇಲೆ ಶಿಲಾಸನ ಒಂದರ ಮೇಲೆ ತಮ್ಮ ಗೆಳೆಯ ರಾಮಯ್ಯನವರ ಜೊತೆಗೆ ಕುಳಿತಿದ್ದರು. ಅಂದು ಭಾನುವಾರ. ಪ್ರಣಯಿಗಳು, ನವದಂಪತಿಗಳು ಲಾಲ್‌ಬಾಗ್ ಯಾತ್ರೆ ಮಾಡುವ ದಿನ. ವೆಂಕಟಕೃಷ್ಣಪ್ಪನವರೂ ರಾಮಯ್ಯನವರೂ ಸುತ್ತಮುತ್ತಲಿನ ವಾತಾವರಣದಲ್ಲಿ ಬೆರೆತು ಹೋಗಿದ್ದರು. ತಮ್ಮ ತಾರುಣ್ಯದ ಅನುಭವಗಳನ್ನು ನೆನೆಸಿಕೊಂಡು ನಗುತ್ತಿದ್ದರು. ತಮ್ಮ ಮುಂದೆ ಹಾದು ಹೋದ ಪ್ರಣಯಿಗಳನ್ನು, ದಂಪತಿಗಳನ್ನು ಕಂಡು ಆಹ್ಲಾದಪಡುತ್ತಿದ್ದರು. ಆಕಾಶದಲ್ಲಿ ಕಾಮನ ಬಿಲ್ಲು ಕಂಡು ಸಂತೋಷಪಡುವುದಿಲ್ಲವೇ, ಹಾಗೆ.

ಕೆಳಗೆ ರಸ್ತೆಯಲ್ಲಿ ಯಾರೋ ಮೃದುವಾಗಿ ನಕ್ಕಂತಾಯಿತು. ಬೆಂಚಿನ ಮೇಲೆ ಕುಳಿತಿದ್ದ ವೃದ್ಧರಿಬ್ಬರೂ ತಿರುಗಿ ನೋಡಿದರು.

ರಸ್ತೆಯಲ್ಲಿ ಹೋಗುತ್ತಿದ್ದವರು ಮೂರ್ತಿ ಮತ್ತು ಮೋಹಿನಿ. ಮೂರ್ತಿ ಉಲ್ಲನ್ ಸೂಟು ಧರಿಸಿದ್ದ. ತುಟಿಯ ಮೇಲೆ ನಗು ಆಡುತ್ತಿತ್ತು. ಆ ನಗು ಕಣ್ಣಿಗೊಂದು ಹೊಳಪು ನೀಡಿತ್ತು. ಮೋಹಿನಿ ಅವನ ಪಕ್ಕದಲ್ಲಿ ನಿಧಾನವಾಗಿ ನಡೆಯುತ್ತಿದ್ದಳು. ಗುಲಾಬಿ ಬಣ್ಣದ ಸೀರೆಯುಟ್ಟಿದ್ದಳು. ಅವಳ ಮೈಯ ಮೋಹಕವರ್ಣಕ್ಕೆ ಹೊಂದಿಕೊಂಡಿತ್ತು ಆ ಸೀರೆಯ ಬಣ್ಣ. ಎರಡು ಹೆರಳು ಹಾಕಿಕೊಂಡಿದ್ದಳು, ಎರಡುಜಡೆ ಎರಡು ಭುಜದ ಮೇಲೆ ಒರಗಿತ್ತು. ಎರಡು ಜಡೆಗೆ ಎರಡು ಕೆಂಪು ಗುಲಾಬಿ ಮುಡಿದಿದ್ದಳು. ಅವಳೂ ನಗುತ್ತಿದ್ದಳು. ಗಂಡ ಹೆಂಡತಿ ನಗುತ್ತಿದ್ದುದು ತಮ್ಮ ಹಾಸ್ಯದ ಮಾತಿಗೊ, ಅಥವ ಪರಸ್ಪರ ಸಾಮಿಪ್ಯದಿಂದಲೊ ಅಥವ ತಮ್ಮನ್ನು ಸುತ್ತುಗಟ್ಟಿದ ಪ್ರಕೃತಿಯ ಉಲ್ಲಾಸದ ಪ್ರಭಾವದಿಂದಲೊ! ಅಂತೂ ನಗೆಯಿನ್ನೂ ಮೋಹಿನಿಯ ಮುಖದಿಂದ ಮಾಸಿರಲಿಲ್ಲ. ಹಗಲೇ ಚೆಲುವಾಗಿ ಕಾಣುವ ಕೃಷ್ಣರಾಜಸಾಗರದ ಬುಗ್ಗೆಗಳು ರಾತ್ರಿ ದೀಪದ ಪ್ರಭೆಯಲ್ಲಿ ಇನ್ನೂ ಸುಂದರವಾಗಿ ಕಾಣುವಂತೆ ಮೊದಲೇ ಸುಂದರವಾದ ಅವಳ ಮುಖ ನಗೆಯಿಂದ ಇನ್ನೂ ಮೋಹಕವಾಗಿತ್ತು. ಯುವತಿಯ ಬೆರಗಿನೊಡನೆ ಶಿಶುವಿನ ಮುಗ್ಧತೆ ಬೆರೆತಿತ್ತು ಆ ಮುಗುಳ್ನಗೆಯಲ್ಲಿ. ಇನ್ನೇನು ಅರಳುತ್ತದೆ ಎನ್ನುವಾಗ ಉಬ್ಬಿರುವ

ಗುಲಾಬಿ ಮೊಗ್ಗಿನಂತೆ ಉಬ್ಬಿತ್ತು ನಗುವಿನಿಂದ ಅವಳ ಕೆನ್ನೆ. ನಗು ಮುಖಕ್ಕೆಲ್ಲ ಹಬ್ಬಿ ಕಣ್ಣನ್ನು ಸ್ವಲ್ಪ ಚಿಕ್ಕದು ಮಾಡಿತ್ತು, ಆದರೆ ಕಣ್ಣಿನಲ್ಲಿ ಮಿಂಚಿನ ಪ್ರಭೆ ಹೊಳೆಯುತ್ತಿತ್ತು. ಗಲ್ಲಕ್ಕೆ ಒಂದು ವಿಶೇಷ ಕಾಂತಿ ಬಂದಿತ್ತು. ಆ ನಿಮಿಷ ಅವಳು ನಿಜವಾಗಿ ಮೋಹಿನಿಯೇ ಆಗಿದ್ದಳು. ವನದ ಸೊಬಗೆಲ್ಲ ಅವಳ ನಗೆಯ ರೂಪದಲ್ಲಿ ಬೆಳಗುತ್ತಿದ್ದಂತೆ ತೋರಿತು. ಅವಳ ನಗೆ ಸುತ್ತ ಮುತ್ತ ಎಲ್ಲ ಹೊಸ ಸೊಗಸನ್ನು ಚೆಲ್ಲಿತ್ತು.

ಮೂರ್ತಿ ನಗುತ್ತ ಅವಳ ಕಡೆ ತಿರುಗಿದ. ಅದೇ ಕ್ಷಣ ಅವಳ ಕಣ್ಣೋಟ ಅವನ ಕಡೆ ಹೊರಳಿತು. ಇಬ್ಬರಿಗೂ ನಗು ಬಂದಿತು, ಗಟ್ಟಿಯಾಗಿ ನಕ್ಕು ಬಿಟ್ಟರು. ಮೂರ್ತಿ ಮೃದುವಾಗಿ ಅವಳ ಕೈಬೆರಳನ್ನು ಅದುಮಿದ, ಅವಳ ಬೆರಳುಗಳು ಅವನ ಬೆರಳ ಸುತ್ತ ಹೆಣೆದುಕೊಂಡವು. ನಿಧಾನವಾಗಿ ಇಬ್ಬರೂ ಮುಂದಕ್ಕೆ ಸಾಗಿದರು.

ಅವರು ಕಣ್ಮರೆಯಾಗುವ ವರೆಗೆ ಮುದುಕರಿಬ್ಬರೂ ಅವರನ್ನೆ ನೋಡುತ್ತಿದ್ದರು. ಆ ಮೇಲೆ ರಾಮಯ್ಯನವರು ಹೇಳಿದರು—"ನೀವೇ ಪುಣ್ಯವಂತರು ವೆಂಕಟಕೃಷ್ಣಪ್ಪ. ಇಂತಹ ಸೊಸೆಯನ್ನು ಪಡೆಯುವುದಕ್ಕೂ ಅದೃಷ್ಟ ಬೇಕು."

"ಅಯ್ಯೋ ಸರಿ, ಏನು ಮಾತು ಹೇಳಿದಿರಿ!"

"ನಿಜವಾಗಿ ಸ್ವಾಮಿ, ಎಲ್ಲರಿಗೂ ಆ ಪುಣ್ಯ ಇರೋದಿಲ್ಲ. ಮಕ್ಕಳ ಮದುವೆ ಅಂದರೆ ದೊಡ್ಡ ಹೊಣೆ. ಅನ್ಯೋನ್ಯವಾಗಿ ಹೊಂದಿಕೊಂಡಿರುವ ದಂಪತಿಗಳನ್ನು ನೋಡೋದೇ ಒಂದು ಭಾಗ್ಯ. ಆ ಹುಡುಗಿ ನೋಡಿ, ನಮ್ಮ ಜಾತಿಯಲ್ಲ, ಕುಲವಲ್ಲ. ಲಕ್ಷಾಧಿಕಾರಿಗಳ ಮನೆಯಿಂದ ಬಂದವಳು. ಓದಿನಲ್ಲಿ ಏನು ಕಡಿಮೆಯೇ, ಆಕೆಯೂ ಡಿಗ್ರಿ ತಕ್ಕೊಂಡಿದ್ದಾಳೆ. ಅಂತಹ ಹುಡುಗಿ ಮೂರ್ತಿ ಜೊತೆಗೆ ಹೇಗೆ ಸಂಸಾರ ಮಾಡಿಕೊಂಡಿದ್ದಾಳೆ! ಮೊದಲು ಕಾರಿನಲ್ಲಿ ಓಡಾಡಿಕೊಂಡಿದ್ದ ಹುಡುಗಿ, ಮಲ್ಲಿಗೆ ಹಾಸಿದ ನೆಲದ ಮೇಲೆ ನಡೆಯೊ ವೈಭವದ ತವರು ಮನೆಯಲ್ಲಿ ಬೆಳೆದವಳು, ಈಗ ಅದನ್ನೆಲ್ಲ ಬಿಟ್ಟು ಅನ್ಯೋನ್ಯವಾಗಿ ಗಂಡನ ಜೊತೆಗೆ ಬಾಳ್ತಾ ಇಲ್ಲವೇ? ನಿಮ್ಮ ಪುಣ್ಯ, ಮೂರ್ತಿ ಪುಣ್ಯ ಅಂತಹ ಹುಡುಗಿ ಅವನ ಕೈ ಹಿಡಿದದ್ದು."

'ಹಾಲು ತೆಗೆದುಕೊಳ್ಳೀಮ್ಮ'

ಮದುವೆ ಮನೆಗೆ ಹಾಲು ಕೊಡಲು ಬಂದವನ ಕೂಗಿನಿಂದ ವೆಂಕಟ-ಕೃಷ್ಣಪ್ಪನವರಿಗೆ ಎಚ್ಚರಿಕೆಯಾಯಿತು. ಆಗಲೇ ತಕ್ಕ ಮಟ್ಟಿಗೆ ಬೆಳಕಾಗಿತ್ತು. ಹೊರಗಡೆ ಯಾರೋ ಎದ್ದು ಓಡಾಡುತ್ತಿದ್ದರು.

ಮೊನ್ನೆ ಮೊನ್ನೆ ಒಂದು ವರ್ಷದ ಕೆಳಗೆ ನಡೆದದ್ದು ವೆಂಕಟಕೃಷ್ಣಪ್ಪನವರ ಸ್ಮೃತಿ ಪಥದಿಂದ ಅಳಿಸಿರಲಿಲ್ಲ. ಮೂರ್ತಿ ಕನ್ನಡ ಸಂಘ ಒಂದಕ್ಕೆ ಉಪಾಧ್ಯಕ್ಷನಾಗಿದ್ದ. ಸಂಘದ ವಾರ್ಷಿಕೋತ್ಸವಕ್ಕೆ ಬಲವಂತದಿಂದ ತಂದೆಯನ್ನೂ ಕರೆದುಕೊಂಡು ಹೋಗಿದ್ದ. ಉತ್ಸವ ಮುಗಿದು ವೆಂಕಟಕೃಷ್ಣಪ್ಪನವರು ಹೊರಗೆ ಬಂದಾಗ ಮೂರ್ತಿ ಯಾವುದೋ ಹುಡುಗಿಯೊಡನೆ ಮಾತನಾಡುತ್ತಿದ್ದ. ತಂದೆ ಬಂದುದನ್ನು ಅವನು ಕಾಣಲಿಲ್ಲ. ವೆಂಕಟಕೃಷ್ಣಪ್ಪನವರು ಇಬ್ಬರನ್ನೂ ದೃಷ್ಟಿಸಿ ನೋಡಿದರು. ಹುಡುಗಿ ಹಸಿರು ಬಣ್ಣದ ಸೀರೆ ಉಟ್ಟಿತ್ತು. ಎರಡು ಜಡೆ, ಎರಡು ಜಡೆಯಲ್ಲಿಯೂ ಒಂದೊಂದು ಗುಲಾಬಿ ಬೆಳಗುತ್ತಿತ್ತು. ಎಡಗಾಲಿನ ಮೇಲೆ ಭಾರಬಿಟ್ಟು ಓರೆಯಾಗಿ ನಿಂತಿದ್ದಳು ಹುಡುಗಿ. ಕನಸಿನಲ್ಲಿ ಕಂಡ ಉನ್ಮಾದಕ ಮುಗುಳುನಗೆಯನ್ನು ವೆಂಕಟಕೃಷ್ಣಪ್ಪನವರು ಅಂದು ಆ ಹುಡುಗಿಯ ತುಟಿಯ ಮೇಲೆ ಕಂಡಿದ್ದರು. ಮೂರ್ತಿ ಮತ್ತು ಆ ಹುಡುಗಿ ತೀರ ದೂರವೇನೂ ನಿಂತಿರಲಿಲ್ಲ. ಹತ್ತಿರವೇ ನಿಂತಿದ್ದರು. ಅವಳ ಸೆರಗು ಗಾಳಿಯಲ್ಲಿ ಆಡಿದಾಗ ಅವನ ತೋಳನ್ನು ತಾಕಿ ಕೆಳಗಿಳಿಯುತ್ತಿತ್ತು.

ಮೂರ್ತಿ ಮನೆಗೆ ಬಂದ ಮೇಲೆ ಕೇಳಿದರು—"ಯಾರು ಆ ಹುಡುಗಿ ನಿನ್ನ ಜೊತೆಗೆ ಮಾತನಾಡುತ್ತಿದ್ದವಳು?"

"ಯಾವ ಹುಡುಗಿ?"

ಹಸುರು ಸೀರೆ ಉಟ್ಟುಕೊಂಡು ಎರಡು ಹೆರಳು ಹಾಕಿಕೊಂಡಿತ್ತಲ್ಲ, ಆ ಹುಡುಗಿ"

"ಓ ಅವಳೆ" ಸ್ವಲ್ಪ ತಡವರಿಸಿದ ಮೂರ್ತಿ, "ಮೋಹಿನಿ"

"ಯಾವ ಜಾತಿ? ಬ್ರಾಹ್ಮಣರೇ?"

"ಅಲ್ಲ, ಕ್ರಿಶ್ಚಿಯನ್"

ಅಲ್ಲಿಗೆ ಆ ಮಾತು ನಿಂತಿತು.

ಆದಾದ ಆರು ಎಂಟು ತಿಂಗಳಿಗೆ ಮೂರ್ತಿಯ ಮದುವೆಯ ಮಾತು ಬಂದಿತು. ಯಾವ ಹುಡುಗಿ ಬಂದರೂ 'ಒಲ್ಲೆ' ಎನ್ನುವ ಮಂತ್ರವೇ ಆಗಿತ್ತು ಮೂರ್ತಿಗೆ. ಯಾವುದೋ ಹುಡುಗಿಯ ಜೊತೆಗೆ ಲಾಲ್‌ಬಾಗಿನಲ್ಲಿ ಮಾತಾಡುತ್ತಿದ್ದ ಎಂದು ಎರಡು-ಮೂರು ಸಲ ವರದಿ ಬಂದಿತ್ತು. ವೆಂಕಟ ಕೃಷ್ಣಪ್ಪನವರಿಗೆ ಕೊನೆಗೊಂದು ದಿನ-ಅವರ ಆಪ್ತ ಸ್ನೇಹಿತರು ನರಸಿಂಹಯ್ಯ ನವರ ಮಗಳನ್ನೂ ಅವನು ಒಪ್ಪದೆ ಹೋದಾಗ—ಅವರ ಕೋಪ ಎಲ್ಲೆ ಮೀರಿತು. "ಯಾವ್ದೋ ಹುಡುಗೀನ ಗಂಟ್ಹಾಕ್ಕೊಂಡು ಲಾಲ್‌ಬಾಗ್‌ನಲ್ಲಿ ಅಲೀತಿಯಂತಲ್ಲ. ಯಾರವಳು?" ಎಂದು ಕೇಳಿದರು.

ಮೂರ್ತಿ ಸುಮ್ಮನಿದ್ದ.

"ನಿನ್ನೆ ಸಂಜೆ ಯಾವ್ದೋ ಹುಡುಗಿ ಹತ್ರ ಮಾತಾಡ್ತಾ ಇದ್ಯಂತಲ್ಲ, ಯಾರು?"

"ಮೋಹಿನಿ"

"ಯಾವ ಮೋಹಿನಿ"

"ಅದೇ ಆವತ್ತು ನೀವು ನಮ್ಮ ಸಂಘದ ವಾರ್ಷಿಕೋತ್ಸವದ ದಿನ ನೋಡಿದ್ರಲ್ಲ ಆ ಹುಡುಗಿ"

"ಅವಳ್ಜೊತೆಗೆ ಮಾತಾಡ್ಬೇಕಾದ್ರೆ ನಿನ್ನ ಸನ್ಯಾಸಾಶ್ರಮ ಏನಾಗುತ್ತೆ?"

ಮೂರ್ತಿ ಸುಮ್ಮನಿದ್ದ.

"ಈಗೇನು ನರಸಿಂಹಯ್ಯನ ಮಗಳು ಶಾರದಾನ ಮದುವೆ ಮಾಡಿ ಕೊಳ್ತೀಯಾ ಇಲ್ವೊ?"

"ಉಹುಂ"

"ಯಾಕೆ?"

ಮೂರ್ತಿ ಮತ್ತೆ ಇಂತಹ ಅವಕಾಶ ದೊರೆಯದೆ ಇರಬಹುದೆಂದು ಧೈರ್ಯ ಮಾಡಿ, ನಾನು ಮೋಹಿನಿಯನ್ನೇ ಮದುವೆ ಮಾಡಿಕೊಳ್ಳೋದು" ಎಂದ.

ವೆಂಕಟಕೃಷ್ಣಪ್ಪನವರ ಮೈಯೆಲ್ಲ ಬೆಂಕಿಯಾಯಿತು. ಶುದ್ಧ ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದ ಈ ಹುಡುಗನ ಬಾಯಿಯಲ್ಲಿ ಈ ಮಾತೇ?

"ನಿನಗೇನು ಹುಚ್ಚು ಹಿಡಿದಿದೆಯೋ?"

"ಯಾಕೆ?"

"ಬ್ರಾಹ್ಮಣರ ಮನೆಯ ಹುಡುಗ ಅವಳನ್ನು ಮದುವೆಯಾಗೋದು ಸಾಧ್ಯವೇ ಇಲ್ಲ. ನಾನು, ನಮ್ಮಪ್ಪ, ನಮ್ಮ ತಾತ ಎಲ್ಲರನ್ನೂ ಒಟ್ಟಿಗೆ ನರಕಕ್ಕೆ ಕಳಿಸಿದರೆ ನಿನಗೆ ತೃಪ್ತಿಯೋ ಏನೋ!"

"ಮನುಷ್ಯರಮೇಲಿ ಪ್ರೇಮ ಅಲ್ಲವೇನಪ್ಪ ಮುಖ್ಯ?"

"ಹೂಂ, ಪ್ರೇಮ; ಮಹಾ ಗೊತ್ತು ಇವನಿಗೆ ಪ್ರೇಮದ ವಿಷಯ. ಅವಳಿಗೂ ತಿನ್ನೋದಕ್ಕೆ ಇದೆಯೋ ಇಲ್ಲವೋ, ಅದಕ್ಕೆ ನಿನ್ನ ಬಲೆಗೆ ಹಾಕಿಕೋ ಬೇಕು ಅಂತ ಈ ಆಟ ಹೂಡಿದ್ದಾಳೆ ಅಷ್ಟೆ"

"ಅವರ ಮನೆಯಲ್ಲಿ ಎರಡು ಕಾರಿವೆ. ನನ್ನಂತಹವರು ನೂರು ಜನನ್ನ ಕೊಂಡುಕೊಳ್ಳಬಲ್ಲರು ಅವರಪ್ಪ."

"ಸರಿ, ನಿನ್ನ ಜಾತಿ ಕೆಡಿಸಿದರೆ ಗೆದ್ದಳು ಅವಳು."

"ಮನಸ್ಸಿಗೆ ಒಪ್ಪದೆ ಇದ್ದ ಹುಡುಗೀನ ಮಾಡಿಕೊಂಡು—"

"ಒಪ್ಪದೆ ಇರೋದಕ್ಕೆ ಶಾರದ ಏನಾಗಿದ್ದಳೆ? ಕುಂಟೇ, ಕುರುಡೇ, ಕಿವುಡೇ? ನೋಡುವುದಕ್ಕೆ ಲಕ್ಷಣವಾಗಿಲ್ಲವೇ? ಲೋವರ್ ಸೆಕೆಂಡರಿ ಪಾಸ್ ಮಾಡಿಲ್ಲವೆ?"

"ಮೋಹಿನಿ ಬಿ. ಎಸ್‌ಸಿ. ಪಾಸ್ ಮಾಡಿದ್ದಾಳೆ."

"ಸರಿ, ಬಿ. ಎಸ್‌ಸಿ. ಮಾಡಿ, ನಿನ್ನ ಹೆಂಡತಿ ಏನ್ಮಾಡ್ಬೇಕು? ಯಾವಾಗಲೂ ಗಂಡನಷ್ಟು ಹೆಂಡತಿ ಓದಿರಬಾರದು."

"ಮನಸ್ಸು ಮುಖ್ಯವಲ್ಲವೇ ಈ ವಿಷಯಗಳಲ್ಲಿ?"

ಹೌದು, ಅದಕ್ಕೇ ಹೇಳಿದ್ದು ಮನಸ್ಸು ಸರಿಯಾಗಿಟ್ಟುಕೊ ಅಂತ"

ಕೊನೆಗೆ ಮೂರ್ತಿ ಶಾರದೆಯನ್ನೇ ಮದುವೆಯಾದ.

ಅಂದು ನಡೆದ ಮಾತೆಲ್ಲ ವೆಂಕಟಕೃಷ್ಣಪ್ಪನವರಿಗೆ ನೆನಪಾಯಿತು. ನಾವು ಅಡ್ಡಿ ಮಾಡದೆ ಇದ್ದರೆ! ಈಗ ಮೂರ್ತಿ ಶಾರದೆಯೊಡನೆ ಸುಖವಾಗಿದ್ದಾನೆಯೆ? ಯಾರಿಗೆ ಗೊತ್ತು? ಇನ್ನೂ ಮದುವೆಯಾಗಿ ನಾಲ್ಕು ತಿಂಗಳಾಗಿಲ್ಲ. ಆದರೆ ಮದುವೆಯಾದ ಮೇಲೆ ಹುಡುಗ ಏಕೋ ಮಂಕಾಗಿಲ್ಲವೆ? ತಾನು ಸುಖವಾಗಿದ್ದೇನೆಯೋ ಇಲ್ಲವೇ ಎಂದು ಯಾರಿಗೂ ತೋರಿಸಿಕೊಂಡಿಲ್ಲ, ಆದರೆ ಏನೇ ಆಗಲಿ ಓದಿದ ಹುಡುಗ. ತನ್ನ ಹೃದಯದ ವೀಣೆಯ ತಂತಿಯನ್ನು ಮಿಡಿಯಬಲ್ಲ ಹುಡುಗಿ ಬೇಕೆಂದು ಅವನು ಬಯಸಿದ್ದು ಸಹಜ. 'ನೀನು ಆ ಕ್ರಿಶ್ಚಿಯನ್ ಹುಡುಗಿಯನ್ನು ಮದುವೆಯಾದರೆ ನಾನು, ನಿಮ್ಮಮ್ಮ ಬಾವಿಯ ಪಾಲಾಗುತ್ತೇವೆ. ಇದ್ದ ಒಬ್ಬ ಮಗ ಜಾತಿಕೆಟ್ಟ ಮೇಲೆ ನಾವು ತಲೆ ಎತ್ತಿಕೊಂಡು ಬದುಕಿದಂತೆಯೇ ಆಯಿತು!' ಎನ್ನಬಾರದಾಗಿತ್ತೋ ಏನೋ!

ನಿಧಾನವಾಗಿ ಹಾಸಿಗೆಯಿಂದ ಎದ್ದರು ವೆಂಕಟಕೃಷ್ಣಪ್ಪನವರು.

೬

ವೆಂಕಟಕೃಷ್ಣಪ್ಪನವರು ಸ್ನಾನ, ಸಂಧ್ಯಾವಂದನೆ ಮುಗಿಸಿ ರೂಮಿಗೆ ಬಂದಾಗ ಮೂರ್ತಿ, "ಈಗ ತಾನೆ ಪೋಸ್ಟ್ ಬಂತು. ನಮ್ಮ ಸಾಹೇಬರು ನನಗೆ ಸಂಬಳವಿಲ್ಲದ ರಜ ಮಂಜೂರ್ಮಾಡಬಹುದು ಅಂತ ಶಿಪಾರಸು ಮಾಡಿದ್ದಾರಂತೆ!" ಎಂದು ನಿಟ್ಟುಸಿರುಬಿಟ್ಟ.

ಒಂದು ನಿಮಿಷ ಅವನನ್ನೇ ದೃಷ್ಟಿಸಿ ನೋಡಿ, ಚಪ್ಪರಕ್ಕೆ ಹೋದರು ವೆಂಕಟಕೃಷ್ಣಪ್ಪ. ಹಿಂದಿನ ದಿನ ಸೇರಿದ್ದ ಮುದುಕರೆಲ್ಲ ಅಲ್ಲಿ ಮತ್ತೆ ಸೇರಿದ್ದರು.

"ಬನ್ನಿ ಸ್ವಾಮಿ, ಏನು ಏಳೋದೇ ಹೊತ್ತಾಯಿತೋ!" ಒಬ್ಬರೆಂದರು.

"ಅವರಿಗೇನು, ನಮ್ಮ ಹಾಗೆ ಯೋಚನೆಯೆ! ಹೆಣ್ಣು ಮಕ್ಕಳಿಗೆಲ್ಲ ಮದುವೆಯಾಯಿತು. ಮಗ ಹೇಳಿದ ಹಾಗೆ ಕೇಳುತ್ತಾನೆ, ಕೈತುಂಬ ಸಂಬಳ ತರುತ್ತಾನೆ" ಇನ್ನೊಬ್ಬರು ಹೇಳಿದರು.

"ದೊಡ್ಡವರು ಹೇಳಿದ ಹಾಗೆ ಕೇಳಿದರೆ ಮುಂದೆ ಬರುತ್ತಾರೆ ಹುಡುಗರು. ಮೂರ್ತಿನ ನೋಡಿ" ಮೂರನೆಯವರೆಂದರು.

ವೆಂಕಟಕೃಷ್ಣಪ್ಪನವರು ಮಾತನಾಡಲಿಲ್ಲ. ವ್ಯಂಗ್ಯ ನಗುವೊಂದು ಅವರ ಮುಖದ ಮೇಲೆ ಹಾಯ್ದು ಹೋಯಿತು.

ಆರು ಹಿತವರು ನಿನಗೆ?

ಸಂಜೆ ಆರು ಗಂಟೆಯಾಗಿತ್ತು ಆಗಲೆ. ಬೆಳಕು ಕ್ರಮೇಣ ಜಗತ್ತಿನಿಂದ ಹಿಂದೆ ಸರಿಯುತ್ತಿತ್ತು. ಕೊಠಡಿಯಲ್ಲಿ ಆಗಲೇ ಕತ್ತಲಾಗಿತ್ತು. ಆದರೆ ಅಲ್ಲಿದ್ದ ಇಬ್ಬರಲ್ಲಿ ಯಾರೂ ದೀಪ ಹಚ್ಚುವ ಯೋಚನೆಯನ್ನು ಮಾಡಿರಲಿಲ್ಲ. ಇಬ್ಬರ ಮನಸ್ಸೂ ಯಾವುದೋ ಯೋಚನೆಯಲ್ಲಿ ಮುಳುಗಿತ್ತು.

ಇಬ್ಬರೂ ವಯಸ್ಸಾದವರೇ. ಒಬ್ಬರು ನರಸಿಂಹಯ್ಯ, ಮತ್ತೊಬ್ಬರು— ಹಾಸಿಗೆಯ ಮೇಲೆ ಮಲಗಿದ್ದ ರೋಗಿ— ವೆಂಕಟೇಶಯ್ಯ. ನರಸಿಂಹಯ್ಯನವರ ಮನಸ್ಸು ವೆಂಕಟೇಶಯ್ಯನವರ ಜೀವನದ ವಿಮರ್ಶೆಯಲ್ಲಿ ತೊಡಗಿತ್ತು. ಬಾಲ್ಯದಿಂದ ಒಂದೇ ಕಡೆ ಹುಟ್ಟಿ ಬೆಳೆದವರು ಅವರಿಬ್ಬರು. ವೆಂಕಟೇಶಯ್ಯ ಬಡವರ ಮನೆಯ ಹುಡುಗನಾದರೂ ಬಹಳ ಬುದ್ಧಿವಂತ ಎನಿಸಿಕೊಂಡಿದ್ದ. ನರಸಿಂಹಯ್ಯ ಅವನಿಗಿಂತ ಮೇಲಿನ ತರಗತಿಯಲ್ಲಿದ್ದರೂ ಎಷ್ಟೋ ಸಲ ಲೆಖ್ಖಗಳನ್ನು ಮಾಡುವಾಗ, ಪಾಠ ಓದುವಾಗ ಅವನ ಸಹಾಯ ತೆಗೆದುಕೊಳ್ಳಬೇಕಾಗಿತ್ತು. ಆ ದಿನಗಳು ನರಸಿಂಹಯ್ಯನವರ ಮನಸ್ಸಿನ ಮುಂದೆ ಹಾದುಹೋದುವು. ಅದಾದ ಮೇಲೆ ನರಸಿಂಹಯ್ಯನ ತಂದೆಗೆ ವರ್ಗವಾಯಿತೆಂದು ಕೆಲವು ವರ್ಷ ನರಸಿಂಹಯ್ಯ ಬೆಂಗಳೂರಿನಿಂದ ಮೈಸೂರಿಗೆ ಹೋದ. ಬೇರೆ ಊರಿಗೆ ಹೋದ ನಾಲ್ಕು ದಿನ ವೆಂಕಟೇಶಯ್ಯ ಕಾಗದ ಬರೆಯುತ್ತಿದ್ದ, ಆ ಮೇಲೆ ಕಾಲೇಜಿಗೆ ಸೇರುವ ಹೊತ್ತಿಗೆ ನಿಲ್ಲಿಸಿದ. ನರಸಿಂಹಯ್ಯ ಎಂ. ಬಿ. ಬಿ. ಎಸ್. ಮುಗಿಸಿಕೊಂಡು ಬೆಂಗಳೂರಿಗೆ ಬಂದು ನೆಲಸಿದಾಗ ಮತ್ತೆ ವೆಂಕಟೇಶಯ್ಯನನ್ನು ಪತ್ತೆ ಮಾಡಿದರು. ಅಷ್ಟು ಬುದ್ಧಿವಂತನೆನಿಸಿಕೊಂಡಿದ್ದ ವೆಂಕಟೇಶಯ್ಯ ಬಿ. ಎಸ್‌ಸಿ. ಯಲ್ಲಿ ಮೂರು ಸಲ ಸೋತು ವಿದ್ಯಾಭ್ಯಾಸದ ಕೈಬಿಟ್ಟಿದ್ದ. ತಂದೆಯ ಆಸ್ತಿ, ವ್ಯಾಪಾರ ಎರಡೂ ಹಸ್ತಗತವಾಗಿದ್ದುವು. ಆಗ ತಾನೆ ಮದುವೆಯಾಗಿ ಹುಡುಗಿ ಮನೆಗೆ ಬಂದಿದ್ದಳು. ಆದರೆ ವೆಂಕಟೇಶಯ್ಯನಲ್ಲಿ ಹಲವು ಬದಲಾವಣೆಗಳು ಸ್ಪಷ್ಟವಾಗಿದ್ದುವು. ಮೊದಲಿನ ಕಳೆ, ಚಟುವಟಿಕೆ ಈಗ ಅವನಲ್ಲಿರಲಿಲ್ಲ. ಎರಡನೆಯ

ದಾಗಿ ಮೊದಲಿನಂತೆ ಹೆಚ್ಚು ಮಾತನಾಡುತ್ತಿರಲಿಲ್ಲ. ಮನಸ್ಸಿಗೆ ಏನೋ ಮಂಕು ಹಿಡಿದಂತಿದ್ದ. ಕೆಲವು ಕೆಟ್ಟ ಚಾಳಿಗಳೂ ಅವನನ್ನು ಅಂಟಿವೆ ಎಂದು ನರಸಿಂಹಯ್ಯನ ಕಿವಿಗೆ ಕೇಳಿಬಂದಿತ್ತು; ಅವನಿಗೆ ಇದ್ದದ್ದು ಒಬ್ಬನೇ ಮಗ. ಕೆಲವು ವರ್ಷಗಳಾದ ಮೇಲೆ ವೆಂಕಟೇಶಯ್ಯನ ಹೆಂಡತಿ ಇದ್ದಕ್ಕಿದ್ದ ಹಾಗೆಯೇ ಆತ್ಮಹತ್ಯೆ ಮಾಡಿಕೊಂಡು ಕಣ್ಮುಚ್ಚಿದಳು. ಬಹಳ ಗುಸುಗುಸ ವಾಯಿತು. ಜನ ಹತ್ತು ರೀತಿ ಆಡಿಕೊಂಡರು—ವೆಂಕಟೇಶಯ್ಯ ಹೊಡೆದು ಬಡೆದು ಮಾಡಿದ್ದರಿಂದ ಹಾಗಾಯಿತೆಂದರು; ಅವನ ಕೆಟ್ಟ ಚಾಳಿಯಿಂದ ಮನಸ್ಸು ಬೇಸತ್ತು ಆಕೆ ಜಗತ್ತು ಬಿಟ್ಟು ನಡೆದಳೆಂದರು; ಆಕೆಯ ಬಾಳೇ ಚೆನ್ನಾಗಿರಲಿಲ್ಲ. ಅದು ವೆಂಕಟೇಶಯ್ಯನಿಗೆ ಗೊತ್ತಾಯಿತು, ಅದಕ್ಕಾಗಿ ಸತ್ತು ತಪ್ಪಿಸಿಕೊಂಡಳು ಎಂದರು. ವೆಂಕಟೇಶಯ್ಯ ಕೆಲವು ದಿನ ಹುಚ್ಚನ ಹಾಗಿದ್ದ. ನರಸಿಂಹಯ್ಯನ ಹತ್ತಿರ ಕೂಡ ಈ ವಿಷಯ ಮಾತನಾಡ ಲಿಲ್ಲ. ಆದರೆ ಅಂದಿನಿಂದ ಅವನ ರೀತಿ ಮತ್ತೆ ಬದಲಾಯಿಸಿತ್ತು. ಈಗ ಸಿಗರೇಟನ್ನೂ ಮುಟ್ಟುತ್ತಿರಲಿಲ್ಲ. ಯಾರೊಡನೆಯೂ ಸೇರುತ್ತಿರಲಿಲ್ಲ. ಈಗ ಮಗ ಬೊಂಬಾಯಿಯಲ್ಲಿ ಓದುತ್ತಿದ್ದ. ವೆಂಕಟೇಶಯ್ಯ ಹಾಸಿಗೆ ಹಿಡಿದು ಮಲಗಿದ್ದ. ನರಸಿಂಹಯ್ಯ ಅವನನ್ನು ಆಗಾಗ ನೋಡಿಕೊಂಡು ಹೋಗು ತ್ತಿದ್ದ. ವೆಂಕಟೇಶಯ್ಯನ ದೂರದ ಬಂಧುತ್ವದ ಮುದುಕಿಯೊಂದು ಅವನಿಗೆ ಗಂಜಿ, ಕಾಫಿ ಕುಡಿಸಲು ಬಂದಿತ್ತು.

ತಮ್ಮ ಬಾಲ್ಯದಿಂದ ಈಗಿನ ವರೆಗಿನ ಘಟನೆಗಳು, ಬದಲಾವಣೆಗಳು ನರಸಿಂಹಯ್ಯನವರ ಕಣ್ಣ ಮುಂದೆ ಹಾದು ಹೋಗುತ್ತಿದ್ದುವು. ವೆಂಕಟೇ ಶಯ್ಯ ಇನ್ನು ಬಹಳ ದಿನ ಬದುಕಲಾರನೆಂದು ಅವರಿಗೆ ಗೊತ್ತಿತ್ತು. ಅವತ್ತು ತಾನೇ ವೆಂಕಟೇಶಯ್ಯನ ಮಗನಿಗೆ ಬರುವಂತೆ ಕಾಗದ ಬರೆದಿದ್ದರು. ರೋಗಿಯ ಮುಖವನ್ನು ದೃಷ್ಟಿಸಿ ನೋಡಿದರು. ಆ ಮುಖದಲ್ಲಿ ಯಾವುದೋ ಯೋಚನೆ ಮೂಡಿತ್ತು.

ಕೊಠಡಿಯಲ್ಲಿ ಮೌನ ತುಂಬಿತ್ತು. ಅಮಾವಾಸ್ಯೆಯ ಕತ್ತಲಿನ ಜೈತ್ರ ಯಾತ್ರೆ ಸಾಗಿತ್ತು.

"ನರಸಿಂಹಯ್ಯ"

ಮುಂದೆ ಬಾಗಿದರು ನರಸಿಂಹಯ್ಯ "ಆಂ?"

"ನಿಜ ಹೇಳಿಬಿಡು. ನಾನು ಬದುಕುತ್ತೇನೆಯೆ ಅಂತ"

"ಛೆ, ಹಾಗೇಕೆ ಮಾತಾಡುತ್ತಿ ವೆಂಕಟೇಶಯ್ಯ? ವಾಸಿಯಾಗದೆ ಏನಾಗುತ್ತೆ?"

ನೀರಸ ನಗು ನಕ್ಕು ವೆಂಕಟೇಶಯ್ಯನೆಂದ—"ನಿನ್ನ ಕಸುಬಿನ ಮಾತು ಬಿಟ್ಟು ಹೇಳು, ನರಸಿಂಹಯ್ಯ. ಸಾವು ಅಂದರೆ ನನಗೆ ಹೆದರಿಕೆ ಇಲ್ಲ. ಗುಣವಾಗೊಲ್ಲ ಅಂತ ನೀನು ಹೇಳಿದರೆ ನನಗೇನೂ ದುಃಖವಿಲ್ಲ. ಆದರೆ ಮುಂದಿನ ಯೋಚನೆ ಮಾಡೋದಕ್ಕೆ ಅನುಕೂಲವಾಗುತ್ತೆ."

ನರಸಿಂಹಯ್ಯ ಒಂದು ನಿಮಿಷ ನಿಧಾನಿಸಿ ಹೇಳಿದರು—"ಇವತ್ತು ಚಂದ್ರೂಗೆ ಬೊಂಬಾಯಿಗೆ ಕಾಗದ ಬರೆದೆ, ಬೇಗ ಬಂದುಬಿಡು ಎಂದು."

ನಗೆಯೊಂದು ವೆಂಕಟೇಶಯ್ಯನ ಮುಖದ ಮೇಲೆ ತೇಲಿಹೋಯಿತು.

"ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ,
ಚಿಂತೆಯನು ಬಿಟ್ಟು ಶ್ರೀ ಹರಿಯ ನೆನೆ ಮನವೆ"

ಕೊಠಡಿಯಲ್ಲಿದ್ದ ಇಬ್ಬರೂ ಚಕಿತರಾದರು. ಮರುಕ್ಷಣ ನರಸಿಂಹಯ್ಯ "ಓ ಇವತ್ತು ಪುರಂದರದಾಸರ ಪುಣ್ಯದಿನ, ಎಲ್ಲ ಕಡೆಯೂ ಸಂಗೀತ, ಭಜನೆ, ಹರಿಕಥೆ" ಎನ್ನುತ್ತ ಕಿಟಕಿಯ ಬಾಗಿಲು ಹಾಕಲು ಎದ್ದರು.

"ಹಾಗೇ ಇರಲಿ, ಬಿಡು, ನರಸಿಂಹಯ್ಯ"

ಇಬ್ಬರೂ ಹಾಡು ಕೇಳುತ್ತ ಕುಳಿತರು. ಆ ಹಾಡು ಮುಗಿಯಿತು. ಮತ್ತೊಂದು ಪ್ರಾರಂಭವಾಯಿತು

"ಆರು ಹಿತವರು ನಿನಗೆ ಮೂರು ಮಂದಿಗಳೊಳಗೆ?
ನಾರಿಯೊ, ಧಾರಿಣಿಯೊ, ಬಲುಧನದ ಸಿರಿಯೊ?"

"ಕಿಟಕಿ ಮುಚ್ಚುತ್ತಿಯ ನರಸಿಂಹಯ್ಯ?"

ನರಸಿಂಹಯ್ಯನಿಗೆ ಆಶ್ಚರ್ಯವಾಯಿತು. ಆದರೆ ಎದ್ದು ಬಾಗಿಲು ಹಾಕಿದರು. ಸಂಗೀತದ ಪ್ರವಾಹಕ್ಕೆ ಅಡ್ಡಗಟ್ಟಿತು.

"ನಾನೊಂದು ಕತೆ ಹೇಳುತ್ತೇನೆ, ಕೇಳುತ್ತೀಯ ನರಸಿಂಹಯ್ಯ?"

ನರಸಿಂಹಯ್ಯನಿಗೆ ಏನು ಉತ್ತರ ಹೇಳಲೂ ತೋರಲಿಲ್ಲ. "ಯಾರ ಕತೆ?" ಎಂದರು. ಏನಾದರೂ ಉತ್ತರ ಕೊಡಬೇಕಲ್ಲ ಎಂದು.

"ನನ್ನ ಕತೆ; 'ಆರು ಹಿತವರು ನಿನಗೆ?' ಎಂದು ಈಗ ಕೇಳಲಿಲ್ಲವೇ ಪ್ರಶ್ನೆ? ಅದರ ವಿಷಯ"

"ಹೂಂ"

ಎರಡು ನಿಮಿಷ ಸುಮ್ಮನಿದ್ದು ಕತೆ ಆರಂಭಿಸಿದ ವೆಂಕಟೇಶಯ್ಯ. "ನಾನೂ ನೀನೂ ಹೈಸ್ಕೂಲು ವರೆಗೆ ಒಟ್ಟಿಗೆ ಇದ್ದೆವಲ್ಲವೆ? ಅಲ್ಲಿಯ ವರೆಗೆ ನನ್ನ ಕತೆ ನಿನಗೆ ಗೊತ್ತು. ಆ ಮೇಲೆ ಇಂಟರ್ಮೀಡಿಯೆಟ್ ಸೇರಿದೆ. ಅಲ್ಲಿ ನನಗೆ ವಿಶ್ವೇಶ್ವರಯ್ಯನ ಗೆಳೆತನವಾದದ್ದು."

"ಯಾವ ವಿಶ್ವೇಶ್ವರಯ್ಯ? ಲಾಯರ್ರೇ"

"ಹೂಂ, ಅವನೇ. ನಾವಿಬ್ಬರೂ ಒಂದೇ ಸೆಕ್ಷನ್. ಪ್ರಾಕ್ಟಿಕಲ್‌ನಲ್ಲಿ ನನ್ನ ಹೆಸರಾಗುತ್ತಲೇ ಅವನದು, ನಾವಿಬ್ಬರೂ ಒಂದೇ ಮೇಜು. ಅವನೂ ದುಡ್ಡಿದ್ದವರ ಮನೆಯಿಂದ ಬಂದವನು, ಬುದ್ಧಿವಂತ. ಬಹಳ ಬೇಗ ನಮ್ಮಿಬ್ಬರಿಗೆ ಸ್ನೇಹವಾಯಿತು. ಅದೂ ಸ್ನೇಹ ಅಂದರೆ ಅಷ್ಟಿಷ್ಟಲ್ಲ. ಅವನು ಹೊಲಿಸಿಕೊಂಡಂತಹ ಸೂಟೇ ನಾನೂ ಹೊಲಿಸಬೇಕು, ಒಟ್ಟಿಗೇ ಹೊಟೆಲಿಗೆ ಹೋಗಬೇಕು, ಪ್ರತಿ ಸಂಜೆ ವಾಕಿಂಗ್ ಹೋಗಲಿ, ಸಿನಿಮಾಗೆ ಹೋಗಲಿ, ಒಟ್ಟಿಗೆ ಹೋಗಬೇಕು, ಅಷ್ಟರ ಮಟ್ಟಿಗೆ."

"ಹೂಂ"

"ಇಬ್ಬರೂ ಬಿ. ಎಸ್‌ಸಿ. ಸೇರಿದೆವು. ಆಗ ಅವರ ಸೋದರ ಮಾವ ಬೆಂಗಳೂರಿಗೆ ಬಂದದ್ದು. ವರ್ಗವಾಗಿ ಬಂದವರಿಗೆ ಮನೆ ಸಿಕ್ಕಲಿಲ್ಲವೆಂದು ವಿಶ್ವೇಶ್ವರಯ್ಯನವರ ಮನೆಯಲ್ಲೇ ನಿಂತರು. ಅವರ ಮಗಳು ನಳಿನಿ."

"ವಿಶ್ವೇಶ್ವರಯ್ಯನ ಹೆಂಡತಿ ಅಲ್ಲವೇ ಆಕೆ"

"ಹೌದು. ಆಗ ಜೂನಿಯರ್ ಇಂಟರ್ಮೀಡಿಯೆಟ್ ಸೇರಿದ್ದಳು. ಅವಳಿಗೆ ಅರ್ಥವಾಗದ ಲೆಖ್ಖ— ಗಿಕ್ಕ ವಿಶ್ವೇಶ್ವರಯ್ಯನ ಮುಂದಿಡುತ್ತಿದ್ದಳು. ಅವನಿಗೆ ಬರದಿದ್ದರೆ ನಾನು ಅವರ ಮನೆಗೆ ಹೋದಾಗ ಮಾಡಲು ಪ್ರಯತ್ನ ಪಡುತ್ತಿದ್ದೆ. ಹೀಗೆ ನಳಿನಿಯ ಪರಿಚಯವಾಯಿತು ನನಗೆ."

ನರಸಿಂಹಯ್ಯ ಮನಸ್ಸಿನಲ್ಲೇ ಅಂದುಕೊಂಡರು, "ಸರಿ ಸರಿ, ಈ ಕತೆ ಹೇಗೆ ಮುಕ್ತಾಯ ಅನ್ನೋದು ಗೊತ್ತು ನನಗೆ. ಇವನು ಅವಳನ್ನು ಪ್ರೀತಿಸಿದ್ದ. ಅವಳು ಇವನನ್ನು ಪ್ರೀತಿಸಲಿಲ್ಲ. ಅಥವ ಇವನು, ವಿಶ್ವೇಶ್ವರಯ್ಯ ಇಬ್ಬರೂ ಅವಳನ್ನು ಪ್ರೀತಿಸಿದರು. ಅವಳು ವಿಶ್ವೇಶ್ವರಯ್ಯನ ಕೈ ಹಿಡಿದಳು. ಇವನಿಗೆ ಹುಚ್ಚು ಹಿಡಿದ ಹಾಗಾಯಿತು ನಾಟಕದ ಕತೆ, ಅಷ್ಟೆ."

ವೆಂಕಟೇಶಯ್ಯ ಹೇಳುತ್ತಿದ್ದ– "ಅಂತೂ ಪರಿಚಯ ಬೆಳೆಯಿತು. ಆಕೆ ಸ್ವಲ್ಪ ವಿದ್ಯಾವಂತರ ರೀತಿಯವಳು. ಒಂದೊಂದು ದಿನ ನಮ್ಮಿಬ್ಬರ ಜೊತೆಗೆ ಪೇಟೆಗೆ ಬರುವಳು. ವಾಕಿಂಗ್ ಬರುವಳು. ಹಾಗೂ ಹೀಗೂ ನಾನು ಅವರಿಗೆ ಮೊದಲಿಂದ ಪರಿಚಿತನಾದವನೇ ಎನ್ನುವಂತೆ ಸಲಿಗೆಯಿಂದ ನಡೆದುಕೊಳ್ಳುತ್ತಿದ್ದಳು.

"ನಮ್ಮ ಪರೀಕ್ಷೆ ಹತ್ತಿರ ಬರುತ್ತಿತ್ತು. ಒಂದು ದಿನ ಸಂಜೆ ಆರೂವರೆ— ಏಳು ಗಂಟೆಗೆ ಯಾವುದೋ ಪುಸ್ತಕ ತರಲು ವಿಶ್ವೇಶ್ವರಯ್ಯನ ಮನೆಗೆ ಹೋದೆ. ಅವನ ಹೆಸರು ಕೂಗುತ್ತಲೇ ನಳಿನಿ ಬಾಗಿಲು ತೆಗೆದು, 'ಒಳಗಿದ್ದಾರೆ. ಬನ್ನಿ, ಕೂತುಕೊಳ್ಳಿ' ಎಂದಳು. ಕೊಠಡಿಯೊಳಗೆ ಹೋಗಿ ಕುಳಿತೆ. ಮನೆಯೆಲ್ಲ ನಿಶ್ಶಬ್ದವಾಗಿತ್ತು."

"ಏನು, ಯಾರೂ ಇದ್ದ ಹಾಗೆ ಕಾಣೆ?" ಎಂದೆ.

"ಇಲ್ಲ, ಅಮ್ಮ ಅವರೆಲ್ಲ ಈಗ ತಾನೆ ಎಲ್ಲಿಗೋ ಅರಿಶಿನ ಕುಂಕುಮಕ್ಕೆ ಹೋದರು ನಾನು ಓದಿಕೊಳ್ಳಬೇಕು ಎಂದು ನಿಂತೆ. "ಈಗ ಬಂದು ಬಿಡುತ್ತಾರೆ" ಎಂದಳು.

"ಇಷ್ಟು ದೊಡ್ಡ ಮನೆಗೆ ಒಬ್ಬರೇ ಇದ್ದೀರ?" ಎಂದು ಕೇಳಿದೆ

"ಇಲ್ಲ. ವಿಶ್ವೇಶ್ವರ ಇದ್ದಾನೆ, ಮನೆಯ ಆಳು, ಕೆಲಸದ ಹೆಂಗಸು, ಅಡಿಗೆಯಾಕೆ ಇದ್ದಾರೆ. ಅಲ್ಲದೆ ಈಗ ಕಾಲು ಗಂಟೆಯೊಳಗೆ ಅವರೂ ಬಂದು ಬಿಡುತ್ತಾರೆ" ಎಂದು ಉತ್ತರ ಹೇಳಿದಳು

ಏನೇನೋ ಪಾಠದ ವಿಷಯ, ಪರೀಕ್ಷೆಯ ವಿಷಯ, ಕಾಲೇಜು ವಿಷಯ ಮಾತನಾಡುತ್ತಿದ್ದೆವು. ಒಂದು ಸಲ— ಏನು ಹೇಳಿದೆನೋ

ಜ್ಞಾಪಕವಿಲ್ಲ— ತಟ್ಟನೆ ನಗು ಬಂತು. ಅವಳ ಕಡೆ ನೋಡಿದೆ, ಅವಳೂ ಮುಗುಳ್ನಗೆ ನಗುತ್ತಿದ್ದಳು''

ನರಸಿಂಹಯ್ಯ ಗೊಣಗಿಕೊಂಡರು. "ಸರಿ, ನಾನೆಂದುಕೊಂಡ ಹಾಗೆಯೇ ಕತೆ ಸಾಗುತ್ತಿದೆ. ಆದರೆ ಕುಂಟುತ್ತ ಸಾಗಿದೆ, ಅಷ್ಟೆ.''

ವೆಂಕಟೇಶಯ್ಯ ಕತೆ ಮುಂದುವರಿಸಿದ. "ನಳಿನಿಯ ನಗೆಯಲ್ಲಿ ಯಾವುದೋ ವೈಚಿತ್ರ್ಯವಿತ್ತು, ನರಸಿಂಹಯ್ಯ. ನಾನೂ ಎಷ್ಟೋ ಜನ ಹೆಂಗಸರ ಮುಗುಳ್ನಗೆ ಕಂಡಿದ್ದೇನೆ, ಅವಳಿಗಿಂತ ಲಾವಣ್ಯವತಿಯರ ಮುಗುಳ್ನಗೆ ನೋಡಿದ್ದೇನೆ. ಆದರೆ ಅಂತಹ ಮಾಯದ ನಗೆ ಕಂಡಿಲ್ಲ. ಸರೋವರದ ಪ್ರಶಾಂತ ನೀರಿನಲ್ಲಿ ಒಂದು ಸಣ್ಣ ಕಲ್ಲು ಹಾಕಿದರೆ ಅದರ ಸುತ್ತ ತೆರೆ ವರ್ತುಲವಾಗಿ ಎದ್ದು, ಬರುಬರುತ್ತ ಆ ಚಕ್ರ ದೊಡ್ಡದಾಗುತ್ತ ಹೋಗುತ್ತದೆ ನೋಡು, ಹಾಗೆ ಅವಳ ಮಂದಹಾಸದ ಬೆಡಗು ತೆರೆ ತೆರೆ ಯಾಗಿ ಅವಳ ಮುಖವನ್ನು ತುಂಬುತ್ತಿತ್ತು. ತಾವರೆ ರಾತ್ರಿಯೆಲ್ಲ ಅರಳದೆ, ನಮ್ಮ ಕಣ್ಣ ಮುಂದೆಯೇ ಮೊಗ್ಗಾಗಿದ್ದುದು ಕ್ರಮೇಣ ಅರಳಿದರೆ ಮನಸ್ಸಿಗೆ ಎಷ್ಟು ಸಂತೋಷ, ಕಣ್ಣಿಗೆ ಎಷ್ಟು ಹಬ್ಬವಾಗುವುದೋ ಅಷ್ಟು ಸಂತೋಷ ಹಬ್ಬ ಆಗುತ್ತಿತ್ತು ಅವಳ ಮುಗುಳ್ನಗೆಯಿಂದ. ಅವಳು ನಕ್ಕಾಗ ಕಣ್ಣು ಸ್ವಲ್ಪ ಚಿಕ್ಕದಾಗುವುದು, ನೋಡುವವರಿಗೆ ಆ ನಗೆಯ ಬೆಡಗನ್ನು ಸೆರೆ ಯಿಡಲು ಕಣ್ಣು ಚಿಕ್ಕದಾಯಿತೋ ಎನ್ನಿಸುವುದು. ತಂಗಾಳಿ ತುಂಬಿದ ಪೈರಿನ ಹೊಲದ ಮೇಲೆ ಸಾಗುವಾಗ ಪ್ರತಿ ತೆನೆಯನ್ನೂ ಸೋಕಿ ಮುಂದೆ ಸಾಗಿ ಪ್ರತಿ ತೆನೆಗೂ ಆನಂದ ತಂದಂತೆ ಅವಳ ನಗೆ ಕಂಡವರಲ್ಲಿ ಪ್ರತಿಯೊಬ್ಬ ನನ್ನೂ ತಾಗಿ ಮೈಯಲ್ಲಿ ಆನಂದದ ಪ್ರವಾಹ ಹರಿಸಿ ಸಾಗುತ್ತಿತ್ತು.''

ನರಸಿಂಹಯ್ಯನ ತುಟಿಯ ಮೇಲೆ ಮಿಂಚಿದ ನಗೆ ವೆಂಕಟೇಶಯ್ಯನಿಗೆ ಕತ್ತಲಲ್ಲಿ ಕಾಣಲಿಲ್ಲ. ಬೆಳಕಿದ್ದರೂ ಕಾಣುತ್ತಿತ್ತೊ ಇಲ್ಲವೋ.

"ಅಂದು ಸಂಜೆ ಅವಳ ನಗೆಯ ಮಾಟಕ್ಕೆ ನಾನು ತುತ್ತಾದೆ. ಎಲ್ಲಿಂದ ಧೈರ್ಯ ತಂದುಕೊಂಡೆನೋ, ಅಂತೂ "ನನ್ನನ್ನು ಮದುವೆಯಾಗುತ್ತಿಯ, ನಳಿನಿ?'' ಎಂದು ಕೇಳಿದೆ. ಅವಳು ತಲೆ ತಗ್ಗಿಸಿದಳು, ಅಷ್ಟೆ. ಮುಂದೆ ಬಾಗಿ ಕೈ ಹಿಡಿದು ಅದೇ ಪ್ರಶ್ನೆ ಕೇಳಿದೆ. 'ಹುಂ' ಎಂದು ಕೇಳಿಸಿತೋ

ಇಲ್ಲವೋ ಎನ್ನುವಂತೆ— ಉತ್ತರ ಕಿವಿಗೆ ತಾಕಿತು. ಅಷ್ಟು ಹೊತ್ತಿಗೆ ಯಾರೋ ಬಂದ ಶಬ್ದ ಕೇಳಿ ಕೈ ಬಿಟ್ಟೆ."

ಒಂದು ನಿಮಿಷ ವೆಂಕಟೇಶಯ್ಯ ಸುಮ್ಮನಿದ್ದ. ಹಿಂದಿನ ದೃಶ್ಯ ವನ್ನು ನೆನೆದು ಮೈಮರೆತನೋ ಎನ್ನಿಸಿತು ನರಸಿಂಹಯ್ಯನಿಗೆ.

"ವಿಶ್ವೇಶ್ವರಯ್ಯ ಒಳಗೆ ಬಂದ. ನಾವು ಮಾತನಾಡುತ್ತಿರುವಾಗಲೇ ಅವರ ಮನೆಯವರೆಲ್ಲ ಹಿಂತಿರುಗಿದರು. ನಾನೂ ವಿಶ್ವೇಶ್ವರಯ್ಯ 'ವಾಕ್' ಹೊರಟೆವು. ಲಾಲ್‌ಬಾಗಿನಲ್ಲಿ ವಿಶ್ವೇಶ್ವರಯ್ಯ, 'ನೀನು ನಳಿನಿಗೆ ಹೇಳಿದು ದನ್ನೆಲ್ಲ ಕೇಳಿದೆ, ಇನ್ನು ಮೇಲೆ ಹಾಗೆ ಹುಚ್ಚಾಟವಾಡಬೇಡ' ಎಂದ ನಾನು ಉತ್ತರ ಕೊಡುವ ಸ್ಥಿತಿಯಲ್ಲಿರಲಿಲ್ಲ."

ಮತ್ತೆ ಸ್ವಲ್ಪ ಹೊತ್ತು ಕೊಠಡಿಯಲ್ಲಿ ಮೌನ ನೆಲಸಿತು. ಮತ್ತೆ ವೆಂಕಟೇಶಯ್ಯ ಆರಂಭ ಮಾಡಿದ ಕತೆ; "ಅದಾದ ಮೇಲೆ ಅವರ ಮನೆಗೆ ನಾನು ಹೋಗುತ್ತಿದ್ದುದು ಕಡಿಮೆ. ಯಾವಾಗಲಾದರೊಂದು ಸಲ ನಳಿನಿ ಸಿಕ್ಕುತ್ತಿದ್ದಳು. ಅವಳ ಮಾತಿನಲ್ಲಿ ಈಗ ಹೊಸ ಆತ್ಮೀಯತೆ ಇತ್ತು. ಅವಳ ನಡತೆಯಲ್ಲಿ ಹೆಚ್ಚು ನಾಚಿಕೆ ಬೆರೆತಿತ್ತು. ಅವಳೊಡನೆ ಹೇಗೆ ನಡೆದು ಕೊಳ್ಳಬೇಕೆಂಬುದೇ ನನಗೆ ಸಮಸ್ಯೆಯಾಗಿತ್ತು. ನನ್ನ ರೀತಿ ಅವಳಿಗೂ ಬಿಡಿಸಲಾರದ ಒಗಟಾಗಿರಬೇಕು. ಅಷ್ಟು ಹೊತ್ತಿಗೆ ಅವಳ ತಂದೆಗೆ ಮತ್ತೆ ವರ್ಗವಾಯಿತು, ಅವರೆಲ್ಲ ಹೊರಟು ಹೋದರು. ವಿಶ್ವೇಶ್ವರಯ್ಯ ಏನು ಮಾಡಿದನೋ ಕಾಣೆ, ಅದೇ ಬೇಸಗೆಯ ರಜೆಯಲ್ಲಿ ಅವನೊಡನೆ ನಳಿನಿಯ ಮದುವೆಯಾಯಿತು."

"ಮದುವೆಗೆ ಹೋಗಿದ್ದೆಯ?"

"ಉಹೂಂ, ವಿಶ್ವೇಶ್ವರಯ್ಯನೇನೋ ಕರೆದ; ನಾನು ಹೋಗಲಿಲ್ಲ."

ವೆಂಕಟೇಶಯ್ಯನ ಕತೆ ಮುಂದುವರಿಯಿತು. "ಅವರ ಮದುವೆ ಯಾದ ಒಂದೆರಡು ವರ್ಷ ನಾನು ಹೇಗಿದ್ದೆ ಎಂಬುದನ್ನು ವರ್ಣಿಸಲಾರೆ, ನರಸಿಂಹಯ್ಯ. ನಾಲ್ಕೇ ಮಾತಿನಲ್ಲಿ ಹೇಳುವುದಾದರೆ ಬೇಕಾದಷ್ಟು ಕೆಲಸ ಕಟ್ಟಿಕೊಂಡೆ, ಇಲ್ಲದ ಚಾಳಿ ಕಲಿತುಕೊಂಡೆ, ಏನಾದರೂ ನನ್ನ ಮನಸ್ಸು ಸರಿ ಹೋಗಲಿಲ್ಲ. ಅದಾದ ಎರಡು ವರ್ಷಕ್ಕೆ ನನಗೆ ಮದುವೆಯಾಯಿತು.

ತಾರ ನನ್ನ ಕೈಹಿಡಿದಳು. ನೀನೂ ತಾರಾನ ನೋಡಿದ್ದೆ. ರೂಪದಲ್ಲಿ, ಗುಣದಲ್ಲಿ ಅವಳು ಯಾರಿಗೂ ಹಿಂದುಳಿದಿರಲಿಲ್ಲ. ಆದರೆ ನನ್ನ ಮನಸ್ಸು ಮಾತ್ರ ನಳಿನಿಯನ್ನು ಮರೆಯಲಿಲ್ಲ. ಮನಸ್ಸಿನ ದುಃಖವನ್ನು ಮರೆಯಲು ಕಲಿತಿದ್ದ ಚಾಳಿಗಳನ್ನೂ ಬಿಡಲು ಸಾಧ್ಯವಾಗಲಿಲ್ಲ. ಚಂದ್ರು ಹುಟ್ಟಿದ್ದ ಮೇಲೂ ನನ್ನ ಮನಸ್ಸು ತಾರಳಲ್ಲಿ ಪೂರ್ತಿ ನೆಡಲಿಲ್ಲ. ಕೈಹಿಡಿದ ಹೆಂಡತಿ ಯೆಂದು ಹೇಗೋ ಬಾಳುತ್ತಿದ್ದೆ, ಆದರೆ ಹೃದಯ ಅರ್ಪಿತವಾಗಿದ್ದದ್ದು ನಳಿನಿಗೆ."

ಇಷ್ಟು ಮಾತನಾಡಿದುದು ವೆಂಕಟೇಶಯ್ಯನಿಗೆ ಪ್ರಯಾಸವಾಗಿತ್ತು. ನರಸಿಂಹಯ್ಯನಿಗೂ ಕತೆಯಲ್ಲಿ ಅಷ್ಟು ಆಸಕ್ತಿ ತೋರಿಬಂದಂತಿರಲಿಲ್ಲ. "ಇಂತಹ ಕತೆಗಳು ಎಷ್ಟೋ ಕೇಳಿದ್ದೇನೆ. ಇದರಲ್ಲಿ ಅಂತಹ ಮಹತ್ವದ ಅಂಶವೇನು?" ಎನ್ನಿಸಿತ್ತು. ವೆಂಕಟೇಶಯ್ಯ ಸ್ವಲ್ಪ ಕಷ್ಟದಿಂದ ಉಸಿರಾಡು ತ್ತಿದ್ದ. "ನಿನಗೆ ಆಯಾಸವಾಗಿದೆ ವೆಂಕಟೇಶಯ್ಯ, ಹೋಗಲಿ ಬಿಡು, ಇನ್ನೆಂದಾದರೂ ಪೂರ್ತಿ ಹೇಳುವಿಯಂತೆ," ಎಂದರು ನರಸಿಂಹಯ್ಯ.

"ಹುಂ, ಮತ್ತೆ ನಿನಗೆ ಕತೆ ಹೇಳುವ ಅವಕಾಶ ಸಿಗುತ್ತದೆ ಎಂದೇನು ಗೊತ್ತು? 'ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ,' ಕೇಳಿದೆಯೋ ಇಲ್ಲವೋ?" ವೆಂಕಟೇಶನೆಂದ. ನರಸಿಂಹಯ್ಯ ಸುಮ್ಮನಾದರು. ವೆಂಕ ಟೇಶಯ್ಯ ಕತೆ ಮುಂದುವರಿಸಿದ. "ನಮ್ಮಪ್ಪ ನನಗೆ ಬಿಟ್ಟ ಆಸ್ತಿ ಯೇನೂ ಕಡಮೆಯಲ್ಲ. ಅವರು ಒಳ್ಳೆಯ ಹೆಸರು ಮಾಡಿದ್ದುದರಿಂದ ಹಾಗೂ ಹೀಗೂ ವ್ಯಾಪಾರವೂ ಚೆನ್ನಾಗಿಯೇ ಆಗುತ್ತಿತ್ತು. ಆದರೆ ನನ್ನ ದುಂದಿಗೆ, ಚಾಳಿಗಳಿಗೆ ಎಷ್ಟು ಹಣವಾದರೆ ಸಾಕು? ಬಂದದ್ದೆಲ್ಲ ತಳವಿಲ್ಲದ ಪಾತ್ರೆಗೆ ನೀರು ಸುರಿದಂತೆ. ತಾರ ಮೊದಮೊದಲು ಬುದ್ಧಿವಾದ ಹೇಳಿದಳು, ಆ ಮೇಲೆ ಬಿಟ್ಟುಬಿಟ್ಟಳು."

"ತಾರ ಬಂದ ಮೇಲೆ ಮತ್ತೆ ವಿಶ್ವೇಶ್ವರಯ್ಯನ ಮನೆಗೆ ನಾನು ಸ್ವಲ್ಪ ಹೋಗುವುದು ಆರಂಭವಾಯಿತು. ನಳಿನಿ ತಾರಳಲ್ಲಿ ಬಹಳ ಆದರ ತೋರಿಸುತ್ತಿದ್ದಳು. ವಿಶ್ವೇಶ್ವರಯ್ಯ ನನ್ನನ್ನು ಸ್ವಲ್ಪ ಕಡೆಗಣ್ಣಿನಿಂದಲೇ ನೋಡುತ್ತಿದ್ದ. ಅವನಿಗೆ ನನ್ನ-ನಳಿನಿಯ ಗೆಳೆತನದ ವಿಷಯದಲ್ಲಿ ಬಹಳ

ಅನುಮಾನವಿತ್ತೆಂದು ತೋರುತ್ತದೆ. ಆದರೂ ನಳಿನಿಗಾಗಿ ಎಲ್ಲ ಸಹಿಸಿಕೊಂಡಿದ್ದ.''

''ವಿಶ್ವೇಶ್ವರಯ್ಯನ ಹಿರಿಯ ಮಗ ಮೋಹನನ ಐದನೇ ವರ್ಷದ ಹುಟ್ಟಿದ ಹಬ್ಬಕ್ಕೆ ಸಂಜೆ ನಾನು-ತಾರ ಹೋಗಿದ್ದೆವು. ಆವತ್ತು ಹೋಗುವುದಕ್ಕೆ ನನಗೆ ಇಷ್ಟವಿಲ್ಲ. ಸಾಲ ಕುತ್ತಿಗೆಗೆ ಬಂದಿತ್ತು. ಇನ್ನು ಎರಡು ದಿನಗಳಲ್ಲಿ ಇನ್ನೂರು ರೂಪಾಯಿ ಜೊತೆ ಮಾಡದಿದ್ದರೆ ಮರ್ಯಾದೆ ಹೋಗುವ ಪ್ರಸಂಗಕ್ಕೆ ಸಿಕ್ಕಿಕೊಂಡಿದ್ದೆ. ಆ ಹಣ ಕೊಡದಿದ್ದರೆ ಪಠಾಣ ಊರಿನವರೆಲ್ಲರ ಎದುರಿಗೆ ಮಾರ್ಯಾದೆ ತೆಗೆಯುವೆನೆಂದು ಹೆದರಿಸಿದ್ದ. ಆ ಯೋಚನೆಯಲ್ಲಿಯೇ ಮುಳುಗಿದ್ದ ನನಗೆ ಎಲ್ಲಿಗೆ ಹೋಗುವುದೂ ಬೇಕಿರಲಿಲ್ಲ. ಆದರೆ ನಳಿನಿ—ವಿಶ್ವೇಶ್ವರಯ್ಯ ಸ್ವತಃ ಬಂದು ಕರೆದು ಹೋಗಿದ್ದರು. ಅಂದು ಊಟಕ್ಕೆ ಹೋಗದೆ ಸಂಜೆ ಅವರ ಮನೆಗೆ ಹೋದೆವು. ಮೋಹನನಿಗೆ ನನ್ನನ್ನು ಕಂಡರೆ ಪ್ರಾಣ. ಬಂದು ನನ್ನ ತೊಡೆಯ ಮೇಲೆ ಕುಳಿತ. ಆಗ ನನ್ನ ಮನಸ್ಸಿಗೆ ಬರಬಾರದ ಯೋಚನೆಯೊಂದು ಬಂತು.''

''ಕೊಠಡಿಯಲ್ಲಿದ್ದದ್ದು ನಾನು—ಮೋಹನ, ಇಬ್ಬರೇ. ವಿಶ್ವೇಶ್ವರಯ್ಯ ಮನೆಯಲ್ಲಿರಲಿಲ್ಲ. ಹೆಂಗಸರೆಲ್ಲ ಒಳಗಿದ್ದರು. ಮೋಹನನಿಗೆ ಅವರಮ್ಮನ ಮೂರೆಳೆಯ ಬಂಗಾರದ ಸರ ಹಾಕಿ ಅಲಂಕಾರ ಮಾಡಿದ್ದರು. ಸಾಲ ತೀರಿಸಲು ಹಣ ಸಂಪಾದಿಸುವುದು ಹೇಗೆ ಎಂದು ಯೋಚಿಸುತ್ತಿದ್ದ ನನಗೆ, ಆ ಸರವನ್ನು ಕದಿಯುವ ಮನಸ್ಸಾಯಿತು. ಅವಶ್ಯಕತೆ ಬಿದ್ದಾಗ ಏನು ಮಾಡುವುದಕ್ಕಾದರೂ ಸಿದ್ಧರಾಗಿರುತ್ತೇವೆ, ಇದು ಸತ್ಕೃತಿ, ಇದು ಹೇಯ ಕಾರ್ಯ ಎಂಬ ಪರಿಜ್ಞಾನ ಉಳಿದಿರುವುದಿಲ್ಲ. ಸರ ನೋಡಿ ಮೆಚ್ಚುವವನಂತೆ ಕೈಗೆ ತೆಗೆದುಕೊಂಡು ನೋಡುತ್ತ, ಹೊರಡಲು ಹೊತ್ತಾಯಿತೆಂದು ತಾರಾಗೆ ಹೇಳಲು ಅವನನ್ನು ಕಳಿಸಿದೆ. ಅವನು ಬರುತ್ತಲೇ ಅವನಿಗೆ ಉಡುಗೊರೆಯಾಗಿ ತಂದಿದ್ದ ಆಟದ ನಾಯಿಯನ್ನು ಕೊಟ್ಟು ಅವಸರಿಸಿ ನನ್ನ ಹೆಂಡತಿಯನ್ನೂ ಕರೆದುಕೊಂಡು ಬಂದುಬಿಟ್ಟೆ.''

ಈಗ ನರಸಿಂಹಯ್ಯ ಕಣ್ಣು ದೊಡ್ಡದಾಗಿ ಬಿಟ್ಟು, ಉಸಿರನ್ನೂ ಗಟ್ಟಿಯಾಗಿ ಆಡದೆ ಕೇಳುತ್ತಿದ್ದರು. 'ಇದು ನಿಜವಿದ್ದೀತೆ?' ಎನ್ನಿಸಿತ್ತು ಅವರಿಗೆ.

"ಮನೆಗೆ ಬಂದೆವು. ಆದರೆ ನನ್ನ ಮನಸ್ಸು ಸ್ಥಿಮಿತದಲ್ಲಿರಲಿಲ್ಲ. ಊಟ ಮಾಡಿ ಹೊರಗೆ ಅಲೆಯಲು ಹೋದೆ. ಎಂದೂ ಮಾಡದ ಹೀನ ಕಾರ್ಯ ಮಾಡಿ ಮನಸ್ಸು ಆತ್ಮಹತ್ಯೆ ಮಾಡಿಕೊಂಡಿತ್ತು. ಎಲ್ಲಿ ಅಲೆದರೂ ಮನಸ್ಸಿಗೆ ಸಮಾಧಾನ ದೊರೆಯಲಿಲ್ಲ. ಮತ್ತೆ ಮನೆಗೆ ಬಂದೆ. ನನ್ನ ಕೊಠಡಿಯಲ್ಲಿ ತಾರ ಮೇಜಿನ ಮೇಲೆ ಮುಖವಿಟ್ಟು ಅಳುತ್ತಿದ್ದಳು. ಇದೇ ನಾಯಿತು ಎಂದು ಗಾಬರಿಯಿಂದ ಅವಳ ಭುಜದ ಮೇಲೆ ಕೈಯಿಟ್ಟು ಅಲುಗಿಸಿದೆ. ತಲೆಯೆತ್ತಿ ನೋಡಿದಳು. ನೋಡು ನರಸಿಂಹಯ್ಯ, ಆಗಿನ ಅವಳ ಕಣ್ಣು ಇನ್ನೂ ನನ್ನನ್ನು ಕಾಡುತ್ತಿದೆ. ವಿಶಾಲವಾದ ಕಣ್ಣು ಅವಳದು. ಅದರ ತುಂಬ ನೀರು. ಕಣ್ಣಿನಲ್ಲಿ ದೈನ್ಯತೆಯೇ ಬಂದು ನೆಲಸಿದೆಯೋ, ನೋವೇ ನೀರಾಗಿ ಉಕ್ಕುತ್ತಿದೆಯೋ ಎನ್ನಿಸುತ್ತಿತ್ತು."

'ಯಾಕೆ ತಾರ?' ಎಂದೆ. ನನ್ನ ಮನಸ್ಸೂ ಅಳುಕುತ್ತಿತ್ತು, ನಾನು ಮಾಡಿದ ಕೆಲಸ ಇವಳಿಗೂ ತಿಳಿಯಿತೇನೊ ಎಂದು.

ಅವಳು ಮಾತನಾಡದೆ ನನ್ನ ಕೈಗೆ ಕಾಗದ ಒಂದು ಕೊಟ್ಟಳು.

ವೆಂಕಟೇಶಯ್ಯ ಮಾತು ನಿಲ್ಲಿಸಿದ. ನರಸಿಂಹಯ್ಯ ಕೈಯನ್ನು ಗಲ್ಲದ ಮೇಲಿಟ್ಟು ಕೇಳುತ್ತಿದ್ದರು. ಕತೆ ಮುಂದುವರಿಯುವುದೆಂದು ಎರಡು ನಿಮಿಷ ಕಾದರು, ಆ ಮೇಲೆ ಕೇಳಿದರು—'ಏನು ಕಾಗದ?'

"ಅಲ್ಲಿ ನನ್ನ ನೀಲಿ ಕೋಟಿದೆ ನೋಡು ನರಸಿಂಹಯ್ಯ, ಅದರ ಒಳಗಡೆ ಎಡ ಜೇಬಿನಲ್ಲಿ ನನ್ನ ಪರ್ಸಿದೆ. ಅದರಲ್ಲಿ ಒಳಗಡೆ ಗುಂಡಿಯಿರುವ ಒಂದು ಸಣ್ಣ ಭಾಗವಿದೆ. ಅದರಲ್ಲಿ ಒಂದು ಕಾಗದ ಇಟ್ಟಿದ್ದೇನೆ, ತೆಗೆದು ನೋಡು"

ವೆಂಕಟೇಶಯ್ಯನ ನಿರ್ದೇಶದಂತೆ ನರಸಿಂಹಯ್ಯ 'ಪರ್ಸಿ'ನಿಂದ ಕಾಗದ ತೆಗೆದ. ಕಾಗದದ ಬಣ್ಣ ಆಗಲೇ ಮಾಸಿತ್ತು; ಕಾಗದ ಒಂದೇ ಬಣ್ಣದ್ದಾಗಿರಲಿಲ್ಲ, ವಿವಿಧ ಛಾಯೆಗಳು ಅದರಲ್ಲಿ ಕಂಡುಬರುತ್ತಿದ್ದುವು. ಕಾಗದ ಓದಲು ದೀಪ ಹಾಕಿ, ಓದಿದರು ನರಸಿಂಹಯ್ಯ. ಮುತ್ತಿನಂತಹ ಅಕ್ಷರಗಳು.

"ತಂಗಿ ತಾರ,

ನೀನೂ ನನ್ನಂತೆ ಹೆಂಗಸು, ಪರಿಶುದ್ಧ ಮನಸ್ಸಿನವಳು. ನಿನ್ನಲ್ಲಿ ಮುಚ್ಚುಮರೆ ಮಾಡದೆ ಈ ಕಾಗದ ಬರೆಯುತ್ತಿದ್ದೇನೆ. ನೀವು ಹೋದ

ಮೇಲೆ ಮೋಹನನನ್ನು ಆರತಿಗೆ ಕೂಡಿಸಿತು. ಆಗ ಅವನ ಕುತ್ತಿಗೆಯಲ್ಲಿದ್ದ ಬಂಗಾರದ ಸರ ಮಾಯವಾಗಿದ್ದದ್ದು ಗೊತ್ತಾಯಿತು. ಮೊದಲು ಕೇಳಿದಾಗ ಅತ್ತುಬಿಟ್ಟ. ಆ ಮೇಲೆ, ನಿಮ್ಮ ಯಜಮಾನರು ಅದನ್ನು ನೋಡಲು ಕುತ್ತಿಗೆಯಿಂದ ತೆಗೆದರೆಂದೂ, ಮತ್ತೆ ಕೊಡಲಿಲ್ಲವೆಂದೂ ಹೇಳಿದ.

ಎಷ್ಟೇ ಆಗಲಿ ಅವನು ಹುಡುಗ. ಅವನ ಮಾತಿನಲ್ಲಿ ನನಗೆ ನಂಬಿಕೆ ಯಿಲ್ಲ. ಆದರೆ ನಮ್ಮ ಯಜಮಾನರು ಅದನ್ನೇ ನಂಬಿದ್ದಾರೆ. 'ಏನೂ ಅರಿಯದ ಹುಡುಗ, ಸುಳ್ಳು ಹೇಳುತ್ತಾನೆಯೆ?' ಎಂದು ಸಾಧಿಸುತ್ತಾರೆ. ನಿಮ್ಮ ಯಜಮಾನರು ಆ ರೀತಿ ಖಂಡಿತ ಮಾಡಿಲ್ಲವೆಂದು ನನಗೆ ಗೊತ್ತು. ಆದರೆ ನಮ್ಮವರ ಹುಚ್ಚಿಗೇನು ಹೇಳಲಿ?

ಅಂತೂ ಪೋಲೀಸಿಗೆ ಕಂಪ್ಲೈಂಟ್ ಕೊಟ್ಟಿದ್ದಾರೆ. ಏನೇ ಆಗಲಿ ನಿಮ್ಮನ್ನು ಒಂದು ಮಾತು ಕೇಳೋಣ ಎಂದರೆ 'ಒಲ್ಲೆ' ಎಂದು ಛಲ ಹಿಡಿದಿದ್ದಾರೆ. ನಾನು ಎಲ್ಲಿ ನಿಮಗೆ ಸುದ್ದಿ ತಿಳಿಸುವೆನೋ ಎಂದು ನಾನೂ ಹೊರಗೆ ಹೋಗಕೂಡದೆಂದು ಅಪ್ಪಣೆ ಮಾಡಿದ್ದಾರೆ. ಪೋಲೀಸಿನವರು ಆಗಲೆ ಬಂದು ಮನೆಯ ಆಳುಕಾಳುಗಳನ್ನೆಲ್ಲ ಶೋಧಿಸಿದರು. ನಾಳೆ ಬೆಳಗೆ ನಿಮ್ಮ ಮನೆಗೆ ಬಂದಾರು. ವಿಷಯ ತಿಳಿದಿರಲೆಂದು ನಂಜಮ್ಮನಿಗೆ ಅವಳ ಮನೆಗೆ ಹೋಗುತ್ತ ನಿನಗೀ ಕಾಗದ ತಲುಪಿಸಲು ಹೇಳಿದ್ದೇನೆ. ನಮ್ಮವರ ಹುಚ್ಚಾಟಕ್ಕೆ ನೀನಾಗಲಿ ನಿಮ್ಮ ಯಜಮಾನರಾಗಲಿ ಬೇಸರ ಪಡಬಾರದೆಂದು ಕೇಳಿಕೊಳ್ಳುತ್ತೇನೆ.

ನಿನ್ನ ಸೋದರಿ,

ನಳಿನಿ.''

ನರಸಿಂಹಯ್ಯ ಕಾಗದ ಓದಿ ಮತ್ತೆ ಅದನ್ನು ಅದರ ಸ್ಥಾನದಲ್ಲಿಟ್ಟು ಬಂದು ಕುಳಿತುಕೊಂಡು, 'ಆ ಮೇಲೆ' ಎಂದರು.

ವೆಂಕಟೇಶಯ್ಯ ದೀಪ ಹಾಕಿದಾಗ ಮುಚ್ಚಿದ ಕಣ್ಣನ್ನು ಮತ್ತೆ ತೆರೆದ.

"ಕಾಗದ ನೋಡುತ್ತಲೇ ಪರಿಸ್ಥಿತಿ ನನಗೆ ಸ್ಪಷ್ಟವಾಗಿ ಗೊತ್ತಾಯಿತು. ವಿಶ್ವೇಶ್ವರಯ್ಯನ ಕಿವಿಗೂ ನನ್ನ ಸಾಲ–ಸೋಲಗಳ ವಿಷಯ ಬಿದ್ದಿರಬೇಕು. ಮೊದಲೇ ನನ್ನ ಮೇಲೆ ಕೋಪ ಕಾರುತ್ತಿದ್ದ ಅವನು ಇದು ಹತ

ತೀರಿಸಲು ಒಳ್ಳೆಯ ಅವಕಾಶವಾಯಿತೆಂದುಕೊಂಡಿರಬೇಕು. ನಳಿನಿಗೆ ಇನ್ನೂ ನಮ್ಮ ಹಳೆಯ ಸ್ನೇಹ ನೆನಪಿನಿಂದ ಮಾಸಿರಲಿಲ್ಲವೇನೋ!''

"ಕಾಗದ ನೋಡಿ ನಾನು ಸುಮ್ಮನಾದೆ. ತಾರಾಗೆ ಏನೂ ಹೇಳುವ ಸ್ಥಿತಿಯಲ್ಲಿರಲಿಲ್ಲ, ಅವಳೂ ಏನೂ ಕೇಳಲಿಲ್ಲ. ಅವಳ ದುಃಖ ಕಣ್ಣೀರಿನಲ್ಲಿ ಕೋಡಿಹರಿಯಿತು, ನನ್ನ ಬೇಗೆ ಒಳಗೇ ಕುದಿಯಿತು. ಇಬ್ಬರೂ ಊಟದ ಶಾಸ್ತ್ರ ಮಾಡಿದೆವು ಅಷ್ಟೆ. ರಾತ್ರಿ ಇಬ್ಬರಿಗೂ ನಿದ್ದೆಯಿಲ್ಲ. ಅವಳು ಸುಮ್ಮನೆ ಕಣ್ಣೀರು ಹಾಕುತ್ತಿದ್ದಳು, ನನ್ನ ಮನಸ್ಸು ಬೆಂಗಾಡಾಗಿತ್ತು."

"ಬೆಳಗಿನ ಜಾವ ಎಲ್ಲೋ ಸ್ವಲ್ಪ ಕಣ್ಮುಚ್ಚಿದೆನೆಂದು ಕಾಣುತ್ತದೆ. ಪೋಲೀಸಿನವರು ಬಂದಂತೆ, ಸರ ಸಿಕ್ಕಂತೆ, ನನ್ನ ಕೈಗೆ ಕೋಳ ತೊಡಿಸಿದಂತೆ ಕನಸಾಯಿತು. ಎಚ್ಚೆತ್ತೆ, ಮೈಯೆಲ್ಲ ಬೆವರಿತ್ತು. ಗಡಗಡ ನಡುಗುತ್ತಿದ್ದೆ. ಪಕ್ಕದಲ್ಲಿ ತಾರ ಇರಲಿಲ್ಲ.''

"ಮನೆಯನ್ನೆಲ್ಲ ಯಾವುದೋ ರುದ್ರ ಮೌನ ಆವರಿಸಿದ ಹಾಗೆ ತೋರಿತು. ಎದ್ದು ತಣ್ಣೀರಿನಲ್ಲಿ ಮುಖವನ್ನಾದರೂ ತೊಳೆಯೋಣ ಎಂದು ಹೋದರೆ, ಬಚ್ಚಲು ಮನೆಯಲ್ಲಿ ಕಣ್ಣಿಗೆ ಬಿದ್ದದ್ದು, ಮೇಲಿನ ತೊಲೆಯಿಂದ ನೇತಾಡುತ್ತಿದ್ದ ತಾರ."

ನರಸಿಂಹಯ್ಯ ನಡುಗಿದರು. ವೆಂಕಟೇಶಯ್ಯನ ಧ್ವನಿ ಸ್ವಲ್ಪ ಕಂಪಿತವಾಗಿತ್ತು. ಮುಂದೇನಾಯಿತೆಂದು ಕೇಳಲು ಆಗದಂತೆ ನರಸಿಂಹಯ್ಯನ ಕಂಠ ಬಿಗಿದಿತ್ತು.

ವೆಂಕಟೇಶಯ್ಯ ಬನಿಯನಿನೊಳಗೆ ಕೈಹಾಕಿ ತಾಯಿತಿಯೊಂದನ್ನು ದಾರ ಕಡಿದು ತೆಗೆದ.

"ಇದನ್ನು ಬಿಚ್ಚಿ ನೋಡಿ,'' ಎಂದ.

ಬೆಳ್ಳಿಯ ತಗಡಿನಲ್ಲಿ ಮಾಡಿದ್ದ ತಾಯಿತಿ ಅದು. ಅದನ್ನು ತೆಗೆಯುವುದು ಕಷ್ಟವಾಗಲಿಲ್ಲ. ಒಳಗೆ ಕಾಗದದ ಸಣ್ಣ ಚೂರೊಂದಿತ್ತು. ನರಸಿಂಹಯ್ಯ ಬಿಚ್ಚಿ ಓದಿದರು.

"ಪ್ರಿಯರಿಗೆ, ನಿನ್ನೆ ನಳಿನಿಯ ಕಾಗದ ಬಂದ ಮೇಲೆ ಎಂದೂ ಮಾಡದ ಕೆಲಸ ಮಾಡಿದೆ. ನಿಮ್ಮ ಕೋಟಿನ ಜೇಬಿಗೆ ಕೈ ಹಾಕಿದೆ, ಸರ ಸಿಕ್ಕಿತು.

ನನಗೇನಾದರೂ ಚಿಂತೆಯಿಲ್ಲ, ನಿಮಗಾದರೆ—? ಅದರಿಂದ ಉಳಿದಿದ್ದ ಒಂದೇ ದಾರಿ ಅನುಸರಿಸಿದ್ದೇನೆ. ಚಂದ್ರನ ಕೈ ಬಿಡಬೇಡಿ. ನಿಮ್ಮ ಕೈ ಹಿಡಿದ ನನ್ನಿಂದ ಇಷ್ಟಾದರೂ ಸೇವೆ ಮಾಡಲು ಆಯಿತಲ್ಲ ಎಂಬುದೇ ನನ್ನ ಆನಂದ. ನಿಮ್ಮ ಮನಸ್ಸಿನ ಮೂಲೆಯಲ್ಲಿಯಾದರೂ ನನಗೆ ಸ್ಥಳವಿರಲಿ.

ನಿಮ್ಮ ತಾರ.

ವೆಂಕಟೇಶಯ್ಯ ಕತೆ ಮುಂದುವರಿಸಿದ—''ಇನ್ನೊಂದು ಕಾಗದದಲ್ಲಿ ತಾನೇ ಸರವನ್ನು ಒಡವೆಯ ಆಸೆಯಿಂದ ಕದ್ದೆನೆಂದೂ, ಗೊತ್ತಾದರೆ ಅವ ಮಾನವಾಗುವುದೆಂದು ಹೆದರಿ ಆತ್ಮಹತ್ಯೆ ಮಾಡಿಕೊಂಡೆನೆಂದೂ ಬರೆದಿದ್ದಳು''

ಬಹಳ ಹೊತ್ತು ಇಬ್ಬರೂ ಮಾತನಾಡಲಿಲ್ಲ. ಮತ್ತೆ ಕೇಳಿಸಿದುದು ವೆಂಕಟೇಶಯ್ಯನ ಧ್ವನಿಯೇ: "ನಾನು ಚಂದ್ರನಿಗಾಗಿ ಬದುಕಿದೆ. ಈಗಲೂ ನನಗನ್ನಿಸುವುದಿಷ್ಟೆ; ನನ್ನ ಬಾಳಿನಲ್ಲಿ ಬೆರೆತು ಬಂದ 'ನಾರಿ' ಯರು ಇಬ್ಬರು ನಳಿನಿ, ತಾರ. ನಳಿನಿಯನ್ನು ನಾನು ಪ್ರೀತಿಸಿದೆ, ಮದುವೆಯಾಗಲಿಲ್ಲ. ಒಂದು ರೀತಿಯಲ್ಲಿ ನನ್ನ ಬಾಳಿನ ದುಃಖಕ್ಕೆ ಅವಳೇ ಕಾರಣ. ಆದರೆ ಅವಳೇ ಮೊದಲು ಎಚ್ಚರಿಕೆ ಕೊಟ್ಟವಳು. ತಾರಳನ್ನು ಮದುವೆಯಾದೆ, ಆಗ ಪ್ರೀತಿಸಲಿಲ್ಲ. ಅವಳು ನನ್ನ ಪಾಲಿನ ಭಾಗ್ಯದೇವತೆಯಾದಳು, ನನ್ನ ಮಾನವನ್ನು ಕಾಪಾಡಿದ ಪವಿತ್ರ ದೇವತೆಯಾದಳು. ಇವರಿಬ್ಬರ ಪ್ರೇಮವನ್ನು ಪಡೆಯಲು ನನಗಿದ್ದ ಯೋಗ್ಯತೆಯೇನು?"

ಬಹಳ ಹೊತ್ತು ಮತ್ತೆ ಮೌನ ನೆಲಸಿತು. ಕೊನೆಗೆ ನರಸಿಂಹಯ್ಯ, "ನಾನಿನ್ನು ಹೊರಡುತ್ತೇನೆ ವೆಂಕಟೇಶಯ್ಯ. ಏನೇನೋ ಯೋಚಿಸಿ, ತಲೆ ಕೆಡಿಸಿಕೊಳ್ಳಬೇಡ. ಬೆಳಗ್ಗೆ ಮತ್ತೆ ಬರುತ್ತೇನೆ," ಎನ್ನುತ್ತ ಎದ್ದರು.

"ಆ ಕಿಟಕಿಯ ಬಾಗಿಲು ಸ್ವಲ್ಪ ತೆಗೆಯುತ್ತೀಯ, ಗಾಳಿ ಬರಲಿ.''

ಗಾಳಿಯೊಡನೆ ಗಾನವೂ ಬಂತು—

ಅನ್ಯರಲಿ ಜನಿಸಿದ ಅಂಗನೆಯು ಕರತಂದು
ತನ್ನ ಮನೆಗವಳ ಯಜಮಾನಿ ಎನಿಸಿ
ಭಿನ್ನವಿಲ್ಲವೆ ಅರ್ಧದೇಹವೆನ್ನುವ ಸತಿಯು
ಕಣ್ಣಿನಲಿ ನೋಡಲಮ್ಮಳು ಕಾಲವಳಿಯೆ

"ಪುರಂದರದಾಸರ ಪುಣ್ಯದಿನ," ಎನ್ನುತ್ತ ನರಸಿಂಹಯ್ಯ ವೆಂಕಟೇಶಯ್ಯನ ಕಡೆ ನೋಡಿದರು. ವೆಂಕಟೇಶಯ್ಯ ಕಣ್ಮುಚ್ಚಿ ಮಲಗಿದ್ದ, ತುಟಿಯ ಮೇಲೆ ಮುಗುಳ್ನಗೆಯೊಂದು ವಿಚಿತ್ರ ಸೌಂದರ್ಯದಿಂದ ಬೆಳಗುತ್ತಿತ್ತು. 'ಬರುತ್ತೇನೆ,' ಎಂದು ಹೇಳಿ ಬಾಗಿಲೆಳೆದು ಹೊರಟರು ನರಸಿಂಹಯ್ಯ. ಅಂದು ರಾತ್ರಿಯಲ್ಲಿ ಅವರ ತಲೆಯಲ್ಲಿ 'ಆರು ಹಿತವರು ನಿನಗೆ?' ಎಂಬ ಸಾಲಿನೊಡನೆ 'ನಳಿನಿ' 'ತಾರ' ಎಂಬ ಹೆಸರುಗಳು ಕುಣಿಯುತ್ತಿದ್ದುವು.

ಮರುದಿನ ಬೆಳಗ್ಗೆ ವೆಂಕಟೇಶಯ್ಯನ ಮನೆಗೆ ಅವರು ಹೋದಾಗ ಈ ಲೋಕವನ್ನು ತ್ಯಜಿಸಿ ಹೋದ ಆತ್ಮ ತುಟಿಯ ಮೇಲಿನ ನಗುವನ್ನು ಮಾತ್ರ ಹಿಂದೆಯೇ ಬಿಟ್ಟಿತ್ತು. ಹೊರಗಡೆ ಪುರಂದರದಾಸರ ಪುಣ್ಯದಿನದ ಆಚರಣೆ ಮುಗಿದು ಧ್ವನಿ ವರ್ಧಕಯಂತ್ರ ತೆಗೆದಿಡುತ್ತಿದ್ದರು, ಚಪ್ಪರ ಬಿಚ್ಚುತ್ತಿದ್ದರು.

ಆ ನನ್ನ ಚಾಪೆ

''ಚಾಪೆ.......ಚಾಪೇ........ಚಾಪೇೀ''

ಮಧ್ಯಾಹ್ನದ ನಿಶ್ಶಬ್ದತೆಯಲ್ಲಿ ಚಾಪೆ ಮಾರುವವನ ಕೂಗು ಕಿವಿಯನ್ನು ಒಡೆಯುವಂತಿತ್ತು. ಮನೆಯಲ್ಲಿ ಮತ್ತಾರೂ ಇರಲಿಲ್ಲ. ಅಂದು ಯಾರ ಮನೆಗೋ ಊಟಕ್ಕೆ ಹೋಗಿದ್ದವರು ಅಪ್ಪ, ಅಮ್ಮ, ಎಲ್ಲರಿಗಿಂತ ಮೊದಲು ಹಿಂತಿರುಗಿ ಬಂದೆ. ಪುಸ್ತಕಾಲಯದಿಂದ ತಂದಿದ್ದ ಕಾದಂಬರಿ ನನ್ನ ಮನಸ್ಸನ್ನು ಸಂಪೂರ್ಣವಾಗಿ ಅಪಹರಿಸಿತ್ತು. ಅದಕ್ಕಾಗಿ ಎಲ್ಲರಿಗಿಂತ ಮೊದಲು ಮನೆಗೆ ಬಂದು ಓದುತ್ತ ಕುಳಿತೆ.

"ಚಾಪೆ........ಚಾಪೇ........ಚಾಪೇೀ"

ಮತ್ತೆ ಆ ಕೂಗು ಕಿವಿಯನ್ನು ಮುಟ್ಟಿತು. ಅಮ್ಮ ಹೊಸ ಚಾಪೆ ಬೇಕೆಂದು ಹಾತೊರೆಯುತ್ತಿದ್ದುದು ನೆನಪಿಗೆ ಬಂದು, ಪುಸ್ತಕವನ್ನು ಮೇಜಿನ ಮೇಲಿಟ್ಟು ಹೊರಗೆ ಬಂದೆ.

''ಏ ಚಾಪೇ ತೊಗೊಂಡು ಬಾಪ್ಪ."

ಚಾಪೆಯವನು ಬಂದ. ಸರಿ. ಎಲ್ಲ ಚಾಪೆಗಳನ್ನೂ ತೆಗೆಸಿ ನೋಡಿದೆ. ಕೊನೆಗೊಂದು ವ್ಯಾಪಾರ ಮಾಡಿದ್ದೂ ಆಯಿತು. ದುಡ್ಡು ಕೊಡಲು ಹೋದಾಗ, ಎಲ್ಲ ಚಾಪೆಗಳಿಗಿಂತ ಕೆಳಗೆ ಇದ್ದ ಚಾಪೆಯೊಂದು ಕಣ್ಣಿಗೆ ಬಿತ್ತು.

''ಎಲ್ಲಯ್ಯ ಆ ಚಾಪೆ ತೆಗಿ"

''ಯಾವ್ದು ದೇವ್ರು?''

''ಆ ಕೆಳಾಗೆ, ನೀಲಿ ಹಸುರು ಬಣ್ಣ ಕಾಣ್ಸತ್ತಿದೆಯಲ್ಲಾ ಅದು''

''ಅದು ತುಂಬಾ ಭಾರೀದು ನನ್ನೊಡ್ಯ"

''ಇರ್ಲಿ ತೆಗೆಯ್ಯ ನೋಡೋಣ"

"ನೋಡಿ ದೇವ್ರೇ ನೋಡಿ" ಎನ್ನುತ್ತಾ ಚಾಪೆಯವನು ಆ ಚಾಪೆಯನ್ನು ತೆಗೆದ; ಎಚ್ಚರಿಕೆಯಿಂದ ಅದನ್ನು ಬಿಚ್ಚಿ. ಎತ್ತಿ ಹಿಡಿದು ತೋರಿಸಿದ.

"ಹಾಸಯ್ಯ ನೆಲದ್ಮೇಲೆ"

"ಅಯ್ಯೋ ಧೂಳಾಗ್ತೈತೆ ಬುದ್ಧಿ"

ಹಾಗೆಯೇ ದೃಷ್ಟಿಸಿ ನೋಡಿದೆ ಚಾಪೆಯನ್ನು. ನಿಜವಾಗಿಯೂ ಅವನೆಂದಂತೆ 'ಭಾರಿ' ಯದೇ ಅದು ಎನ್ನಿಸಿತು. ಚಾಪೆ ಚಿತ್ರಮಯವಾಗಿತ್ತು. ಯಾರ ಕೈವಾಡವೋ ದೇವರೇ ಬಲ್ಲ, ಆ ಚಾಪೆಯಲ್ಲಿ ಎಣೆಯಿಲ್ಲದ ಸೌಂದರ್ಯ ನೆಲಸಿತ್ತು. ಚಾಪೆ ವಸಂತರಾಜನ ಆಗಮನವನ್ನು ಚಿತ್ರಿಸುವಂತಿತ್ತು. ಅಚ್ಚ ಹಸುರಿನ ಎಲೆ, ಎಳೆಗೆಂಪಿನ ಹೂಗಳಿಂದ ತುಂಬಿ ನಲಿಯುತ್ತಿರುವ ವೃಕ್ಷ ಸಮೂಹ ಹಿನ್ನೆಲೆಯಲ್ಲಿ. ಆ ಮರಗಳ ಮಧ್ಯೆ ಪುಟ್ಟ ಪುಟ್ಟ ನಾನಾ ಬಣ್ಣಗಳ ಪಕ್ಷಿಗಳು. ಬಲತುದಿಯಲ್ಲಿ ಪಾರಿವಾಳದ ಗುಂಪು. ಎಡೆಗಡೆ ಹಾರಿ ಹೋಗುತ್ತಿರುವ ಗಿಣಿಗಳ ಗುಂಪು. ಮಧ್ಯೆ ಹೆಮ್ಮೆಯಿಂದ ತಲೆಯೆತ್ತಿ, ತನ್ನ ಸೌಂದರ್ಯಕ್ಕೆದುರಿಲ್ಲವೆಂದು ಜಗತ್ತಿಗೆಲ್ಲ ಸಾರುವಂತೆ ರೆಕ್ಕೆ ತೆರೆದು ನಿಂತಿರುವ ಸುಂದರ ಮಯೂರ. ಜಗತ್ತಿನ ಸೌಂದರ್ಯವನ್ನೆಲ್ಲ ಆ ಒಂದು ಚಾಪೆಯಲ್ಲಿ ಸೆರೆಹಿಡಿದು ನಿಲ್ಲಿಸಬೇಕೆಂದು ಹೆಣೆದವನು ಬಯಸಿದಂತಿತ್ತು. ಅದನ್ನು ನೋಡುತ್ತಲೇ ಅದನ್ನು ಕೊಳ್ಳಲೇಬೇಕೆಂಬ ಆಸೆ ಬಲವಾಯಿತು.

"ಎಷ್ಟಯ್ಯ ಅದಕ್ಕೆ?"

"ಏನು ಕೊಟ್ಟೀರಿ ಬುದ್ಧಿ?"

"ಮಾರೋನು ನೀನ್ಹೇಳ್ಬೇಕು ಬೆಲೆ."

"ಎಂಟ್ರುಪಾಯಿ ಕೊಡಿ ಬುದ್ಧಿ"

"ಒಳ್ಳೆಮಾತಯ್ಯ ಒಂದು ಚಾಪೆಗೆ ಎಂಟ್ರುಪಾಯೀ?"

"ನೀವೇ ಕೇಳಿ ಬುದ್ಧಿ"

"ಐದ್ರುಪಾಯ್ಗೆ ಕೊಡ್ತೀಯೋ?"

"ಬಿಡಿ ಬುದ್ಧಿ ಆ ಮಾತ್ನ" ಎನ್ನುತ್ತಾ ಚಾಪೆಯವನು ಚಾಪೆಯನ್ನು ಸುತ್ತಿದ. 'ಅಯ್ಯೊ' ಎನ್ನಿಸಿತು.

"ಹೋಗ್ಲಿ ಇನ್ನೆಂಟಾಣೆ ತೊಗೋ" ಎಂದೆ.

"ಏಳೂವರೆ ಕೊಡ್ತೀರಾ ಬುದ್ಧಿ?"

ಚೌಕಾಸಿ ಮಾಡಿ ಅಂತೂ ಏಳು ರೂಪಾಯಿಗೆ ಕೊಂಡುಕೊಂಡೆ ಅದನ್ನ. ಅವನಿಗೆ ದುಡ್ಡು ಕೊಟ್ಟು ಕಳುಹಿಸಿ ಚಾಪೆಯನ್ನು ತೆಗೆದುಕೊಂಡು ನನ್ನ ಕೊಟಡಿಗೆ ಹೋದೆ.

ಇನ್ನೂ ಒಳಗೆ ಹೋಗಿದ್ದೆನೋ ಇಲ್ಲವೋ, ಅಷ್ಟರಲ್ಲಿ ಹೊರಗಡೆ ಸೈಕಲ್ ಬೆಲ್ಲಿನ ಶಬ್ದವಾಯಿತು. ಜೊತೆಗೆ ರಾಮು, ರಾಮು ಎಂಬ ಕರೆ ಬೇರೆ.

ಚಾಪೆಯನ್ನು ಕೊಟಡಿಯಲ್ಲೇ ಇಟ್ಟು ಹೊರಗೆ ಬಂದು ನೋಡಿದೆ. ಶಂಕರ, ಮೂರ್ತಿ, ರಾಜು ಮೂರು ಜನವೂ ನಿಂತಿದ್ದರು. ಎಲ್ಲರನ್ನೂ ಕೊಟಡಿಗೆ ಕರೆದುಕೊಂಡು ಹೋದೆ.

"ಏನೋ ರಜಾ ದಿವ್ಸವೂ ಬಹಳ ಓದ್ತಾ ಇದ್ದಿ?" ಮೂರ್ತಿ ಎಂದ.

"ಹೂನಪ್ಪ, ರ್‍ಯಾಂಕ್ ತಗೊಳ್ಳೋರ ಲಕ್ಷಣ ಅದು" ರಾಜುವಿನ ಉತ್ತರ.

"ನಮ್ಹಾಗೆ ಅಲ್ಕೊಂಡಿದ್ರಾಗತ್ಯೇ ಎಲ್ಲಾರೂನು? ಶಂಕರನ ಕೊಂಕು ನುಡಿ.

"ಅಯ್ಯೋ, ಇಲ್ಲ ಕಣ್ರೋ, ಕಥೇ ಪುಸ್ತಕ"

ಸರಿ, ಹರಟೆಗೆ ಆರಂಭ. ಮಧ್ಯೆ ಶಂಕರನ ಕಣ್ಣಿಗೆ ಬಿತ್ತು ಆ ಚಾಪೆ.

"ಏನು ಹೊಸಾ ವ್ಯಾಪಾರ ಇದು?"

ಚಾಪೆ ತೆಗೆದು ತೋರಿಸಿದೆ. ಅವರು ಮೂವರೂ ಮುಗ್ಧರಾದರೆಂಬುದು ಅವರ ಕಣ್ಣೇ ಸೂಚಿಸುತ್ತಿತ್ತು. ಅದರ ಸೌಂದರ್ಯವನ್ನೆಲ್ಲ ಕುಡಿಯುವವರ ಹಾಗೆ ದೃಷ್ಟಿಸಿ ನೋಡುತ್ತಿದ್ದರು.

ಚಾಪೆ ಒಂದು ಕಡೆ ಇಟ್ಟು ಪುನಃ ಹರಟೆ ಆರಂಭಿಸಿದೆವು. ನಾವಿನ್ನೂ ಮಾತಿನ ಪ್ರಪಂಚದಲ್ಲಿದ್ದಾಗಲೇ ಅಮ್ಮ ಹುಡುಗರು ಎಲ್ಲ ಬಂದರು. ಸ್ವಲ್ಪ ಹೊತ್ತಾದ ಮೇಲೆ ನನ್ನ ಸ್ನೇಹಿತರು ಹೊರಟರು. ಅವರ ಜೊತೆಗೇ ಮಾತನಾಡುತ್ತ ನಾನೂ ಸ್ವಲ್ಪ ದೂರ ಹೋದೆ.

ಹಿಂತಿರುಗಿ ಬಂದು ನೋಡುತ್ತಲೇ ನನ್ನ ಎದೆ 'ಧಗ್' ಎಂದಿತು. ಕಿಟ್ಟು, ರಾಘು, ಸೀತು ಎಲ್ಲ ಚಾಪೆಯ ಸುತ್ತ ನಿಂತಿದ್ದರು. ಮಧ್ಯೆ ಅಮ್ಮ; ಅವಳ ಪಕ್ಕದಲ್ಲಿ ಮಂಜುಳ. ಥಟ್ಟನೆ ಕೊಟಡಿಯೊಳಗೆ ನುಗ್ಗಿದೆ.

"ಲೋ ಕಿಟ್ಟೀ, ಲೇ ಸೀತು, ನಿಮ್ಗೆಲ್ಲ ಏನು ಕೆಲ್ಸ ಇಲ್ಲಿ? ನಡೀರಿ ಆಚೆ" ಅಬ್ಬರಿಸಿದೆ ನಾನು.

"ಇದ್ಯಾಕೋ ರಾಮು ಹಿಂಗಾಡ್ತಿ? ಆ ಹುಡುಗ್ರು ಒಳ್ಗೆ ಬಂದದ್ದೇ ತಪ್ಪೇ?" ಅಮ್ಮನ ಉತ್ತರ.

"ಹೌದು. ತಪ್ಪೇ. ಆ ಚಾಪೇ ಮೇಲೆ ಇವ್ರೆಲ್ಲ ಕುಣಿದಾಡಿ ಹಾಳ್ಮಾಡ್ಬಿಟ್ರೆ ನಾನೇನ್ಮಾಡ್ಬೇಕು ಆ ಮೇಲೆ?"

"ಹೌದಪ್ಪ, ಹೌದು, ಈಗ ಅದನ್ನ ನಾವೆಲ್ಲ ತುಳಿದು ಚೂರ್ಮಾಡ್ಬಿಟ್ವಿ, ಅಲ್ವ?"

ನನ್ನ ಕೋಪ ಸ್ವಲ್ಪ ಇಳಿದಿತ್ತು. ಸುಮ್ಮನಿದ್ದೆ.

"ಎಷ್ಟಕ್ಕೆ ತಗೊಂಡ್ಯೊ ಇದನ್ನ? ತುಂಬಾ ಚೆನ್ನಾಗಿದೆ" ಅಂದಳು ಅಮ್ಮ.

"ಏಳ್ರೂಪಾಯ್ಗೆ ತೊಗೊಂಡೆ."

"ಪರ್ವಾ ಇಲ್ಲ, ಆರತಿ ಅಕ್ಷತೆ ಆದ್ರೆ ಹಾಸೋದಕ್ಕೆ ಒಳ್ಳೆ ಚಾಪೆ ಆಯ್ತು" ಎಂದಳು ಅಮ್ಮ.

ರೇಗಿತು ನನಗೆ. ಕೋಪ ತಡೆಯುತ್ತಾ ಹೇಳಿದೆ, "ಇಲ್ನೋಡಮ್ಮಾ, ಇವಳ್ದಿ ಇನ್ನೂ ಒಂದು ಚಾಪೆ ಕೊಂಡ್ಕೊಂಡಿದ್ದೀನಿ. ನೀವು ಅದನ್ನ ಉಪಯೋಗಿಸ್ಕೊಳ್ಳಿ. ಇದು ನನ್ನ ಚಾಪೆ. ಯಾರ್ಗೂ ಕೊಡೊಲ್ಲ ಇದನ್ನ ನಾನು."

ಅಮ್ಮ ನನ್ನ ಕಡೆ ನೋಡಿದ್ಲು. ಸಿಟ್ಟು ಬಂದಿದೇ ಅಂತ ಗೊತ್ತಾಗಿರಬೇಕು ಅವಳಿಗೆ, ಸುಮ್ಮನಿದ್ದಳು. ಎರಡು ನಿಮಿಷ ಇನ್ನೊಂದು ಚಾಪೆಯನ್ನು ನೋಡಿದ ಶಾಸ್ತ್ರ ಮಾಡಿ, ಮಂಜುಳೆಯನ್ನೂ ಹುಡುಗರನ್ನೂ ಕರೆದುಕೊಂಡು ಹೊರಟು ಹೋದಳು.

ಅಂದೇ ಒಂದು ಕೋಟ್ ಹ್ಯಾಂಗರ್ ತಂದು ಅದನ್ನು ಎತ್ತರದಲ್ಲಿ ಹಾಕಿ, ಅದರ ಮೇಲೆ ಚಾಪೆಯನ್ನಿಟ್ಟೆ. "ಇದೇನೋ ರಾಮು? ಅದನ್ಯಾಕೋ ಅಲ್ಹಾಕ್ತಿ?" ಎಂದಳು ಅಮ್ಮ, ಕೋಟ್ ಹ್ಯಾಂಗರ್ ಹಾಕುವಾಗ. ನಾನೆಂದೆ, "ಇದರ್ಮೇಲೆ ನನ್ಚಾಪೆ ಇಡ್ತೇನೆ, ಇಲ್ದೇ ಇದ್ರೆ ಎಲ್ಲಾರೂ ಅದನ್ನ ಹಾಳ್ಮಾಡ್ಬಿಡ್ತಾರೆ."

ಅಮ್ಮ ಮುಗಳ್ನಗೆ ನಕ್ಕು ಸುಮ್ಮನಾದಳು.

೨

"ಕಾಫಿ ಆರ್ಹೋದೀತು ತೊಗೊಂಡುಬಿಡು, ರಾಮು."

ನನ್ನ ಕೊಟಡಿಗೆ ಅಮ್ಮ ಕಾಫಿ ತಂದಾಗಲೇ ನನಗೆ ಗೊತ್ತು ಇದು ಯಾವುದಕ್ಕೋ ಪೀಠಿಕೆ ಅಂತ. ಈ ಉಪಚಾರವಾದ ಮೇಲಂತೂ ಅದು ನಿರ್ಧಾರವಾಯಿತು.

"ಹೂಂ, ತೊಗೋತೀನಿ."

ಅಮ್ಮ ಇನ್ನೂ ಹೊಸ್ತಿಲ ಮೇಲೇ ನಿಂತಿದ್ದಳು. ನಾನು ಕಾಫಿ ಬಟ್ಟಲು ತೆಗೆದುಕೊಂಡೆ.

"ರಾಮೂ"

"ಏನಮ್ಮಾ?"

"ಇವತ್ತು ಐದೂವರೆ–ಆರಕ್ಕೆ ಸೀತೂಗೆ ಆರ್ತಿ ಮಾಡಬೇಕು."

"ಮಾಡು, ಅದಕ್ಕೇನು? ನಾನೇನೋ ಐದಕ್ಕೇ ಮನೆ ಬಿಟ್ಬಿಡ್ತೇನೆ, ನನ್ನಿಂದ ನಿಮಗೇನೂ ತೊಂದ್ರೆ ಆಗೂಲ್ಲ."

"ಸರಿ, ಅದಕ್ಹೇಳಿದ್ನೇ ನಾನು?"

"ಮತ್ತೆ?"

"ಆ ಚಾಪೆ ಸ್ವಲ್ಪ ಬೇಕು."

"ಯಾವ್ಚಾಪೆ?" ಅರ್ಥವಾಗದಿದ್ದವನ ಹಾಗೆ ಕೇಳಿದೆ.

“ಅದೇ ನಿನ್ಹಾಪೆ. ಅಲ್ಲಿ ಮೇಲೆ ತಗ್ಲಾಕಿದ್ದೀಯಲ್ಲ, ಅದು.”

ನಾನು ಸುಮ್ಮನಿದ್ದೆ.

“ಯಾಕೆ ರಾಯ್ರು ಮಾತೇ ಆಡೋಲ್ಲ?”

“ನಾನು ಮಾತಾಡಿದ್ರೆ ನಿಂಗೆ ಸಿಟ್ಬರುತ್ತೆ, ಅದಕ್ಕೆ.”

“ಸಿಟ್ಯಾಕೆ? ಕೊಡ್ತೀಯೋ ಇಲ್ವೋ ಹೇಳಿಬಿಡು.”

“ನೋಡಮ್ಮಾ, ಅದು ಸೊಗಸಾದ ಚಾಪೆ. ಅಂಥಾ ಚಾಪೆ ತಿರ್ಗಿ ಸಿಗೋದು ಕಷ್ಟ. ಈ ಹೆಂಗಸ್ರು ಮಕ್ಕಳ ಓಡಾಟದಲ್ಲಿ ಅದೇನಾದ್ರೂ ಆಯ್ತೋ ಮುಗೀತು ನನ್ಚಾಪೆ ಅವತಾರ.”

“ಓಹೋ ಹೋ, ಏನ್ಮಾಡ್ಬಿಟ್ತೀವಪ್ಪ ನಾವದನ್ನ? ನುಂಗ್ಬಿಟ್ತೀವೇನು?”

“ಅಲ್ಲಮ್ಮ, ಅದಕ್ಕೆ ಅರಿಶಿನ, ಕುಂಕುಮ, ಎಣ್ಣೆ, ನೀರು ಎಲ್ಲದರ ಅರ್ಪಣೆ ಆಗ್ಹೋದ್ಮೇಲೆ ಅದರ ಬಣ್ಣ ಕೆಡೋಲ್ಲೇನಮ್ಮ? ಆಮೇಲದನ್ನಿಟ್ಕೊಂಡು ನಾನೇನ್ಮಾಡೋದು?”

“ಹೌದಪ್ಪಾ ಹೌದು, ಅಂತೂ ತಂಗೀ ಮೇಲಿನ ಮಮತೆಗಿಂತ ಚಾಪೆ ಮೇಲಿನ ಅಭಿಮಾನಾನೇ ಹೆಚ್ಚೂ ಅನ್ನು.”

ನನಗೂ ಸಿಟ್ಟು ಏರಿತು, “ಹಾಗೇ ಅದ್ಕೊ, ನೀನ್ಹಾಗಂದ್ಕೊಂಡ್ರೆ ನಾನ್ಹೇಂಗೆ ತಡೆ ಹಾಕ್ಲಿ?”

“ನಾನಂದ್ಕೊಳ್ಳೋದೇನು, ನೀನ್ಮಾಡೋದೇ ಹಾಗೆ.”

“ಹೌದು, ನಾನು ಹಾಗೇ ಮಾಡೋದು.” ನಾನೂ ಒರಟಾಗಿಯೇ ಉತ್ತರ ಕೊಟ್ಟೆ.

“ಹೌದು. ನಾನ್ಕೇಳಿದ್ರೆ ಯಾಕೆ ಕೊಡ್ತೀ? ಅದೇ ಮಂಜುಳಾ ಕೇಳಿದ್ರೆ ಕೊಡ್ತಾ ಇದ್ದಿ” ಎಂದವಳೇ ಅಮ್ಮ ಸರ್ರನೆ ಒಳಗೆ ಹೊರಟುಹೋದಳು

ಮಂಜುಳಾನ ತಂದೆ ನನ್ನ ದೂರದ ಬಳಗ; ಅವಳು ವಿದ್ಯಾವಂತಳೂ ಹೌದು, ನೋಡುವುದಕ್ಕೆ ಬಲು ಚೆಲುವೆ. ಮೊದಲಿಂದ ನಾವ್ರು ಗಂಡಹೆಂಡಿರೆಂದು ಎಲ್ಲರೂ ಹಾಸ್ಯ ಮಾಡುತ್ತಿದ್ದರು. ಅವಳ ತಂದೆಗೆ ನಮ್ಮ ಊರಿಗೇ

ವರ್ಗವಾಗಿ ನಮ್ಮ ಮನೆಯ ಹತ್ತಿರವೇ ಅವರು ಬಂದ ಮೇಲೆ ಆ ಕನಸು ನನಸಾಗುವಂತೆ ಕಂಡಿತು. ಮೊದಲಿನಿಂದ ಒಟ್ಟಿಗೆ ಆಡಿದವರಾದುದರಿಂದ ನಮಗೆ ಬಹು ಸಲಿಗೆ. ಈಗ ತಾನೇ ಅವಳು ಯೌವನದಲ್ಲಿ ಕಾಲಿಡುತ್ತಿದ್ದರೂ ಮೊದಲಿನ ಸಲಿಗೆ ಪೂರ್ಣವಾಗಿ ಅಳಿಸಿರಲಿಲ್ಲ. ಒಂದು ರೀತಿಯಲ್ಲಿ ನಾವು ಗಂಡಹೆಂಡಿರಾಗುವೆವೆಂಬ ಅರಿವೇ ನಮ್ಮ ಸಲಿಗೆಯನ್ನು ಸ್ವಲ್ಪ ಹೆಚ್ಚಿಸಿತ್ತು. ಮೊದಲಿನಷ್ಟು ನಾವು ಹರಟುತ್ತಿಲ್ಲವೆಂಬುದು ನಿಜವಾದರೂ ಒಂದು ಆತ್ಮೀಯ ಭಾವ ಬೆಳೆದು ಬಂದಿತ್ತು. ಆದುದರಿಂದಲೇ ನಮ್ಮ ತಾಯಿ ಆ ಮಾತನ್ನಾಡಿದ್ದು.

೩

"ರಾಮೂ....ರಾಮೂ"

ಎದ್ದು ಬಾಗಿಲು ತೆಗೆದೆ. ಶಂಕರನ ತಂದೆ ಸೂರಪ್ಪನವರು.

"ಬನ್ನಿ, ಸೂರಪ್ಪನವರೇ, ಕೂತುಕೊಳ್ಳಿ."

ಕುರ್ಚಿಯನ್ನು ಎತ್ತಿ ಅವರ ಬಳಿ ಇಟ್ಟೆ. "ಚಿಂತೆಯಿಲ್ಲ, ಚಿಂತೆಯಿಲ್ಲ" ಎನ್ನುತ್ತಾ ಆಸನಾಸೀನರಾದರು ಅವರು.

"ಏನು ಸೂರಪ್ನೋರೆ, ಆರೋಗ್ಯವೇ?"

"ಏನೋ ಇಷ್ಟರಮಟ್ಟಿಗಪ್ಪ, ನಿಮ್ಮ ಕೃಪೆಯಿಂದ."

"ಛೇ, ಛೇ, ಅಷ್ಟು ದೊಡ್ಡ ಮಾತು ಯಾಕೆ, ಸೂರಪ್ಪನೋರೆ? ಎಷ್ಟೇ ಆಗ್ಲಿ ನೀವು ನನಗಿಂತ ಹಿರಿಯರಲ್ವೇ? ತಮ್ಮಂಥಾವರ ಆಶೀರ್ವಾದ ಬಲ ನಮಗಿರಬೇಕು."

"ಏನೋಪ್ಪ ಎಲ್ಲ ನಿಮ್ಮ ವಿಶ್ವಾಸ. ಈಗಿನ ಕಾಲದ ಹುಡುಗ್ರು ಅಷ್ಟು ವಿಶ್ವಾಸವಾಗಿ ಹಿರಿಯರಲ್ಲಿ ಮರ್ಯಾದೆಯಿಟ್ಕೊಂಡಿರೋದೇ ಅಪರೂಪ. ಏನೋ ನಿನ್ನ ದೊಡ್ಡ ಗುಣ ಅಷ್ಟೆ."

"ಅಯ್ಯೋ, ಅದೇನ್ಮಹಾ ಬಿಡಿ, ಸೂರಪ್ನೋರೆ. ಇನ್ನೇನ್ಸಮಾಚಾರ?"

"ಏನೂ ಕಾಣ್ನಪ್ಪ....ಹುಂ, ಹೊರಡೋಣ, ಇನ್ನು."

"ಏನ್ಸೂರಪ್ನೋರೆ ಅಷ್ಟು ಅವಸರ? ಕೂತ್ಕೊಳ್ಳಿ."

"ಅಯ್ಯೋ. ಇಲ್ಲಪ್ಪ, ಪುರುಸತ್ತೇ ಇಲ್ಲ. ನಮ್ಮ ಸರೂನ ನೋಡೋಕೆ ಯಾರೋ ಬರ್ತಾರೆ ಇವತ್ತು ಮಧ್ಯಾಹ್ನ."

"ಓಹೋ, ಯಾವ ಊರಿನೋರೋ?"

"ಚಿತ್ರದುರ್ಗದೋರಪ್ಪ. ಹುಡುಗ ವಿದ್ಯಾವಂತ, ವಯಸ್ಸೂ ಸರಿಯಾಗಿದೆ. ಏನೋ ಇದಾದರೂ ಕೂಡಿ ಬಂದರೆ ನನ್ನ ಪುಣ್ಯ. ನಾನು ಕಣ್ಣು ಮುಚ್ಚೋದರಲ್ಲಿ ಅವಳಿಗೆ ಮದುವೆಯಾಗುತ್ತೋ ಇಲ್ಲವೋ!"

"ಅಯ್ಯೋ ಹಾಗ್ಯಾಕಮ್ಕೋತೀರಿ, ಸೂರಪ್ನೋರೆ? ಏನೋ ಒಂದು ಒಳ್ಳೆ ಕಡೆ ವರ ಸಿಕ್ಕರೆ ನಿಮ್ಮ ತಲೆ ಮೇಲಿನ ದೊಡ್ಡದೊಂದು ಭಾರ ಇಳಿಸಿದ ಹಾಗೆ."

"ಹೌದಪ್ಪ. ಏನ್ಮಾಡೋದು........ಅಂದಹಾಗೆ, ರಾಮು, ನಿನ್ನಿಂದ ಒಂದುಪಕಾರ ಆಗ್ಬೇಕಲ್ಲಪ್ಪ."

"ನನ್ನಿಂದ ಏನಾದೀತು ಬಿಡಿ, ಮಹಾ."

"ಹಾಗಲ್ಲಪ್ಪ ಸಮಯದಲ್ಲಿ ಸಾಸಿವೆಯಷ್ಟು ಸಹಾಯ ಮಾಡಿದ್ರೆ ಬೆಟ್ಟದಷ್ಟು ಮಾಡಿದ ಪುಣ್ಯ."

"ಏನ್ಹೇಳಿ, ನನ್ಕೈಲಾದ್ರೆ ಸಂತೋಷದಿಂದ ಮಾಡ್ತೀನಿ."

"ನಮ್ಮಂಕರೂ ಹೇಳ್ದ, ನೀನೊಂದು ಭೇಷಾದ ಚಾಪೆ ಕೊಂಡ್ಕೊಂಡಿದ್ದೀಯಂತೆ....ಮಧ್ಯಾಹ್ನ ಅವರೆಲ್ಲ ಬಂದಾಗ ಕೂಡಿಸೋದಕ್ಕೆ ಕೊಟ್ಟಿದ್ರೆ.... ಆಗಿತ್ತು."

ಒಂದು ನಿಮಿಷ ನನಗೆ ದಿಗ್ಭ್ರಮೆಯಾಯಿತು. ಆ ಮೇಲೆ ಚೇತರಿಸಿಕೊಂಡು, "ಇಗೋ, ತರುತ್ತೇನೆ" ಎಂದು ಒಳಕ್ಕೆ ಹೋಗಿ ನಾನು ಕೊಂಡುಕೊಂಡಿದ್ದ ಸಾಧಾರಣ ಚಾಪೆಯನ್ನು ತಂದೆ. ಸೂರಪ್ಪನವರು ಸ್ವಲ್ಪ ಹೊತ್ತು ಸುಮ್ಮನಿದ್ದು, "ಇದಲ್ಲಪ್ಪ, ನಮ್ಮ ಶಂಕ್ರು ಹೇಳಿದ್ದು ಆ ಚಾಪೇಲಿ ನವಿಲು, ಗಿಣಿ ಎಲ್ಲ ಚಿತ್ರಗಳಿವೆ ಅಂತ" ಎಂದರು.

ನಾನು ಸುಮ್ಮನಿದ್ದೆ. ಅವರೇ ಕೊಟಡಿಯನ್ನೆಲ್ಲ ಒಂದು ಸಲ ಪರಿಶೀಲಿಸಿದರು. ಮೇಲಿಟ್ಟಿದ್ದ ನನ್ನ ಚಾಪೆ ಅವರ ಕಣ್ಣಿಗೆ ಬಿತ್ತು.

"ಅಗೋ, ಅಲ್ಲಿಟ್ಟಿದೆಯಲ್ಲಪ್ಪಾ, ಅದೇ ಇರ್ಬೇಕು ನೋಡು."

ನಾನು ಎದೆ ಕಲ್ಲು ಮಾಡಿ ಹೇಳಿದೆ: "ಅದು ಕೊಡೋದಕ್ಕಾಗೊಲ್ಲ ಸೂರಪ್ನೋರೆ."

"ಯಾಕಯ್ಯಾ? ಒಂದ್ಸ್ವಲ್ಪ ಕೊಟ್ಟಿರು, ಬಂದವರು ಹೊರಡುತ್ತಲೇ ಶಂಕರನ ಕೈಲೇ ಕಳಿಸ್ಬಿಡ್ತೇನೆ. ನಾವೇನ್ಮಾಡ್ಬಿಡ್ತೀವಿ ಅದನ್ನ?"

"ಇಲ್ಲ ಸೂರಪ್ನೋರೆ, ಅದನ್ನ ಯಾರಿಗೂ ಕೊಡೊಲ್ಲಾಂತ ಪ್ರತಿಜ್ಞೆ ಮಾಡಿಕೊಂಡಿದ್ದೇನೆ."

"ಅಯ್ಯೋ ಮಹಾರಾಯ, ಅಂತಾ ನಳ ಹರಿಶ್ಚಂದ್ರ ಧರ್ಮರಾಯರೇ ಅಷ್ಟು ಪಾಡು ಪಟ್ರು ಪ್ರತಿಜ್ಞೆ ಭಂಗವಾಗದ್ಹಾಗೆ ಮಾಡೋದಕ್ಕೆ, ನನ್ನಂಥ ನಿನ್ನಂಥ ಹುಲು ಮನುಷ್ಯರಿಗೇನಯ್ಯ?....ತಗೊಂಡ್ಹೋಗ್ಲೋ ಹಾಗಾದ್ರೆ?"

"ಆಗೋದಿಲ್ಲ ಸೂರಪ್ನೋರೆ. ದಯವಿಟ್ಟು ಕ್ಷಮಿಸಿ."

"ನೋಡಪ್ಪ...."

"ಕ್ಷಮಿಸ್ಬಿಡಿ ಸೂರಪ್ನೋರೆ ಇದೊಂದು ವಿಚಾರದಲ್ಲಿ; ಇನ್ನೇನ್ಬೇಕಾದ್ರು ಮಾಡ್ತೇನೆ."

"ನಿನ್ನಿಷ್ಟಪ್ಪ" ಎನ್ನುತ್ತಾ ಸಪ್ಪೆ ಮುಖ ಹಾಕಿಕೊಂಡು ಹೊರಟರು ಸೂರಪ್ಪನವರು.

೪

ಕಾಲೇಜಿನಿಂದ ಬಂದು 'ಉಸ್ಸಪ್ಪ' ಎಂದು 'ಈಸಿ ಛೇರ್'ನಲ್ಲಿ ಒರಗಿದೆ. ಅಂದು ಕಾಲೇಜಿನಲ್ಲಿ ವಿಪರೀತ ಕೆಲಸವಿತ್ತು. ಅದರ ಜೊತೆಗೆ ಹಾಳು ಯಾವುದೋ ಸಂಘದ ಉತ್ಸವವೊಂದರ ಏರ್ಪಾಟಿಗಾಗಿ ಶ್ರಮಿಸ ಬೇಕಾಗಿತ್ತು. ಬೆಳಗ್ಗೆ ೮ ಘಂಟೆಗೆ ಮನೆ ಬಿಟ್ಟವನು ೫ ಘಂಟೆಗೆ ಹಿಂತಿರುಗಿದೆ. ಊಟ ಮಾಡಿ ಕೊಟಡಿಗೆ ಬಂದು, ಕಣ್ಣುಮುಚ್ಚಿ 'ಈಸಿಚೇರಿ' ನಲ್ಲಿ ಮಲಗಿದೆ. ಎರಡು ನಿಮಿಷವಾಗಿರಲಿಲ್ಲ, ಬಳೆಗಳ ಶಬ್ದವಾಯಿತು; ಯಾರೋ ಮೆಲ್ಲನೆ ನಗುತ್ತಿದ್ದಂತೆ ತೋರಿತು. ಕಣ್ಣು ಬಿಟ್ಟು ನೋಡಿದೆ.

ಎದುರಿಗೇ ನಿಂತಿದ್ದಾಳೆ ಮಂಜುಳಾ. ಮೇಜಿನ ಮೇಲೆ ಭಾರವಿಟ್ಟು, ಒಂದು ಕೈಯನ್ನು ಮೇಜಿನ ಮೇಲಿಟ್ಟು, ಇನ್ನೊಂದು ಕೈಯ್ಯಿಂದ ಬಾಯನ್ನು ಮುಚ್ಚಿಕೊಂಡು ನಗುತ್ತಿದ್ದಳು. ರೋಜಾ ಬಣ್ಣದ ಜರತಾರಿ ಸೀರೆಯುಟ್ಟು ಹಸುರು ಕುಪ್ಪಸ ತೊಟ್ಟಿದ್ದಳು. ಹೆರಳಲ್ಲಿ ಮುಡಿದಿದ್ದ ಹೂಗಳ ಪರಿಮಳ ಕೊಟಡಿಯನ್ನೆಲ್ಲ ತುಂಬಿತ್ತು. ಹಣೆಯಲ್ಲಿ ಕುಂಕುಮ; ಕಿವಿಯಲ್ಲಿ ಸಣ್ಣ ಲೋಲಕ್ಕುಗಳು ಒಟ್ಟಿನಲ್ಲಿ ಮಂಜುಳಾ ಎಂದಿಗಿಂತ ಅಂದವಾಗಿದ್ದಳು.

"ಏನು ಇಷ್ಟು ದೂರ ಅಮ್ಮಾವರ ಸವಾರಿ ದಯಮಾಡಿಸಿದ್ದು?" ನಾನು ಕೇಳಿದೆ.

"ದೇವರ ದರ್ಶನಕ್ಕೆ ನಾನೇ ಗುಡಿಗೆ ಹೋಗ್ಬೇಕೋ. ದೇವ್ರೇ ನಾವಿದ್ದ ಕಡೆ ಬರ್ತಾನೋ?" ಅವಳ ಪ್ರಶ್ನೆ.

"ತಕ್ಕಷ್ಟು ಭಕ್ತಿಯಿದ್ದರೆ ಭಕ್ತರಿದ್ದ ಕಡೆ ಓಡಿ ಬರ್ತಾನಂತೆ ದೇವ್ರು."

"ಮೊದಲೇ ಆಯಾಸ ಆಗಿರೋ ದೇವ್ರು ಯಾವ ಭಕ್ತಿಗೂ ಮೆಚ್ಚಿ ಬರೊಲ್ಲ ಅಂತ ನಾನೇ ಬಂದೆ"

"ಬಹಳ ಸಂತೋಷ. ಅಂತೂ ಅಷ್ಟಾದ್ರೂ ನನ್ನ ಜ್ಞಾಪ್ಕ ಬಂತಲ್ಲ."

"ಹೌದ್ಹೌದು. ನಾನು ಬಹಳ ಮರೆತಿರೋದು" ಎಂದು ಮುಗುಳ್ನಗೆ ಬೀರಿದಳು ಮಂಜುಳ.

"ಹೋಗಲಿ ಬಿಡು, ಇವತ್ತೇನು ಇಷ್ಟು ಸೊಗಸಾಗಿ ಅಲಂಕಾರ ಮಾಡ್ಕೊಂಡಿದ್ದೀ?"

"ಅದೇನು ಪ್ರತಿಸಿತ್ಯ ಮಾತ್ರ ತಲೆ ಬೀರಿ ಹಾಕ್ಕೊಂಡು ಹಳೇ ಸೀರೆ ಉಟ್ಕೊಂಡು ಬರ್ತೀನೇನು?"

"ಅಲ್ಲ, ಇವತ್ತೇನು ಜರತಾರಿ ಸೀರೆ, ಜರತಾರಿ ಕುಪ್ಪಸ, ಮಲ್ಲಿಗೆ ದಂಡೆ, ಚಿನ್ನದ ಸರ, ಎಲ್ಲದಕ್ಕಿಂತ ಹೆಚ್ಚಾಗಿ ತುಟಿಮೇಲೆ ನಗು."

"ಸಾಕ್ಸಾಕು ವರ್ಣನೆ."

"ವರ್ಣನೆ ಸಾಕುಬಿಡು. ಆದರೆ ಇದೆಲ್ಲ ಇವತ್ಯಾಕೆ ಅಂತ!"

"ಇವತ್ತು....ಮರೆತ್ಬಿಟ್ರಾ ಯಾವ ವಾರ ಅಂತ?"

"ಯಾವ ವಾರ...ಮಂಗಳವಾರ; ಅದ್ರಲ್ಲೇನು ಹೆಚ್ಚುಗಾರ್ಕೆ?"

"ಏನಿಲ್ಲ; ಇವತ್ತು ಮಂಗಳಗೌರಿ ಪೂಜೆ ನಮ್ಮಕ್ಕ ಸರಸ್ವತೀಗೆ ಅಡಕ್ಕೆ"

"ಓಹೋ, ಹಾಗೋ ಸಂತೋಷ."

"ಇಲ್ಲ, ಅದಕ್ಕೇ ಇಲ್ಲೀಗ್ಬಂದೆ."

"ಅದಕ್ಕೆ ಇಲ್ಲಿಗ್ಯಾಕೆ ಬರ್ಬೇಕು? ನಾನು ಅರಿಶಿನ ಕುಂಕುಮಕ್ಕೆ ಬರ್ಲೇನು?"

"ನೀವು ಬರ್ಬೇಕೂಂತ ಅಲ್ಲ. ಎಲ್ಲಾರೂ ಬರ್ತಾರೆ ನೀವು ಸಹಾಯ ಮಾಡ್ಬೇಕೂಂತ."

"ಏನು. ಅರಸಿನ ಕುಂಕುಮ ಕೊಡ್ಲೇನು ಬಂದೋರ್ಗೆ?"

"ಸರಿ. ಯಾವಾಗ್ಲೂ ಹಾಸ್ಯಾನೇ ನಿಮ್ಗೆ."

"ಇಲ್ಲ ಹೇಳು ಮಹಾರಾಯುಗಿತ್ತಿ, ಏನು ಮಾಡ್ಬೇಕೋ ಹೇಳು"

"ಏನೂ ಇಲ್ಲ, ನಿಮ್ಹಾಪೆ ಸ್ವಲ್ಪ ಬೇಕು."

ನಾನು ಮಾತನಾಡಲಿಲ್ಲ.

"ನಿಮ್ತಾಯೀನ ಕೇಳ್ದೆ. ನಿಮ್ಮನ್ನೇ ಕೇಳೂಂದ್ರು."

"ಓಹೋ, ಅದಕ್ಕೇನೋ ನಿದ್ರಾಭಂಗ ಮಾಡಿದ್ದು?"

"ಓ, ಮಹಾ ನಿದ್ದೆ ಬಂದಿದ್ದದ್ದು."

"ಇಲ್ಲಾ, ಮಂಜೂ, ನಿದ್ದೆ ಬರೋದ್ರಲ್ಲಿತ್ತು."

"ಹೋಗ್ಲಿ, ಚಾಪೆ ಕೊಟ್ಟು ನನ್ನ ಕಳ್ಸಿ ಆ ಮೇಲೆ ಬೇಕಾದ್ಹಾಗೆ ನ್ದುಲ ಕ್ಕೊಳ್ಳಿ."

"ನೋಡು, ಮಂಜೂ, ಆ ಚಾಪೆ ಒಂದು ಕೇಳ್ಬೇಡ. ನಮ್ಮಮ್ಮ ಆವತ್ತು ಸೀತೂಗೆ ಆರತಿ ಮಾಡ್ದಾಗ ಕೇಳಿದ್ರು, ಕೊಡಲಿಲ್ಲ ನಾನು. ಅದನ್ನ ಕೊಡೋದ್ಮಾತ್ರ ಸಾಧ್ಯ ಇಲ್ಲ."

ಹೆಂಗಸರಿಗೆ ಸಿಟ್ಟು ಮೂಗಿನ ಮೇಲೆಯೇ ಇರುತ್ತದೆಯೋ ಏನೋ. ಆಗಲೆ ಹುಬ್ಬು ಗಂಟು ಹಾಕಿದಳು ಮಂಜೂ. "ಸರಿ ಹಾಗಾದ್ರೆ, ನಾನ್ಹೋಗ್ತೀನಿ."

"ಅಲ್ಲ, ಮಂಜೂ......."

"ಅಲ್ಲ ಇಲ್ಲ, ಬೆಲ್ಲ ಇಲ್ಲ. ಬಾಯ್ಬಿಟು ಬಣ್ಣಗೇಡು ಅನ್ನಸ್ಕೊಂಡಿ ದ್ದಾಯ್ತಲ್ಲ, ಇನ್ನೇನು?"

"ನಿನ್ಗೆ ತುಂಬಾ ಬೇಗ ಸಿಟ್ಟು ಬಂದ್ಬಿಡತ್ತೆ ಮಂಜು."

"ಹೌದ್ಹೌದು, ನಿಮಗೆ ಸಿಟ್ಟೆ ಬರೋಲ್ವಲ್ಲ ಸದ್ಯ. ನಾನ್ಹೋಗ್ತೀನೆ."

"ಅಲ್ಲ ಮಂಜೂ, ಈಗ್ನಾನು ಕೊಟ್ಟೆ ಅಂತಿಟ್ಕೊ. ಅವತ್ತು ನವ್ತಾಯಿ ಕೇಳ್ದಾಗ ಇಲ್ಲಂತ ಅಂದ್ಬಿಟ್ಟು ಈಗ ನಿಂಗೆ ಕೊಟ್ರೆ ಅವರೇನಂದ್ಕೋ ತಾರೆ ಹೇಳು."

"ಸರಿ, ಕೊಡ್ಲಿಕಿಷ್ಟ ಇಲ್ಲಾ ಅಂತ ಸ್ಪಷ್ಟವಾಗಿ ಹೇಳೋದ್ಬಿಟ್ಟು ಈ ಕುಂಟು ನೆಪಗಳನ್ನ ಯಾಕೆ ತರ್ಬೇಕು?"

"ಅಲ್ಲ ಮಂಜೂ"

"ನಿಮ್ಜ ತೇಗೆ ವಾದಿಸೋದಕ್ಕೆ ನನಗೆ ಪುರುಸತ್ತಿಲ್ಲ" ಎನ್ನುತ್ತಾ ಭರ್ರನೆ ಕೊಟಡಿಯಿಂದ ಹೊರಟು ಹೋದಳು ಮಂಜುಳ.

*

ವರ್ಷವೆಲ್ಲ ಪಟ್ಟ ಶ್ರಮ ಸಾರ್ಥಕವಾಯಿತು. ಉದ್ವೇಗದಿಂದ ಬೇಯು ತ್ತಿದ್ದ ಎದೆಗೆ ತಂಪಾಯಿತು. ಸದ್ಯ ಪರೀಕ್ಷೆಯಲ್ಲಿ ನನಗೆ ಮೊದಲನೇ ತರಗತಿ ಯಲ್ಲಿ ತೇರ್ಗಡೆಯಾಯಿತು.

ಅದರ ಸಂತೋಷಕ್ಕಾಗಿ ನನ್ನ ಮಿತ್ರರಿಗೆಲ್ಲ ಒಂದು ಸಂತೋಷ ಕೂಟ ವನ್ನೇರ್ಪಡಿಸಿದೆ. ನಾಲ್ಕೂವರೆಗೆ ಎಲ್ಲರೂ ಬರುವಂತೆ ಹೇಳಿದ್ದೆ. ೨ ಘಂಟೆ ಯಿಂದಲೇ ಅವರ ಸ್ವಾಗತಕ್ಕಾಗಿ ಸಿದ್ಧಗೊಳಿಸಲಾರಂಭಿಸಿದೆ.

ಎಲ್ಲ ಅಣಿಯಾಯಿತು. ನಡುಮನೆಯಲ್ಲಿ ದೊಡ್ಡ ಜಮಖಾನೆ ಹಾಕಿದೆ. ಎಲ್ಲಾ ಪಠಗಳಿಗೂ ಅಲಂಕಾರ ಮಾಡಿ, ಹಾರ ಹಾಕಿದ್ದಾಯಿತು. ಜಮ ಖಾನೆಯ ಮೇಲೆ ನನ್ನ ಹೊಸ ಚಾಪೆಯನ್ನು ಹಾಸಿದರೆ ಎಷ್ಟು ಅಂದವಾಗಿ ಕಾಣುವುದು! ನನ್ನ 'ಚಾಪೆ ಪ್ರೇಮ'ವನ್ನು ಹಾಸ್ಯ ಮಾಡುತ್ತಿದ್ದ ಸತ್ಯ,

ಗುರುರಾಜ, ವೆಂಕಟು, ಮನೋಹರ, ಮೋಹನ ಎಲ್ಲರೂ ಅದನ್ನು ನೋಡಿ ಬೆಪ್ಪಾಗದೆ ಹೋಗುವರೇ?

'ಠಣ್', 'ಠಣ್', 'ಠಣ್'

ಗಡಿಯಾರ ಮೂರು ಘಂಟೆ ಹೊಡೆಯಿತು. ನನ್ನ ಚಾಪೆ ತರಲು ಕೊಟಡಿಗೆ ಹೋದೆ. ಗೋಡೆಯ ಹತ್ತಿರಕ್ಕೆ ಮೇಜನ್ನೆಳೆದು ಅದನ್ನು ಹತ್ತಿದೆ. ಎಚ್ಚರಿಕೆಯಿಂದ ಚಾಪೆಗೆ ಕೈ ಹಾಕಿದೆ. ಕಣ್ಣಿಗೆ ಏನೋ ಬಿದ್ದು ಉರಿ ಹತ್ತಿತ್ತು. ಚಾಪೆಯನ್ನು ಬಿಟ್ಟು, ಕರವಸ್ತ್ರದಿಂದ ಕಣ್ಣನ್ನು ಚೆನ್ನಾಗಿ ಒರಸಿಕೊಂಡು ಮತ್ತೆ ಕೈ ಹಾಕಿದೆ. ಮತ್ತೆ ಅದೇ ಅನುಭವವಾಯಿತು. ಪುನಃ ಕಣ್ಣು ಜ್ಜಿಕೊಂಡು, ಕಣ್ಣನ್ನು ಬಿಡದೆ ಹಾಗೆಯೇ ಚಾಪೆಯನ್ನು ತೆಗೆದೆ. ತಪತಪನೆ ನನ್ನ ಮೇಲೆ ಮಣ್ಣುದುರಿತು. ಕಣ್ಣು ಬಿಟ್ಟು ನಾನು ನೋಡಿದಾಗ ನೆಲದ ಮೇಲೆ ನೂರಾರು ಗೆದ್ದಲು ಹುಳುಗಳು ಹರಿದಾಡುತ್ತಿದ್ದವು. ನನ್ನ ಕೈಯ್ಯಲ್ಲಿ ಆ ಸೊಗಸಾದ ಚಾಪೆಯ ತುಂಡೊಂದಿತ್ತು.

ಕಪ್ಪು ಹುಡುಗಿ

ನಿಂಗಿ ಇತರ ಹುಡುಗಿಯರು ಆಡುವುದನ್ನೇ ನೋಡುತ್ತಿದ್ದಳು. ಅವರ ಆಟದಿಂದಲೇ ತನ್ನ ಕಣ್ಣನ್ನು ತುಂಬಿಕೊಳ್ಳುವಂತೆ, ಆಡುತ್ತಿದ್ದ ಹುಡುಗಿಯರು, ಅವರ ಕುಣಿತಕ್ಕೆ ಸಿಕ್ಕ ನೆಲ ಎಲ್ಲವನ್ನೂ ಕಣ್ಣಿನಿಂದಲೇ ತನ್ನ ಆತ್ಮದೊಳಕ್ಕೆ ಸೆಳೆದುಕೊಳ್ಳುವಂತೆ ನೋಡುತ್ತಿದ್ದಳು. ಆ ಹುಡುಗಿಯರು ಮಾತ್ರ ಅವಳ ಪರಿವೆಯೇ ಇಲ್ಲದಂತೆ ಆಡುತ್ತಿದ್ದರು. ಮಧ್ಯೆ ಮಧ್ಯೆ ಆಟ ನಿಲ್ಲಿಸಿ ಅವಳ ಕಡೆ ನೋಡುವರು, ತಮ್ಮಲ್ಲೇ ಪಿಸುಮಾತನಾಡಿಕೊಳ್ಳುವರು, ಮತ್ತೆ ಆಟದಲ್ಲಿ ತೊಡಗುವರು. ಆಗಾಗ ಅವಳ ಕಡೆ ತೀಕ್ಷ್ಣವಾದ ನೋಟವೊಂದನ್ನು ಎಸೆದು ತಮ್ಮ ಆಟ ಮುಂದುವರಿಸುವರು. ನಿಂಗಿ ಅವರನ್ನೇ ದಿಟ್ಟಿಸಿ ನೋಡುತ್ತಿದ್ದಳು. ಎಷ್ಟು ಚೆನ್ನಾಗಿತ್ತು ಅವರ ಆಟ! 'ನನ್ನನ್ನೂ ಸೇರಿಸಿಕೊಳ್ಳಿ' ಎಂದು ಕೇಳಬೇಕೆಂದು ಮನಸ್ಸು ಹಾತೊರೆಯುತ್ತಿತ್ತು. ಆದರೆ—? ತನ್ನನ್ನೇ ಒಮ್ಮೆ ನೋಡಿಕೊಂಡಳು ನಿಂಗಿ. ತನ್ನ ಹರಿದುಹೋದ ಧೂಳು ಮುಚ್ಚಿದ ಲಂಗವನ್ನು ನೋಡುತ್ತಲೇ ಕಣ್ಣಿನಲ್ಲಿ ನೀರು ಉಕ್ಕಿತು. ಅವರ ಬಟ್ಟೆ—? ಓ. ಆ ಪುಟ್ಟ ಬೆಳ್ಳನೆ ಹುಡುಗಿಯ ಜರತಾರಿಯ, ತಿಳಿಹಸುರು ಲಂಗ ಎಷ್ಟು ಸೊಗಸಾಗಿದೆ! ಊಂ, ಆ ಇನ್ನೊಬ್ಬ ಹುಡುಗಿಯ ರೋಜ ಲಂಗ, ಅದರ ಮೇಲೆ ಹಸುರು 'ಫ್ರಾಕು', ಎಷ್ಟು ಮುದ್ದಾದ ಜೋಡಿ! ಈ ಹುಡುಗಿಯ ಆಕಾಶ ಬಣ್ಣದ ಲಂಗ, ಅದರ ಮೇಲೆ ಬಣ್ಣ ಬಣ್ಣದ ಚಿತ್ರಗಳು—ಅವು ಹೂವೇ, ನಕ್ಷತ್ರಗಳೇ ಎಂಬುದು ದೂರದಿಂದ ಗೊತ್ತಾಗುವಂತಿರಲಿಲ್ಲ— ಎಷ್ಟು ಚೆನ್ನಾಗಿ ಹೊಂದಿಕೊಂಡಿವೆ! ಎಲ್ಲ ಭಾಗ್ಯವಂತರ ಮನೆಯ ಮಕ್ಕಳು, ಅದರಲ್ಲಿಯೂ ಮದುವೆ ಮನೆಗೆ ಬಂದವರು. ಸೊಗಸಾದ ಬಟ್ಟೆ ಹಾಕಿಕೊಂಡು ಆನಂದದ ಪುತ್ಥಳಿಗಳಾಗಿ ಸಡಗರದಿಂದ ಕುಣಿದು ಕುಪ್ಪಳಿಸುವ ಭಾಗ್ಯ ಪಡೆದು ಬಂದವರು. ಜೊತೆಗೆ ಒಡವೆಗಳು ಬೇರೆ. ಒಬ್ಬಳ ಕೈಯಲ್ಲಿ ಬಂಗಾರದ ಬಳೆ ಎರಡು ಜೊತೆ, ಮತ್ತೊಬ್ಬಳ ಕೊರಳಲ್ಲಿ ಬಂಗಾರದ ಸರ. ಮೂರನೆಯವಳ ಕಿವಿಯಲ್ಲಿ ಥಳಥಳ ಹೊಳೆಯುವ

'ಲೋಲಾಕು'. ನಿಂಗಿಯ ಕಣ್ಣು ತನ್ನ ಕೈಯೆಡೆಗೆ ಸಾಗಿತು, ಕೆಂಪು ಬಣ್ಣದ ಎರಡು ಬಳೆಗಳು ಅವಳ ಕಣ್ಣನ್ನು ಇರಿದುವು. ಕೈ ತಾನಾಗಿಯೇ ಕುತ್ತಿಗೆಯನ್ನು ತಡಕಿ ಕಿವಿಯ ಮೇಲಾಡಿ ಕೆಳಗಿಳಿಯಿತು.

ಇಷ್ಟು ಶುಭ್ರವಾದ, ಚೆಲ್ಲಿ ಬಾಳುವ ಬಟ್ಟೆ ಹಾಕಿಕೊಂಡು ಒಡವೆ ಇಟ್ಟುಕೊಂಡು ನಲಿದಾಡುವ ಇವರು ನನ್ನನ್ನು ಆಟಕ್ಕೆ ಸೇರಿಸಿಕೊಳ್ಳುವರೇ ಎನ್ನಿಸಿತು ನಿಂಗಿಗೆ. ಆದರೆ ಒಬ್ಬಳೇ ನಿಂತು ನಿಂತು ಸಾಕಾಗಿ ಹೋಗಿತ್ತು, ಅವಳನ್ನು ಮಾತಾಡಿಸುವವರೇ ಇಲ್ಲವೆ ಬೇಸರ ಮನಸ್ಸನ್ನು ಮುತ್ತಿತ್ತು. ತನ್ನ ತಾಯಿ 'ಶಿಫಾರಸು' ಮಾಡಿದರೆ ಆಟಕ್ಕೆ ಸೇರುವ ಸೌಭಾಗ್ಯ ಸಿಗಬಹುದೇನೋ ಎಂದುಕೊಂಡು ತಾಯಿಯ ಕಡೆ ನೋಡಿದಳು; ಚೆನ್ನಿ ಇತರ ಕೆಲವು ಹೆಂಗಸರೊಡನೆ ಹರಟೆ ಕೊಚ್ಚುತ್ತ, ವೀಳೆದೆಲೆ ಅಡಿಕೆ ಅಗಿಯುತ್ತ ಮುಸುರೆ ಪಾತ್ರೆ ತಿಕ್ಕುತ್ತಿದ್ದಳು. ಅವಳನ್ನು ಮಾತಾಡಿಸಲು ಅದು ತಕ್ಕ ಸಮಯವಲ್ಲ ಎಂದು ತೋರಿತು ನಿಂಗಿಗೆ; ಸುಮ್ಮನೆ ಆಟ ನೋಡುತ್ತ ನಿಂತಳು.

ತನ್ನನ್ನೂ ಅವರು ಸೇರಿಸಿಕೊಂಡರೆ! ಅವರಿಗಿಂತ ತನಗೇ ಶಕ್ತಿ ಹೆಚ್ಚು. ಹುಂ, ಆಗಲೇ ಇಬ್ಬರು ಹುಡುಗಿಯರು ಉಬ್ಬಸ ಪಡುತ್ತ ಬೆವರೊರೆಸಿಕೊಳ್ಳುತ್ತಿದ್ದರು. ತನಗೆ ಅಷ್ಟು ಬೇಗ ಆಯಾಸವಾಗದು. ಸುಲಭವಾಗಿ ಅವರನ್ನೆಲ್ಲ ಸೋಲಿಸಿಯೇನು! ಆಗ ಅವರಿಗೂ ಆಶ್ಚರ್ಯವಾಗುವುದು. ಆಗ ತನ್ನನ್ನು ಪ್ರೀತಿಯಿಂದ ಕಂಡೇ ಕಾಣುವರು. ಅವರೆಲ್ಲ ತನ್ನ ಸ್ನೇಹ ಬೆಳೆಸಲು ಪ್ರಯತ್ನಿಸುತ್ತಾರೆ. "ನಿಂಗೀ, ನಿನ್ನ ಹಾಗೆ ಆಡೋದಕ್ಕೆ ನಮಗೂ ಕಲ್ಸೇ," ಎಂದು ಬೇಡುವರು. ಆಗ ತನಗೆ ಎಷ್ಟು ಹೆಮ್ಮೆ! ಬರಿಯ ಊಹೆಯಿಂದಲೇ ನಿಂಗಿಯ ಮೈ ಉಬ್ಬಿತು. ರೋಜ ಲಂಗದ ಹುಡುಗಿಗೆ ಆಟ ಚೆನ್ನಾಗಿ ಕಲಿಸಬಹುದು. ಏನೇ ಆಗಲಿ ಆ ತಿಳಿ ನೀಲಿಯ ಲಂಗದ ಹುಡುಗಿಗೆ ಮಾತ್ರ ಏನೂ ಕಲಿಸಬಾರದು. ಬಹಳ ಸಿಡುಕಿ ಅಂತ ಕಾಣುತ್ತೆ ಅವಳು. ಅವಳೆಷ್ಟೇ ಅಂಗಲಾಚಿಕೊಂಡರೂ ಸಹ—

"ಏ ಹುಡ್ಗಿ, ಆ ಕಡೆ ಹೋಗು"

ನಿಂಗಿ ತನ್ನ ಭಾವನಾಪ್ರಪಂಚದಿಂದ ಈ ಪ್ರಪಂಚಕ್ಕೆ ಕುಸಿದಳು. ಅವಳಿಗೆ ಸ್ವಲ್ಪ ದೂರದಲ್ಲಿ ರೋಜ ಬಣ್ಣದ ಲಂಗದ ಹುಡುಗಿ ಅವಳನ್ನೇ ನೋಡುತ್ತ ಕೂಗಿದಳು. "ಕೇಳಿಸ್ಲಿಲ್ವೇನೆ ಹೇಳಿದ್ದು?"

"ಏನಪ್ಪ?"

"ಹೋಗತ್ತಡೆ ದಾರಿಬಿಟ್ಟು ಅಂತ?"

"ಯಾಕ್ರಪ್ಪ?"

"ನನ್ನ ಬಚ್ಚ ನಿನ್ನ ಕಾಲ ಹತ್ರ ಬಿದ್ದಿದೆ, ಕಾಣ್ಸೊಲ್ಲೇನು ನಿನಗೆ ಕಣ್ಣು" ಆಟ ನಿಂತು ಹೋಯಿತೆಂಬ ಕೋಪದಲ್ಲಿ ನಿಷ್ಠುರವಾಗಿ ನುಡಿದಳು ಹುಡುಗಿ.

ನಿಂಗಿ ಕೆಳಗೆ ನೋಡಿದಳು; ತನ್ನ ಕಾಲಿನ ಹತ್ತಿರ ಬಿದ್ದಿದ್ದ ಕರಿಯ ಕಲ್ಲಿನ ಚೂರೊಂದು ಕಾಣಿಸಿತು. ದಾರಿ ಬಿಟ್ಟು ನಿಂತಳು, ಹುಡುಗಿ ಹತ್ತಿರ ಬಂದು ಅದನ್ನು ತೆಗೆದುಕೊಂಡಳು.

ಮನಸ್ಸಿನ ಉದ್ವೇಗ ಒತ್ತಿ ಹಿಡಿಯಲಾರದೆ ನಿಂಗಿ ಕೇಳಿಯೇ ಬಿಟ್ಟಳು "ಅಮ್ಮ, ನಾನೂ ಬರ್ಲಾ ಆಟಕ್ಕೆ!"

ತನ್ನ ಪಕ್ಕದಲ್ಲಿ ಸಿಡಿಲೊಂದು ಹಾದುಹೋಗಿದ್ದರೂ ರೋಜ ಬಣ್ಣದ ಲಂಗದ ಹುಡುಗಿಗೆ ಅಷ್ಟು ದಿಗ್ಭ್ರಮೆಯಾಗುತ್ತಿರಲಿಲ್ಲವೇನೋ!

"ಏನು!" ಎಂದು ಅಪ್ರತಿಭಳಾಗಿ ಕೇಳಿದಳು.

ತಾನು ಅಷ್ಟು ಧೈರ್ಯ ಮಾಡಬಾರದಾಗಿತ್ತು ಎನ್ನಿಸಿತು ನಿಂಗಿಗೆ. ಆದರೆ ಮಾತು ತುಟಿಮೀರಿತ್ತು. ಅದೇ ಪ್ರಶ್ನೆಯನ್ನು ಮತ್ತೆ ಕೇಳಿದಳು. ಹುಡುಗಿ ಅವಳನ್ನೇ ಅರೆಕ್ಷಣ ನೋಡಿದಳು, ಅಷ್ಟರಲ್ಲಿ ತಿಳಿನೀಲಿ ಬಣ್ಣದ ಲಂಗದ ಹುಡುಗಿ ಕೂಗಿದಳು: "ಎಷ್ಟು ಹೊತ್ತು, ಬಾರೇಮ್ಮ ಲಲಿತ," ಎಂದು.

ಲಲಿತ ಅವಳ ಕಡೆ ತಿರುಗಿದಳು: "ಲೇ ಸರೋಜ, ಈ ಹುಡ್ಗಿ ಹೇಳಿದ್ದು ಕೇಳ್ದ್ಯೆ?"

"ಏನಂತೇ?"

"ಅವಳೂ ಆಟಕ್ಕೆ ಬರ್ತಾಳಂತೆ"

ಹುಡುಗಿಯರೆಲ್ಲ ಗೊಳ್ಳನೆ ನಕ್ಕುಬಿಟ್ಟರು. ಅವರ ನಗು ತೆರೆತೆರೆಯಾಗಿ ಬಂದು ನಿಂಗಿಯ ಕಿವಿಯ ಮೇಲೆ ಅಪ್ಪಳಿಸಿ ಮುಂದೆ ಸಾಗಿತು.

"ಅಹಹ. ಸೇರಿಸ್ಕೊಬೇಕೇ ಸುಂದ್ರೀನ," ಹಸುರು ಲಂಗದ ಹುಡುಗಿ ನಗುವನ್ನು ತಡೆಯುತ್ತ ಒದರಿದಳು.

"ಲೇ ರತ್ನ, ಅವಳ ಕೈಕಾಲು ನೋಡೋ ರಸ್ತೆ ಧೂಳೆಲ್ಲ ಅವಳ್ಮೇಲೇ!" ಲಲಿತ ಪ್ರತ್ಯುತ್ತರವಾಗಿ ಕೂಗಿದಳು.

ಹೆದರುತ್ತ ಹೆದರುತ್ತ, ಆದರೂ ಹಠವಾರಿತನದಿಂದ ಕೇಳಿದಳು ನಿಂಗಿ "ನಾನ್ಯಾಕೆ ಆಟಕ್ಕೆ ಬರ್ಬಾರ್ದು?"

"ನೀನು ಶೂದ್ರೋಳು!" ಲಲಿತೆಯ ಉತ್ತರ.

"ಆದ್ರೇನು?" ಛಲದಿಂದ ಪ್ರಶ್ನಿಸಿದಳು ನಿಂಗಿ.

"ನಿನ್ನ ಮೈಬಣ್ಣ ನೋಡ್ಕೊ, ಎಷ್ಟು ಕಪ್ಪು! ಅಬ್ಬ, ಅಸಹ್ಯ!" ಸೊಟ್ಟಮೂತಿ ಮಾಡಿ ನುಡಿದಳು ಸರೋಜ.

"ಅಯ್ಯೋ ಬನ್ರೇ, ನಮ್ಮ ಪಾಡಿಗೆ ನಾವು ಆಡೋಣ," ಗೆಲ್ಲುವುದರಲ್ಲಿದ್ದ ರತ್ನ ಎಚ್ಚರಿಕೆ ಕೊಟ್ಟಳು.

ನೀರು ಉಕ್ಕುತ್ತಿತ್ತು ನಿಂಗಿಯ ಕಣ್ಣಿನಲ್ಲಿ. ತನ್ನ ಮೈ ನೋಡಿಕೊಂಡಳು —ಹೌದು, ಕಪ್ಪು, ಸಾದುಗಪ್ಪು, ಇದ್ದಲು ಕಪ್ಪು, ಕಬ್ಬಿಣದ ಕಪ್ಪು. ನನ್ನ ಮೈ ಯಾಕೆ ಕಪ್ಪು? ಲಲಿತ ಎಷ್ಟು ಬೆಳ್ಳಗಿದ್ದಾಳೆ! ಅವಳ ಲಂಗ ಅವಳ ಮೈ ಬಣ್ಣಕ್ಕೆ ಎಷ್ಟು ಚೆನ್ನಾಗಿ ಹೊಂದಿಕೊಂಡಿದೆ! ರತ್ನ ಕೆಂಪುಛಾಯೆ. ಆದರೆ ನನಗೇಕೆ ಈ ಅಸಹ್ಯ ಕಪ್ಪು? ನಿಂಗಿಯ ದೃಷ್ಟಿ ಸರೋಜಳ ಕಡೆ ತಿರುಗಿತು. ಸರೋಜ ಆವಳ ಕಡೆ ಬೆನ್ನು ತಿರುಗಿಸಿ ನಿಂತಿದ್ದಳು. ನಿಂಗಿಗೆ ಆಶ್ಚರ್ಯ, ಸಂತೋಷ—ಓ, ಸರೋಜಾನೂ ಕಪ್ಪು. "ನೀನೂ ಕಪ್ಪೇ," ಎಂದು ಹಂಗಿಸಬೇಕೆಂದು ತುಟಿ ತೆರೆದಳು, ಅಷ್ಟರಲ್ಲಿ ಸರೋಜ ಅವಳ ಕಡೆ ತಿರುಗಿದಳು. ಅಯ್ಯೋ, ಅವಳ ಮುಖ ಅಷ್ಟು ಕಪ್ಪಿಲ್ಲ? ಅವಳ ಕೈಕಾಲುಗಳು ಕಪ್ಪು, ಫ್ರಾಕಿನ ಮಧ್ಯೆ ತೋರುವ ಕೊರಳು ಕಪ್ಪು, ಮುಖವೇಕೆ ಅಷ್ಟು ಕಪ್ಪಿಲ್ಲ? ತನಗೂ ಮುಖವಾದರೂ ಕಪ್ಪಿಲ್ಲದೆ ಇರಬಾರದಾಗಿತ್ತೇ!

"ನಿಂಗಿ! ಏ ನಿಂಗೀ!" ತಾಯಿ ಕೂಗಿದಳು. ನಿಂಗಿ ತಾಯಿಯ ಬಳಿಗೆ ಓಡಿದಳು, "ಕೋ ಇದ"—ಚೆನ್ನಿ ಲಾಡು ಒಂದನ್ನು ಕೊಟ್ಟಳು. ನಿಂಗಿ ಅದನ್ನು ತೆಗೆದುಕೊಂಡು ಅಲ್ಲೇ ನಿಂತಳು.

"ಯಾಕಮ್ಮಿ ಅಲ್ಲೇ ನಿಂತಿ? ಓಗತ್ತ ಓಡಾಡೊರ್ಗೆ ದಾರೀ ಬಿಟ್ಟು" ಚೆನ್ನಿ ಗದರಿಸಿದಳು.

"ಅಪ್ಪಾ—" ಅಂಜುತ್ತಂಜುತ್ತ ಉಸುರಿದಳು ನಿಂಗಿ.

"ಏನಮ್ಮಿ ಅದು ನಿನ್ಗೊಣಗಾಟ?"

"ಏನಿಲ್ಲಪ್ಪ."

"ಎಯ್, ಏನದು ಏಳ್ಬಾರ್ದಾ? ನಿನ್ತಾವ ಮಾತಾಡ್ತ ಕುಂತ್ಕೊಂಡ್ರೆ ಮುಸಿ ಬೆಳ್ಗೋರು ಯಾರು?"

"ನಾನ್ಯಾಕಪ್ಪ ಕಪ್ಪಿಗಪ್ನಿ?" ಧೈರ್ಯವನ್ನೆಲ್ಲ ಕೂಡಿಸುತ್ತ ಕೇಳಿದಳು ನಿಂಗಿ.

"ಅದೇನ್ನಿಂಗಿ ಅಂಗೆ ಕೇಳ್ತೀಯ?" ಚೆನ್ನಿ ಆಶ್ಚರ್ಯದಿಂದ ಪ್ರಶ್ನಿಸಿದಳು.

"ಸುಮ್ನೆ ಕೇಳಿದ್ನಪ್ಪ."

"ದೇವ್ರುಮಾಡ್ದಂಗೆ ಇದ್ದಿ. ಯಾರೇನ್ಮಾಡೋಕಾಗ್ತೈತೆ ಅದ್ಕೆ?"

"ನನ್ಮೊಕ ಯಾಕಪ್ಪ ಬೆಳ್ಗಿಲ್ಲ?"

ಚೆನ್ನಿಗೆ ಮಗಳ ಪ್ರಶ್ನೆ ಅರ್ಥವಾಗಲಿಲ್ಲ. "ಏನೇ ಅದು?" ಎಂದು ಗದರಿಸಿದಳು.

ಇದುವರೆಗೆ ಕಟ್ಟಿಹಾಕಿದ್ದ ಕಂಬನಿ ತಾಯಿಯ ಆ ಗದರಿಕೆಗೆ ಕೋಡಿ ಹರಿಯಿತು. ಬಿಕ್ಕುತ್ತ ನಿಂಗಿ ಮುಖವನ್ನು ತನ್ನ ಹರಕು ಕೊಳಕು ಲಂಗದಲ್ಲಿ ಅಡಗಿಸಿಕೊಂಡಳು.

ತಾಯಿಯ ಕರುಳು ಚುರುಕೆಂದಿತು. "ಅಯ್, ಇದಕ್ಕೆಲ್ಲ ಅತ್ತಾರ್ಗೈತಾ ನನ್ನಪ್ಪ? ಏನದು ಏಳ್ಬಾರ್ದಾ?" ಎಂದು ಮಮತೆ ಬೆರೆತ ದನಿಯಲ್ಲಿ ಕೇಳಿದಳು.

"ನನ್ಮೊಕಾ....ನನ್ಮೊಕಾ...." ಬಿಕ್ಕು ಅವಳನ್ನು ಮುಂದೆ ಮಾತನಾಡಲು ಬಿಡಲಿಲ್ಲ.

"ಏನೇ ಅದು ನಿನ್ಮೊಕ?" ಚೆನ್ನಿ ಆಶ್ಚರ್ಯದಿಂದ, ಹಾಸ್ಯದಿಂದ ಕೇಳಿದಳು.

"ನನ್ಮೊಕಾ.... ಯಾಕೆ ಬೆಳ್ಗಿಲ್ಲ.... ಆ ಉಡ್ಗೀದೈತಲ್ಲ....ಅಂಗೇ?" ರಾಗವಾಗಿ ಹಾಡಿದಳು ನಿಂಗಿ.

"ಯಾವ ಉಡ್ಗೀನೇ?"

ನಿಂಗಿ ಮಾತನಾಡಲಿಲ್ಲ. ಸರೋಜಳ ಕಡೆ ಬೆಟ್ಟು ತೋರಿಸಿದಳು. ಚೆನ್ನಿಗೆ ಇನ್ನೂ ಅರ್ಥವಾಗಲಿಲ್ಲ. ತಾನು ತೊಳೆಯುತ್ತಿದ್ದ ಪಾತ್ರೆಯನ್ನು ಬಿಟ್ಟು ಎದ್ದು ಬಂದು ನೋಡಿದಳು. ಆಗ ಅರ್ಥವಾಯಿತು ಅವಳಿಗೆ, ಮಗಳ ಪ್ರಶ್ನೆ. ಫಕ್ಕನೆ ನಕ್ಕುಬಿಟ್ಟಳು. ಆ ನಗು ಕೇಳಿ ದುಃಖದಿಂದ ಮೊದಲೇ ಚಿಕ್ಕದಾಗಿದ್ದ ನಿಂಗಿಯ ಮುಖ ಇನ್ನೂ ಪುಟ್ಟದಾಯಿತು.

"ಅದೊಂದ್‌ತರಾ ಬಿಳೀ 'ಪೌಡರ್' ಇರ್ತದವ್ವ ಮೊಕಕ್ಕೆ ಆಕ್ಕೊಳ್ಳೋದು, ಅದು ಆಕೊಂಡ್ರೆ ಮೊಕ ಬೆಳ್ಳಗೆ ಕಾಣ್ತದೆ." ನಗು ತಡೆದುಕೊಂಡು ಚೆನ್ನಿ ವಿವರಿಸಿದಳು.

"ಕಪ್ಪಿರೋರ ಮೊಕವೂ ಬೆಳ್ಳಗೆ ಕಾಣ್ತದಾ?" ಅಪನಂಬಿಕೆ, ಆಶ್ಚರ್ಯ ಆನಂದ ಎಲ್ಲ ಬೆರೆತ ದನಿಯಲ್ಲಿ ಕೇಳಿದಳು ನಿಂಗಿ.

"ಊಂಕಣವ್ವ."

ನಿಂಗಿ ಸ್ವಲ್ಪ ಹೊತ್ತು ಸುಮ್ಮನಿದ್ದಳು. ಆ ಮೇಲೆ ದೈನ್ಯದಿಂದ ಬೇಡಿದಳು. "ನಂಗೂ ಅದ್ನ ತೆಕ್ಕೊಡ್ತೀಯೇನವ್ವ?"

ಚೆನ್ನಿಗೆ ನಗುಬಂತು. ಮಗಳ ದೈನ್ಯ ನೋಡಿ ಕರುಣೆಯುಂಟಾಯಿತು. ಆದರೆ ಮಾಡುವುದೇನು? ಎರಡು ತಿಂಗಳಿಂದ ಹೊಟ್ಟೆಗೆ ಸಾಲದು. ಗಂಡ ಯಾವುದೋ ಮುಷ್ಕರವೆಂದು ಮನೆಯಲ್ಲಿ ಕುಳಿತ. ಸಂಸಾರ ಐದಾರು ಜೀವಿಗಳದು. ಅವಳ ಪಕ್ಕದ ಮನೆಯ ತಿಮ್ಮಿ ತನ್ನ ಸಹಾಯಕ್ಕೆಂದು ಅವಳನ್ನು ಮದುವೆ ಮನೆಗೆ ಕರೆದುಕೊಂಡು ಬಂದದ್ದರಿಂದ ಮೂರು ದಿನ ದಿಂದ ಚೆನ್ನಾಗಿ ಅನ್ನ, ತಿಂಡಿ ಸಿಕ್ಕಿತು. ಇವತ್ತೇ ಕೊನೆಯ ದಿನ. ಆ ಮೇಲೆ?

"ಅಯ್ಯೋ ರಾಗಿ ಅಂಬ್ಲೀಗಾಗೋಷ್ಟೂ ಶಿವ ಕೊಡ್ಲಿಲ್ಲ. ನಮ್ಗೆ ಪೌಡರ್ಯಾಕ್ಬೇಡು ನಿಂಗಿ." ಎಂದಳು ಚೆನ್ನಿ.

ನಿಂಗಿ 'ಗೇಟು' ಬಳಿ ನಿಂತು ಲಾಡು ತಿನ್ನುತ್ತಾ ಯೋಚನೆ ಮಾಡಿದಳು. ಹುಂ, ನನಗೂ ಆ 'ಪೌಡರ್' ಸಿಕ್ಕಿದ್ದರೆ—! ತನ್ನ ಮುಖವೂ ಬೆಳ್ಳಗಾಗು

ತ್ತಿತ್ತು. ಅದನ್ನು ಮೈಗೆಲ್ಲ ಹಚ್ಚಿಕೊಂಡಿದ್ದರೆ ಮೈಯೆಲ್ಲ ಬೆಳ್ಳಗಾಗುತ್ತಿತ್ತೋ ಏನೋ! ಆಗ ತಾನು ಆ ಜಂಭದ ಹುಡುಗಿಯನ್ನು ಹಂಗಿಸಬಹುದಾಗಿತ್ತು. ಆ ಕಪ್ಪು ಹುಡುಗಿ ಸರೋಜಳಿಗೆಷ್ಟು ಅಹಂಕಾರ! ತಾನೂ ಅವಳ ಹಾಗೆಯೇ ಬೆಳ್ಳಗಾಗಬಹುದಾಗಿತ್ತು. ಆಗ ಅವರ ಜಂಭವೆಲ್ಲ ಮುರಿಯುತ್ತಿತ್ತು. ಹುಂ, ನನಗೆ 'ಪೌಡರ್' ಸಿಕ್ಕಿಬಿಟ್ಟರೆ! ಆದರೆ ಸಿಗುವುದು ಹೇಗೆ? ಕೊಂಡುಕೊಳ್ಳುವುದಕ್ಕೆ ಕಾಸೆಲ್ಲಿ? ದುರುಗವ್ವನ ದಯೆಯಿಂದ ಕಾಸು ಸಿಕ್ಕಿದರೆ! ಕಣ್ಣು ಮುಚ್ಚಿಕೊಂಡು ದುರುಗವ್ವನನ್ನು ಪ್ರಾರ್ಥಿಸಿದಳು, 'ಪೌಡರಿ'ಗೆ ದುಡ್ಡು ಕೊಡೆಂದು.

ಸಂಜೆಯನ್ನು ಸ್ವಲ್ಪಸ್ವಲ್ಪವಾಗಿ ಹೊರದೂಡುತ್ತ ಕತ್ತಲೆ ಜಗತ್ತನ್ನು ಮುತ್ತಿದ್ದು ಕೂಡ ಅರಿವಾಗಲಿಲ್ಲ ನಿಂಗಿಗೆ. ಮದುವೆ ಮನೆ, ಎಷ್ಟೋ ಜನ ಬರುತ್ತಿದ್ದರು. ಎಷ್ಟೋ ಜನ ಹೋಗುತ್ತಿದ್ದರು, ಆದರೆ ಒಂದರ ಗಮನವೂ ಇಲ್ಲ ಅವಳಿಗೆ. ತನ್ನ ಯೋಚನೆಯಲ್ಲೇ ಮುಳುಗಿದ್ದಳು ಅವಳು.

"ಲೇ ಸಿಂಗೀ, ಈ ಕೂಸ್ನ ಒಂದ್ನಿಮಿಷ ಎತ್ಕೊಂಡಿರು, ಬಂದ್ಬಿಡ್ತೀನಿ"

ಸಿಂಗಿ ತಲೆಯೆತ್ತಿ ನೋಡಿದಳು. ಮನೆಯೊಡತಿಯ ಎರಡನೆಯ ಮಗಳು— ಸರೋಜಳ ತಾಯಿ— ತನ್ನ ಮಗುವನ್ನು ಅವಳ ಕಡೆ ಚಾಚಿದ್ದಳು. ಮೊದಲ ಮಗಳು ಅಳಿಯ ಊರಿಗೆ ಹೋಗಲು ಗಾಡಿ ತಂದು ನಿಲ್ಲಿಸಿದ್ದರು. ಎಲ್ಲರಿಗೂ ಅವರನ್ನು ಬೀಳ್ಕೊಡುವ ಸಂಭ್ರಮ.

ನಿಂಗಿ ಯಂತ್ರದಂತೆ ಕೈ ನೀಡಿ ಮಗುವನ್ನೆತ್ತಿಕೊಂಡಳು. ಮಗುವಿನ ತಾಯಿ ಒಳಗೆ ಹೋದರು. ಮಗು ಅಳಲಾರಂಭಿಸಿತು. ಅದನ್ನು ರಮಿಸಲು ಅದರ ಕೈಯಲ್ಲಿ ಚಪ್ಪಾಳೆ ಹೊಡೆಸಲೆಂದು ಅದರ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡಳು. ಮರುಕ್ಷಣವೇ ಹಾವನ್ನು ತುಳಿದವಳಂತೆ ಬೆಚ್ಚಿಬಿದ್ದಳು. ಮಗುವಿನ ಕೈಯಲ್ಲಿ ಹೊಳೆಯುತ್ತಿದ್ದ ರೂಪಾಯಿ! ಯಾರೋ ಹೋಗುವಾಗ ಮಗುವಿಗೆ ಕೊಟ್ಟು ಹೋದರೆ.

ನಿಂಗಿಗೆ ಮೈ ನಡುಗಿತು. ದುರಗವ್ವ ಆಗಲೇ ತನ್ನ ಮೇಲೆ ಕರುಣೆ ಯಿಟ್ಟು ಪೌಡರಿಗೆ ದುಡ್ಡು ಕಳುಹಿಸಿದಳೇ? ಆದರೆ ರೂಪಾಯಿ ಮಗುವಿನ ಕೈಯಲ್ಲಿದೆ. ಅದನ್ನು ಹೇಗೆ ತೆಗೆದುಕೊಳ್ಳುವುದು? ಪುಟ್ಟ ಕೂಸಿನ

ಕೈಯಲ್ಲಿರುವ ನಾಣ್ಯ ಮುಟ್ಟುವುದೇ? ಆದರೆ ದುರುಗಪ್ಪನೇ ಆದನ
ಕಳುಹಿಸಿದ್ದರೆ, ಅದನ್ನು ತೆಗೆದುಕೊಳ್ಳದಿದ್ದರೆ ಅವಳಿಗೆ ಕೋಪ ಬರುವುದಿಲ್ಲವೇ
ಸುತ್ತ ದೃಷ್ಟಿ ಹರಿಸಿದಳು ನಿಂಗಿ. ಆಗಲೇ ಕತ್ತಲಾಗಿತ್ತು, ಆಕಾಶದಲ್ಲಿಯು
ಮೋಡ ಕವಿಯುತ್ತಿತ್ತು. ತಕ್ಷಣ ಓಡಿಹೋದರೆ ಅಂಗಡಿ ಇನ್ನೂ
ಮುಚ್ಚಿರುವುದಿಲ್ಲ. ಪೌಡರ್ ಕೊಂಡುಕೊಳ್ಳಬಹುದು. ನಾಳೆ ಬೆಳಿಗ್ಗೆ
ಇಲ್ಲಿಗೆ ಬರುವಾಗ ಪೌಡರ್ ಹಾಕಿಕೊಂಡು ಬಂದು ಈ ಹುಡುಗಿಯರ ಜಂಭ
ಮುರಿಯಬಹುದು. ಇಲ್ಲದಿದ್ದರೆ ಕಾಸು ಸಿಗುವ ಬಗೆ ಹೇಗೆ?

"ಲೇ ನಿಂಗಿ, ಕೂಸು ತಾ ಇಲ್ಲಿ."

ಮಗುವಿನ ತಾಯಿ ಕೂಗುತ್ತಿದ್ದರು. ನಿಂಗಿ ಎಚ್ಚೆತ್ತಳು! ಮಗುವಿನ
ಹೂವಿನಂತಹ ಕೈಯನ್ನು ಬಿಡಿಸಿ ರೂಪಾಯಿಯನ್ನು ತೆಗೆದುಕೊಂಡು
ಮಗುವನ್ನು ಕರೆದುಕೊಂಡು ಹೋಗಿ ತಾಯಿಯ ಬಳಿ ಬಿಟ್ಟು, ಓಡಿಬಿಟ್ಟಳು.

ಪೇಟೆಗೆ ಬಂದದ್ದಾಯಿತು. ಆ ಅಂಗಡಿಗಳನ್ನು ನೋಡಿಯೇ ಅಲ್ಲಿ
ಹೋಗಲು ಹೆದರಿದಳು ನಿಂಗಿ. ಕಣ್ಣು ಕುಕ್ಕುವ ಪ್ರಭೆಯ ದೀಪಗಳು, ಥಳ
ಥಳ ಹೊಳೆಯುವ ಮೇಜು, ಕುರ್ಚಿ, ಗಾಜಿನ ಬೀರು, ಬಣ್ಣಬಣ್ಣದ ಪೆಟ್ಟಿಗೆ
ಗಳು, ಆಧುನಿಕ ಕಾಲದ ವೇಷ ತೊಟ್ಟು ಪಟಪಟ, ಚಟಚಟ ಶಬ್ದಮಾಡುತ್ತ
ಓಡಾಡುವವರ ಗುಂಪುಗಳು, ಇವುಗಳ ಮಧ್ಯೆ ದಿಗ್ಭ್ರಮೆಯಾಯಿತು ಅವಳಿಗೆ.
ಅಂಗಡಿಯವರನ್ನು ಮಾತನಾಡಿಸುವ ಧೈರ್ಯ ಮಾಡುವುದೂ ಕಷ್ಟವಾಯಿತು.
ಕೊನೆಗೆ ಜನ ಕಡಮೆ ಇದ್ದ ಒಂದು ಅಂಗಡಿಯನ್ನು ಹೊಕ್ಕಳು.

"ಏನು ಬೇಕಮ್ಮ ಹುಡುಗಿ?"

"ಪೌಡರ್ರು"

"ಎಂಥ ಪೌಡರ್ರಮ್ಮ"

"ಮೊಕಕ್ಕೆ ಇಕ್ಕೊಂಡ್ರೆ ಕಪ್ಪು ಮೊಕ ಬೆಳ್ಳಗೆ ಕಾಣ್ತದಲ್ಲ ಅದು."
ಅಂಗಡಿಯವನು, ಅಲ್ಲಿದ್ದ ಜನ ಗೊಳ್ಳನೆ ನಕ್ಕುಬಿಟ್ಟರು.

"ಯಾರಿಗೆ, ನಿನಗೇನಮ್ಮ?"

"ಹೂಂ....ಅಲ್ರ....ನಮ್ಮನೆ ಅವ್ವೋರ್ಗೆ"

"ಯಾವ ಪೌಡರ್ ಬೇಕಮ್ಮ?"

"ಏಳಿಸಲ್ರ, ಮೊಕಕ್ಕೆ ಆಕ್ಕೊಳ್ಳೋದು"

"ಹೌದಮ್ಮ, ಜಾಸ್ಮಿನ್ ಪೌಡರ್ ಬೇಕೆ, ರೋಸ್ ಬೇಕೆ, ವೈಯೊಲೆಟ್ ಬೇಕೇ, ಯಾವ ತರಹದ್ದು ಬೇಕು ಅಂತ"

ನಿಂಗಿಗೆ ದಿಕ್ಕು ತೋರದಾಯಿತು. ಸುಮ್ಮನೆ ಬೆಪ್ಪಾಗಿ ನಿಂತಳು. ಕೊನೆಗೆ ಅಂಗಡಿಯವನೇ ಅವಳ ದುಡ್ಡು ತೆಗೆದುಕೊಂಡು ಯಾವುದೋ ಒಂದು ಡಬ್ಬಿ ಕೊಟ್ಟ.

ನಿಂಗಿಯ ವ್ಯಾಪಾರ ಮುಗಿಯುವ ಹೊತ್ತಿಗೂ ದಡದಡ ಮಳೆ ಸುರಿಯುವುದಕ್ಕೂ ಸರಿಹೋಯಿತು. ನಿಂಗಿಗೆ ಆತುರ, ಮನೆಗೆ ಓಡಿಹೋಗ ಬೇಕು, ತಾಯಿಗೆ ತೋರಿಸಬೇಕು ಎಂದು. ತಾಯಿಗೆ ದುಡ್ಡು ರಸ್ತೆಯಲ್ಲಿ ಸಿಕ್ಕಿತೆಂದು ಹೇಳಿಬಿಡುವುದೆಂದು ನಿಶ್ಚಯಿಸಿದಳು. ತಾನು ರೂಪಾಯಿಯನ್ನು ಮಗುವಿನ ಕೈಯಿಂದ ತೆಗೆದುಕೊಂಡದ್ದು ತಿಳಿದರೆ ಚೆನ್ನಿ ತನ್ನನ್ನು ಸಿಗಿದು ಬಿಡುವಳೆಂದು ಅವಳಿಗೆ ಗೊತ್ತಿತ್ತು. ಆದುದರಿಂದ ರಸ್ತೆಯಲ್ಲಿ ರೂಪಾಯಿ ಸಿಕ್ಕಿತೆಂದು ಹೇಳುವುದೇ ಉತ್ತಮವೆಂದು ತೋರಿತು. ಹಾಳುಮಳೆ! ಈ ಹೊತ್ತಿಗೇ ಬರಬೇಕೇ! ಮಳೆಯಲ್ಲೇ ಹೋದರೆ ಪೌಡರ್ ಏನಾಗುವುದೋ! ಮೆಲ್ಲನೆ ಡಬ್ಬಿಯ ಮುಚ್ಚಳ ತೆರೆದಳು. ಮಧುರವಾದ ವಾಸನೆ ಡಬ್ಬಿಯಿಂದ ತೇಲಿಕೊಂಡು ಬಂತು. ಮತ್ತೆ ಡಬ್ಬಿಯನ್ನು ಮುಚ್ಚಿಬಿಟ್ಟಳು.

ಮಳೆ ಸ್ವಲ್ಪ ಕಡಮೆಯಾಗುವ ಲಕ್ಷಣ ತೋರುತ್ತಲೇ ಓಡಿದಳು ನಿಂಗಿ. ಆಗತಾನೇ ಮಳೆ ಕಡಮೆಯಾದದ್ದರಿಂದ ಜನಸಂಚಾರ, ವಾಹನ ಸಂಚಾರ ಹೆಚ್ಚಾಗಿತ್ತು. ನಿಂಗಿ ಓಡುತ್ತ ಓಡುತ್ತಲೇ ಕನಸು ಕಾಣುತ್ತಿದ್ದಳು. ಬೆಳಗ್ಗೆ ಏಳುತ್ತಲೇ ಸ್ನಾನ ಮಾಡಬೇಕು. ಅಮ್ಮ ಬೇಡ ಎನ್ನಬಹುದು, ಸ್ನಾನಕ್ಕೆ ಇವತ್ತೇನು ಯುಗಾದಿಯೇ ದೀಪಾವಳಿಯೇ? ಎಂದಾಳು. ಆದರೂ ಹಠ ಹಿಡಿದು, ತಣ್ಣೀರಿನಲ್ಲಾದರೂ ಸ್ನಾನಮಾಡಿ, ಆ ಮೇಲೆ ಪೌಡರ್ ಹಾಕಿಕೊಳ್ಳಬೇಕು. ಆದರೆ ಅದನ್ನು ಹಾಕಿಕೊಳ್ಳುವುದು ಹೇಗೆ? ಓ, ಅಮ್ಮನೇ ಹಾಕುತ್ತಾಳೆ. ಅವಳಿಗೆ ಎಲ್ಲ ಗೊತ್ತಿದೆ. ಒಗೆದ ಬಟ್ಟೆ ಹಾಕಿಕೊಳ್ಳಬೇಕು. ಆದರೆ, ಒಗೆದ ಬಟ್ಟೆಯೇ ಇಲ್ಲವಲ್ಲ! ಹೂಂ, ಈಗ ಹೋಗಿ ಆ ಕತ್ತಲಲ್ಲೇ ಒಗೆದುಹಾಕಬೇಕು, ಬೆಳಗ್ಗೆ ಹೊತ್ತಿಗೆ ಒಣಗುತ್ತದೆ. ಅದನ್ನು ಹಾಕಿಕೊಂಡು ಅಮ್ಮಾವರ ಮನೆಗೆ ಹೋಗಿ ಆ ಹುಡುಗಿಯರಿಗೆ ಹೇಳಬೇಕು— "ನೋಡಿ. ಸರೋಜಮ್ಮನ ಮೊಕದ ಹಾಗೆ ನನ್ಮೊಕಾನೂ ಬೆಳ್ಳಗೈತೆ" ಅಂತ.

ಆಗ ತನ್ನನ್ನು ಅವರು ಆಟಕ್ಕೆ ಸೇರಿಸಿಕೊಳ್ಳುತ್ತಾರೆ. ಅವರನ್ನೆಲ್ಲ ಸೋಲಿಸಿ ಅವರ ಅಹಂಕಾರ ಮುರಿದು—

"ಏ ಹುಡ್ಗೀ, ದಾರೀ ಬಿಡು"

ಜಟಕಾ ಓಡಿಸುವವನು ಕೂಗಿದ. ಗಾಬರಿಯಿಂದ ಒಂದು ಕಡೆಗೆ ಸರಿದಳು ಸಿಂಗಿ; ಕಾಲುಜಾರಿತು. ಕೆಳಕ್ಕೆ ಬಿದ್ದಳು. ಪಕ್ಕದಲ್ಲಿ ಸಾಗಿತು ಜಟಕಾ.

ಎದ್ದು ಮೈ ಕೈ ನೋಡಿಕೊಂಡಳು ಸಿಂಗಿ. ಲಂಗವೆಲ್ಲ ಮಣ್ಣು, ಕೆಸರು ಕಾಲಿನಲ್ಲಿ ಚರ್ಮ ಕಿತ್ತುಹೋಗಿ ರಕ್ತ ಸುರಿಯುತ್ತಿತ್ತು. ಮುಖ ಉರಿಯುತ್ತಿತ್ತು. ಪೌಡರ್ ಡಬ್ಬ ದೂರ ಬಿದ್ದಿತ್ತು. ಕುಂಟುತ್ತಹೋಗಿ ಅದನ್ನೆತ್ತಿಕೊಂಡು ನಿಧಾನವಾಗಿ ಮನೆಯ ಕಡೆ ನಡೆದಳು.

ಮನೆಸೇರುವ ಹೊತ್ತಿಗೆ ಪೌಡರ್ ತಂದ ಹೆಮ್ಮೆಯಲ್ಲಿ ಸಿಂಗಿಗೆ ತನ್ನ ನೋವು ಮರೆತಿತ್ತು. 'ಅವ್ವಾ' ಎಂದು ಕೂಗಿದಳು.

ಮಗಳ ಧ್ವನಿ ಕೇಳುತ್ತಲೇ ಹೊರಗೆ ಬಂದಳು ಚೆನ್ನಿ. "ಅಲ್ಲೇ ಯಾರ್ಮನೇ ಆಳ್ಮಾಡಾಕೆ ಉಟ್ಟಿಂದ್ಯೇ ಮಾರಿ? ಕಳ್ತನಾ ಮಾಡಾಕೆ ನಾಚ್ಕೆ ಆಗಾಕಿಲ್ವಾ ನಿನ್ಗೆ?" ಎಂದು ಬೈಗುಳದ ಸುರಿಮಳೆಯನ್ನೇ ಸುರಿಸಿದಳು.

ಸಿಂಗಿ ಅಪ್ರತಿಭಳಾಗಿ ಅಲ್ಲಿಯೇ ನಿಂತಳು. ತಲೆ ತಿರುಗುತ್ತಿತ್ತು. ಮೈ ನಡುಗುತ್ತಿತ್ತು. ಚೆನ್ನಿ ಹತ್ತಿರ ಬಂದು ಅವಳ ರಟ್ಟೆ ಹಿಡಿದುಕೊಂಡು ಕೇಳಿದಳು— "ಮೊಗದ್ಮೈಲಿದ್ದಾಸನ್ನ ಕಿತ್ಕೊಳ್ಳಾಕೆ ಮನಸ್ಸೆಂಗೆ ಬಂತೇ ಚಂಡಾಲೀ?"

"ಅದು.... ಅದು.... ರಸ್ತೇಲಿ ... ಸಿಕ್ತವ್ವ"

"ಊಂ, ಸಿಕ್ತು ನಿನ್ತಲೆ. ಅಮ್ಮಾವ್ರು ಮೊಗಾನ ನಿನ್ಕೈಲಿ ಕೊಟ್ಟಾಗ ನೀನು ಅದರ ರೂಪಾಯಿ ತೊಗೊಂಡ್ಯಂತೆ, ಸರೋಜಮ್ಮ ನೋಡಿದಳಂತೆ."

ಸಿಂಗಿ ಮೂಕಳಾಗಿದ್ದಳು. ಚೆನ್ನಿ ಮತ್ತೆ ಗುಡುಗಿದಳು—"ಕಾಸೇನ್ಮಾಡ್ದಿ ಕೊಟ್ಬಿಡೇ ಮೂದೇವಿ."

"ಪೌಡರ್.... ತಕೊಂಡೆ.... ಕಣವ್ವ," ಉಡಿಯಿಂದ ಡಬ್ಬಿ ತೆಗೆಯುತ್ತ ಹೇಳಿದಳು ಸಿಂಗಿ.

"ಪೌಡರ್ಯಾಕೆ ನಿನ್ಗೆ? ಕುಣಿತಕ್ಹೋಗ್ತಿಯೇನು?" ಪೌಡರ್ ಡಬ್ಬಿ ಕಿತ್ತುಕೊಂಡು ಗರ್ಜಿಸಿದಳು ಚೆನ್ನಿ. "ನಡಿ ಅಮ್ಮಾವರ್ಮನೀಗೆ."

"ಅವ್ವಾ....ಮೊಕ ಬೆಳ್ಳಗೆ...." ಬಿಕ್ಕುತ್ತ ಉಸುರಿದಳು ನಿಂಗಿ.

"ಮೊಕ ಬೆಳ್ಗಾಯ್ತದಾ ನಿನ್ಯೋಗ್ತೀಗೆ? ಕಳ್ತನ ಮಾಡಿ ಮೊಕ ಇನ್ನೂ ಕಪ್ಪಿಗೆ ಮಾಡ್ಕೊಂಡೇ!" ಚೆನ್ನಿ ಅವಳನ್ನು ದರದರ ಎಳೆಯುತ್ತ ಹೇಳಿದಳು.

ಮದುವೆಮನೆ ತಲುಪಿಯಾಯಿತು. ಅಮ್ಮಾವರು, ಅವರ ಮಗಳು, ಸರೋಜ ಎಲ್ಲ ನೆರೆದರು. ಮತ್ತೆ ಕಳ್ಳತನದ ಕತೆಯ ಪಠನವಾಯಿತು. ಅಮ್ಮಾವರ ಮಗಳು ಒಳಗೆ ಹೋಗಿಬರುವ ಆತುರದಲ್ಲಿ ಒಂದೇ ನಿಮಿಷದ ಮಟ್ಟಿಗೆ ಮಗುವನ್ನು ನಿಂಗಿಯ ಕೈಗೆ ಕೊಟ್ಟದ್ದು, ಆ ನಿಮಿಷದಲ್ಲಿ ನಿಂಗಿ ಮಗುವಿನ ದೊಡ್ಡಮ್ಮ ಮಗುವಿಗೆ ಕೊಟ್ಟಿದ್ದ ರೂಪಾಯಿಯನ್ನು ಅಪಹರಿಸಿದ್ದು ದೂರದಲ್ಲಿ ನಿಂತಿದ್ದ ಸರೋಜ ಅದನ್ನು ನೋಡಿದ್ದು, ಮೊದಲು ರೂಪಾಯಿಯ ವಿಷಯವನ್ನೇ ಮರೆತಿದ್ದ ತಾಯಿ ಆ ಮೇಲೆ ನೋಡಿದಾಗ ನಾಪ್ಯಾಮಾಯ ವಾಗಿದ್ದದ್ದು, ಸರೋಜ ಸಾಕ್ಷ್ಯಕೊಟ್ಟದ್ದು ಎಲ್ಲದರ ವಿವರಣೆ ಆಯಿತು. ಸರೋಜ ತಮ್ಮ ತಾಯಿಯ ಕಾಲಿಗೆ ಒರಗಿಕೊಂಡು ಎಲ್ಲವನ್ನೂ ಕೇಳು ತ್ತಿದ್ದಳು. ನಿಂಗಿಗೆ ಹೊಟ್ಟೆ ಇರಿದಂತೆ ಆಗುತ್ತಿತ್ತು. ಮಧ್ಯೆಮಧ್ಯೆ ಚೆನ್ನಿಯ ಮಾತಿನ ಸಿಡಿಲು ಅವಳ ಮೇಲೆರಗುವುದು.

"ಏನ್ಮಾಡ್ದೆ ರೂಪಾಯ್ನ, ಕಳ್ಳೀ?" ಅಮ್ಮಾವರು ದರ್ಪದಿಂದ ಕೇಳಿದರು.

ನಿಂಗಿ ತಲೆ ತಗ್ಗಿಸಿ ಕಣ್ಣೀರಿಡುತ್ತಿದ್ದಳು.

"ಮಾತಾಡೇ ಶನಿ," ಚೆನ್ನಿ ಅಪ್ಪಣೆ ಮಾಡಿದಳು. ಎಲ್ಲ ಕಡೆಯೂ ಒಳ್ಳೇ ಹೆಸರು ತೆಗೆದುಕೊಂಡಿದ್ದ ತನಗೆ ಈ ಮಗಳಿಂದ ಇಲ್ಲಿ ಅಪವಾದ ಬಂದಿತಲ್ಲ. ಎಂದು ವ್ಯೆಯ್ಯುರಿಯುತ್ತಿತ್ತು ಅವಳಿಗೆ.

ನಿಂಗಿ ಮಾತನಾಡಲಿಲ್ಲ. ಕೊನೆಗೆ ಚೆನ್ನಿಯೇ ಹೇಳಿದಳು: "ಅವಳಿಗೆ ಪೌಡರ್ ಬೇಕು ಅಂತ ಆಸೆ ಆಯ್ತಂತ್ರವ್ವ, ಪೌಡರ್ ಕೊಂಡ್ಕೊಂಡ್ಬಂದವ್ಳೆ."

"ಓಹೋ, ಹಾಗೋ, ಮುಂದೆ ಬಹಳ ಹೆಸರು ಸಂಪಾದಿಸ್ತಾಳೆ ಬಿಡು." ಅಮ್ಮಾವರು ಭವಿಷ್ಯ ನುಡಿದರು.

"ಅವಳ್ನ ಈ ಸಲ್ಕೆ ಕ್ಷಮಿಸ್ಸಿ ಬಿಡ್ರಪ್ಪ, ಅರೀದ ಮಗು. ಮನೆಗೋದ್ಮೇಲೆ ಮಾಡ್ತೀನಿ ಅವಳ್ಗೆ ಯಮಶಿಕ್ಷೆ," ಚೆನ್ನಿ ಅಂಗಲಾಚಿದಳು. ನಿಂಗಿಗೆ ಮೈ ಥರಥರ ಕಂಪಿಸಿತು. ಮನೆಗೆ ಹೋದ ಮೇಲಿನ ಅನುಭವವನ್ನು ನೆನೆದು. ಆದರೂ—? ಅವರು ಕ್ಷಮಿಸಿಬಿಟ್ಟರೆ ಪೌಡರ್ ಡಬ್ಬಿ ತನಗೇ ಉಳಿಯುತ್ತದೆ!

"ಲೇ ದರಿದ್ರದೋಳೆ, ಅಮ್ಮಾವರ ಕಾಲಿಗೆ ಬೀಳು. ಇಲ್ದೇ ಇದ್ರೆ, ಪೋಲೀಸ್ಗೆ ಕೊಟ್ಬಾರು," ಚೆನ್ನಿ ಆಜ್ಞಾಪಿಸಿದಳು.

ಅಮ್ಮಾವರಿಗೆ ನಮಸ್ಕಾರ ಮಾಡಿ ಕ್ಷಮೆ ಬೇಡಿದ್ದಾಯಿತು. ಅವರಿಂದ, "ಎಂದಾದ್ರೂ ನೀನು ಜೈಲಿಗೆ ಹೋಗೋಳೆ. ನಾನು ಕಳಸ್ದೇ ಬಿಟ್ರೆ ತಾನೇ ಏನು? ಚೆನ್ನಿ ಮುಖ ನೋಡಿ ಸುಮ್ನಿದ್ದೇನೆ," ಎಂದು ಆಶೀರ್ವಾದ ಪಡೆದದ್ದೂ ಆಯಿತು.

"ಕೋ ನನ್ತಾಯಿ" ಚೆನ್ನಿಯ ಧ್ವನಿ. ನಿಂಗಿ ಸೂಜಿಕಲ್ಲೆಳೆದ ಕಬ್ಬಿಣದಂತೆ ತಿರುಗಿದಳು, ಚೆನ್ನಿ ಪೌಡರ್ ಡಬ್ಬಿಯನ್ನು ಸರೋಜಳಿಗೆ ನೀಡಿದಳು.

"ಅವ್ವಾ....ಅವ್ವಾ....ಪೌಡರ್ ಡಬ್ಬ...." ಎಂದು ಅಂಗಲಾಚುತ್ತ ಬೇಡುತ್ತ ನುಗ್ಗಿದಳು ನಿಂಗಿ. ರಪ್ಪನೆ ಬೆನ್ನಿನ ಮೇಲೆ ಏಟು ಬಿತ್ತು. "ನಾಚ್ಕೆ ಆಗೊಲ್ವ ಅದನ್ನ ಕೇಳ್ಳಿಕ್ಕೆ, ಶನಿ" ಎನ್ನುತ್ತ ಅವಳನ್ನು ಎಳೆದುಕೊಂಡು ಹೋದಳು ಚೆನ್ನಿ.

ಆಗ ತಾನೇ ಬಂದಿದ್ದ ಪಕ್ಕದ ಮನೆಯವರಿಗೆ ಅಮ್ಮಾವರು ಹೇಳುತ್ತಿದ್ದರು— "ನೋಡಿ ಸಾವಿತ್ರಮ್ನೋರೆ,ಗಂಡಿಗೆ ಕೊಟ್ಟ ವರದಕ್ಷಿಣೆ ಮರೋಪಚಾರ ನಾಲ್ಕು ಸಾವಿರ ಅಲ್ಲದೆ ಮದುವೆಗೇ ಆರು ಸಾವಿರ ರೂಪಾಯಿ ಖರ್ಚಾಗಿ ಹೋಯಿತು." ಅವರ ಧ್ವನಿಯಲ್ಲಿ ವಿಷಾದಕ್ಕಿಂತ ಹೆಮ್ಮೆಯೇ ಮೂಡಿತ್ತು. ಅವರ ಆ ಮಾತಿನಲ್ಲಿ ನಿಂಗಿಯ ಮೌನದ ಅಳು ಕೇಳಿಸಲಿಲ್ಲ. ಕಗ್ಗತ್ತಲಲ್ಲಿ ತನ್ನ ತಾಯಿ ದರದರ ಎಳೆದುಕೊಂಡು ಹೋಗುತ್ತಿರುವಾಗ ಸರಿಯಾಗಿ ಅಳುವುದಕ್ಕೆ ಕೂಡ ಸಾಧ್ಯವಿರಲಿಲ್ಲ, ನಿಂಗಿಗೆ. ಯಾರಿಗೆ ಗೊತ್ತಾಗಬೇಕು ಅವಳ ದುಃಖ?

ಮಹತ್ವಪೂರಿತ ಭೇಟಿ

ಊರಲ್ಲೆಲ್ಲ ಗೊಂದಲವೋ ಗೊಂದಲ. ಒಂಭತ್ತು ಗಂಟೆಯಾದರೂ ಹಾಸಿಗೆಯನ್ನು ಬಿಟ್ಟೇಳದ ನಮ್ಮೂರಿನವರು ಬೀಳುತ್ತಿದ್ದ ಮಳೆ ಹನಿಗಳನ್ನೂ ಗಮನಿಸದೆ ಮೂಗಿನ ಮೇಲೆ ಬೆರಳಿಟ್ಟು ಬೀದಿಬೀದಿಯಲ್ಲಿ ನಿಂತಿದ್ದರು. ಕೆಲವರು ಪಿಸುಪಿಸ ತಮ್ಮ ಪಕ್ಕದವರೊಡನೆ ಮಾತನಾಡುವರು. ಕೆಲವರು ಹುಬ್ಬು ಗಂಟುಹಾಕಿ ಯೋಚನೆಯಲ್ಲಿ ಮಗ್ನರಾಗಿದ್ದರು. ಕೆಲವರು ನಶ್ಯವನ್ನೇರಿಸಿ ತಮ್ಮ ಮೆದುಳನ್ನು ಚುರುಕುಗೊಳಿಸಲು ಯತ್ನಿಸುತ್ತಿದ್ದರು.

ನಮ್ಮೂರ ಆಚಾರ್ರ ಮನೆಯ ಜಗುಲಿ ಮೇಲೆ ನರಸಿಂಹಮೂರ್ತ್ಯಾಚಾರ್ಯರೂ. ನಾರಾಯಣ ಶಾಸ್ತ್ರಿಗಳೂ ಚರ್ಚೆಯಲ್ಲಿ ಪ್ರೈಮರೆತಿದ್ದರು. ಒಳಗಿನಿಂದ ಆಚಾರ್ರ ಕುಟುಂಬ ಸೀತಾಬಾಯಿ "ಕಾಫಿ ಆಗಿದೆ" ಎಂದು ಕೂಗಿದಾಗಲೇ ಇಬ್ಬರಿಗೂ ಪ್ರಜ್ಞೆ ಬಂದದ್ದು.

"ಶಾಸ್ತ್ರಿಗಳಿಗೆ. ನನಗೆ ಇಲ್ಲಿಗೇ ಕಾಫಿ ತಂದುಬಿಡೇ" ಆಚಾರ್ರು ಕೂಗಿದರು.

"ಛೇ, ನನಗೆ ಕಾಫಿ ಅಭ್ಯಾಸವೇ ಇಲ್ಲ, ಆಚಾರ್ರೆ" ನಶ್ಯ ಏರಿಸುತ್ತ ಶಾಸ್ತ್ರಿಗಳು ಹೇಳಿದರು.

"ಚಿಂತೆಯಿಲ್ಲ ಶಾಸ್ತ್ರಿಗಳೇ. ಕಾಫಿ ಕುಡಿದರೆ ನಿಜಾಂಶ ಹೊಳೇಬಹುದು ನೋಡಿ, ಕಾಫಿ ಮೆದುಳಿಗೆ ಎಂಥಾ ಟಾನಿಕು ಅಂತೀರಿ"

"ನನ್ನ ನಶ್ಯವೇ ಸಾಕಪ್ಪ ನನಗೆ"

ಅಷ್ಟರಲ್ಲಿ ಸೀತಮ್ಮನವರು ಎರಡು ಲೋಟ ಕಾಫಿಯನ್ನು ಹಿಡಿದುಕೊಂಡು ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ಪ್ರವೇಶಿಸಿದರು. ಶಾಸ್ತ್ರಿಗಳು ಸುಮ್ಮನಾದರು.

ಕಾಫಿ ಲೋಟವನ್ನು ಬರಿದುಮಾಡಿದುದೂ ಆಯಿತು. ಪ್ರಶ್ನೆ ಮಾತ್ರ ಹಾಗೇ ಉಳಿಯಿತು.

"ಅಲ್ಲ ಶಾಸ್ತ್ರಿಗಳೇ, ಇದು ನಿಜವಾದರೆ..........."

"ನಿಜವಾದರೆ ಅಂತ ಮೂಗೆಳೆಯುವ ಹಾಗೆ ಇಲ್ಲವೇ ಇಲ್ಲ ಆಚಾರ್‍ರೇ. ಕಣ್ಣಾರೆ ಕಂಡವರು ಹೇಳಿದ್ದಾರೆ. ಇವತ್ತು ಬೆಳಿಗ್ಗೆ ವೆಂಕಟಕೃಷ್ಣರಾಯರ ಕಾರು ವರಾಹ ಮೂರ್ತಿಗಳ ಮನೆ ಎದುರಿಗೆ ನಿಂತಿದ್ದನ್ನು ನಮ್ಮ ಪಕ್ಕದ್ಮನೆ ಗೋಪೂನ ಮೂರನೇ ಮಗ ಕಿಟ್ಟೂನ ಭಾವಮೈದ ಕಂಡನಂತೆ ಕಣ್ಣಾರೆ."

"ಹಾಗಾದ್ರೆ ಇದರಲ್ಲಿ ಏನೋ ಇದ್ದೇ ಇರಬೇಕು ಶಾಸ್ತ್ರಿಗಳೇ."

"ಅಲ್ಲವೇ? ಮೂವತ್ತು ವರ್ಷದಿಂದ ಒಬ್ಬರ ಮುಖ ಇನ್ನೊಬ್ಬರು ನೋಡೋದಿಲ್ಲ. ಅಂಥಾದ್ದು ಇವತ್ತು ಬೆಳಗ್ಗೆ ಎದ್ದವರೇ ವೆಂಕಟಕೃಷ್ಣ ರಾಯರು ವರಾಹಮೂರ್ತಿಗಳ ಮನೆಗೆ ಓಡಬೇಕಾದ್ರೆ..........."

'ವಾರ್ತಾನಿಧಿ' ಪತ್ರಿಕೆಯ ಬಾತ್ಮೀದಾರ ರಾಮಸ್ವಾಮಿ ಶಾಸ್ತ್ರಿಗಳ ಕಣ್ಣಿಗೆ ಗೋಚರಿಸುತ್ತಲೇ, ತಾವು ಆಡುತಿದ್ದ ವಾಕ್ಯವನ್ನು ಮುಗಿಸದೆ ಕೂಗಿದರು. ಶಾಸ್ತ್ರಿಗಳು-"ಬಾರಯ್ಯಾ ರಾಮಸ್ವಾಮಿ, ಕೂತುಕೋ."

"ಅಯ್ಯೋ, ಇಲ್ಲ ಶಾಸ್ತ್ರಿಗಳೇ. ಆಫೀಸ್ಗೆ ಓಡ್ತಾ ಇದ್ದೇನೆ."

"ಇಲ್ಲಿ ಬಾರಯ್ಯ; ಅದಿರ್ಲಿ, ಇದೇನು ವೆಂಕಟಕೃಷ್ಣರಾಯರ ಸಮಾಚಾರ?"

"ಸಾಯಂಕಾಲ ನಮ್ಮ ಪತ್ರಿಕೆ ಓದಿ ಶಾಸ್ತ್ರಿಗಳೇ."

"ಓ, ನಮ್ಮಂದೂ ತೆಗೆದ್ಯೋ ವರಸೆ. ಅಲ್ಲ, ಏನು ಸಮಾಚಾರಾಂತ?"

"ಸಮಾಚಾರವೆ? ಇಷ್ಟೇ ಸಮಾಚಾರ: ಇವತ್ತು ಬೆಳಿಗ್ಗೆ .... ಅಯ್ಯೋ. ಬೇಡಪ್ಪ, ಎಷ್ಟು ಕಷ್ಟಪಟ್ಟು ಸಂಪಾದ್ಸಿದ್ದೇನೆ ಇದನ್ನೆಲ್ಲಾ. ನೀವೆಲ್ಲಾದರೂ ಬಾಯ್ಬಿಟ್ಬಿಡಿ, ಆ 'ಸುದ್ದಿಯ ತವರ್‍ನೋ'ನೋ ಇಲ್ಲ 'ಸಮಾಚಾರ ಬೇಕೇ' ನೋನೋ ಅದನ್ನು ಹಾಕ್ಬಿಡ್ಲಿ. ಸರಿ ಹೋಗುತ್ತೆ."

"ಅಯ್ಯೋ, ನಾನೇನು ನೀನ್ಹೇಳಿದ್ದೆಲ್ಲಾ 'ಟಾಂ ಟಾಂ' ಮಾಡ್ತೀನಿ ಅಂದ್ಕೊಂಡ್ಯ? ಇಲ್ಲ ಹೇಳು."

"ಯಾರ್ಹತ್ರೂ ಬಾಯ್ಬಿಡ್ಬೇಡ್ರಪ್ಪ ಸದ್ಯ. ಇವತ್ಬೆಳಿಗ್ಗೆ ಆರು ಗಂಟೆಗೆ ವೆಂಕಟಕೃಷ್ಣರಾಯರ ಮನೆ ಜವಾನ ಜೋಗ ವರಾಹಮೂರ್ತಿಗಳ ಮನೆಗೆ

ಒಂದು ಕಾಗದ ತೆಗೆದುಕೊಂಡು ಹೋದ. ವರಾಹಮೂರ್ತಿಗಳು ಅವನ ಹತ್ರವೇ ವೆಂಕಟಕೃಷ್ಣರಾಯರಿಗೆ ಒಂದು ಕಾಗದ ಕಳುಹಿಸಿದರು. ಆ ಕಾಗದ ನೋಡಿದ ಹತ್ತು ನಿಮಿಷದಲ್ಲೇ ವೆಂಕಟಕೃಷ್ಣರಾಯರು ಕಾರಿನಲ್ಲಿ ವರಾಹಮೂರ್ತಿಗಳ ಮನೆಗೆ ಬಂದರು. ಆಗ ಏಳು ಗಂಟೆ. ಏಳೂವರೆ ಗಂಟೆಗೆ ಅಲ್ಲಿಂದ ಹೊರಟರು. ಇಷ್ಟು ಸಮಾಚಾರ."

"ಹೌದಪ್ಪ, ಆಪ್ರೆ ಯಾತಕ್ಕವರಲ್ಲಿಗೆ ಹೋದ್ದು?"

"ಅದೇ ಪತ್ತೆ ಆಗಿಲ್ಲ, ಶಾಸ್ತ್ರಿಗಳೇ. ಅದಕ್ಕೇ ಹೊರಟಿದ್ದೇನೆ ನಾನೂ. ಅಲ್ಲಿ ಇಲ್ಲಿ ಅಲದ್ರೆ ಏನಾದರೂ ತಿಳಿಯುತ್ತೇನೋ ಅಂತ."

"ಅಲ್ಲಯ್ಯಾ, ಮೂವತ್ತ್ವರ್ಷದಿಂದ ಒಬ್ಬರ್ನ ಕಂಡ್ರೆ ಇನ್ನೊಬ್ರಿಗೆ ವಾಕರಿಕೆ. ಅಂಥಾದ್ದು ...."ಶಾಸ್ತ್ರಿಗಳು ನುಡಿದರು.

ಆಚಾರ್ರು ತಮ್ಮ ದನಿ ಏರಿಸಿದರು—"ಏನು ರಾಮುಸ್ವಾಮಿ, ವೆಂಕಟಕೃಷ್ಣರಾಯರ ಲೆಕ್ಚರ್ ಯಾವತ್ತು ಎಷ್ಟೊತ್ತಿಗಿದ್ರೆ ಅವತ್ತೇ ಅಷ್ಟೇ ಹೊತ್ತಿಗೆ ವರಾಹಮೂರ್ತಿರಾಯರ ಲೆಕ್ಚರ್ ಇನ್ನೊಂದು ಕಡೆ. ಅವನು 'ನಮ್ಮ ಸಮಸ್ಯೆ' ಅಂತ ಮಾತಾಡಿದ್ರೆ ಇವನು 'ನಮ್ಮ ಗತವೈಭವ' ಅಂತ ಹೊಡೆಯೋನು; ಅವನು 'ಯುದ್ಧದ ವಿಮರ್ಶೆ' ಅಂತ ಹೊರಟರೆ ಇವನು 'ವಿಶ್ವಶಾಂತಿ' ಅಂತ ಭೇರಿ ಹೊಡೆಯೋನು. ಅವನು "ಸ್ತ್ರೀಯರ ಸ್ಥಿತಿ" ಅಂತ ಮಾತಾಡಿದ್ರೆ ಇವನು "ಬಾಲಕರ ಶಿಕ್ಷಣ" ಅಂತ ಮಾತಾಡೋನು. ಅಂಥವರು ಈಗ...."

ಶಾಸ್ತ್ರಿಗಳು ನಡುವೆ ಬಾಯಿಹಾಕಿದರು; "ಅಲ್ಲ ನಮ್ಮ ರಾಮು ಮದುವೇಲಿ ವೆಂಕಟಕೃಷ್ಣರಾಯರ್ಗೆ ಲಗ್ನಪತ್ರಿಕೆ ಕಳಿಸಿದೇ ಅಂತ ವರಾಹಮೂರ್ತಿಗಳು ಕೋಪಿಸ್ಕೊಂಡು ಬರ್ಲಿಲ್ಲ. ವರಾಹಮೂರ್ತಿಗಳಿಗೆ ಲಗ್ನಪತ್ರಿಕೆ ಕಳಿಸಿದೇ ಅಂತ ವೆಂಕಟಕೃಷ್ಣರಾಯರು ಬರಲಿಲ್ಲ."

ಆಚಾರ್ರು ಸುಮ್ಮನಿದ್ದರೆ ತಾನೇ—"ಅಲ್ಲ, ಶಾಸ್ತ್ರಿಗಳೇ, ಅವತ್ತು ದಶಾವತಾರದ ಹೆಸರು ಹೇಳ್ಬೇಕಾದ್ರೆ ವೆಂಕಟಕೃಷ್ಣರಾಯರು ವರಾಹಮೂರ್ತಿಗಳ ಹೆಸರು ಹೇಳಬೇಕಾಗತ್ತಲ್ಲಾಂತ ವರಾಹಾವತಾರವನ್ನೇ ಬಿಟ್ಟು ಬಿಟ್ರು."

"ಸರಿ, ನಾನು ಹೊರಡ್ತೇನೆ ಶಾಸ್ತ್ರಿಗಳೇ. ಬರ್ಲಾ ಆಚಾರ್ರೇ?"

ರಾಮುಸ್ವಾಮಿ ಹೊರಟುಹೋದ. ಶಾಸ್ತ್ರಿಗಳೂ ಎದ್ದರು. "ಬರ್ತೇನೆ ಆಚಾರ್ರೆ."

"ಯಾಕೆ ಶಾಸ್ತ್ರಿಗಳೇ ಹೊರಟ್ಬಿಟ್ರಿ?"

"ಮತ್ತೆ, ನರಕಚತುರ್ದಶೀ ದಿವ್ಸ ಮಾತಾಡ್ತಾ ಕೂತ್ರೆ ಆಗತ್ಯೇ?"

"ಹೊಸಪ್ಪ, ಇವತ್ತು ನಾನೂ ವೆಂಕಟಕೃಷ್ಣರಾಯರ ಮನೀಗೆ ದೇವರ ಪೂಜೆಗೆ ಹೋಗಬೇಕು."

ಶಾಸ್ತ್ರಿಗಳು ಹೊರಟು ಹೋದರು. ಆಚಾರ್ರು ಒಳಗೆ ಹೋದರು.

ನಮ್ಮ ಊರು—ಅದರ ಹೆಸರ ಗೊಡವೆ ಬೇಡ—ದೊಡ್ಡ ಊರೆಂದೇ ಹೇಳಬೇಕು. ಅಲ್ಲಿಯ ಪ್ರಮುಖರೆಂದರೆ ವರಾಹಮೂರ್ತಿಗಳು—ವೆಂಕಟ ಕೃಷ್ಣರಾಯರು. ಇಬ್ಬರಿಗೂ ಮೂವತ್ತು ವರ್ಷದಿಂದ ವೈಮನಸ್ಸು. ಅವರು ಯಾವಾಗಲೂ ಜಗಳವಾಡಿರಲಿಲ್ಲ. ಆದರೂ ಪ್ರತಿಸ್ಪರ್ಧೆಯಿಂದ ವೈಮನಸ್ಸು ಬೆಳೆದಿತ್ತು. ವರಾಹಮೂರ್ತಿಗಳು ಭಾರತ ಗತ ಸಂಸ್ಕೃತಿ ಉದ್ಧಾರಕ ಸಂಘ (ಭಾ. ಗ. ಸಂ. ಉ. ಸಂ.) ವನ್ನು ಸ್ಥಾಪಿಸಿ ಅದರ ಅಧ್ಯಕ್ಷರಾದ ದಿವಸವೇ ವೆಂಕಟಕೃಷ್ಣರಾಯರು ಭಾರತ ಪ್ರಗತಿ ಸಾಧಕ ಸೇವಾ ಸಂಘ (ಭಾ. ಪ್ರ. ಸಾ. ಸೇ. ಸಂ.) ವನ್ನು ಸ್ಥಾಪಿಸಿ ಅದರ ಅಧ್ಯಕ್ಷರಾದರು. ಒಬ್ಬರ ನೆರಳು ಇನ್ನೊಬ್ಬರಿಗೆ ಸೇರದು. ಅಂತಹುದರಲ್ಲಿ ವೆಂಕಟಕೃಷ್ಣರಾಯರು ನರಕ ಚತುರ್ದಶಿ ಬೆಳಿಗ್ಗೆ ವರಾಹಮೂರ್ತಿಗಳ ಮನೆಗೆ ಹೋದರೆಂಬ ಸುದ್ದಿ ನಮ್ಮ ಊರನ್ನೆಲ್ಲ ಅಲ್ಲೋಲಕಲ್ಲೋಲ ಮಾಡಿದ್ದು ಆಶ್ಚರ್ಯವಲ್ಲ.

ಊರ ಜನವೆಲ್ಲ ಸಂಜೆ ಪತ್ರಿಕೆಗಾಗಿ ಆತುರದಿಂದ ಕಾದಿದ್ದರು. ನಮ್ಮ ಊರಲ್ಲಿದ್ದುದೇ ಮೂರು ದೈನಂದಿನ ಪತ್ರಿಕೆಗಳು—ವಾರ್ತಾನಿಧಿ, ಸುದ್ದಿಯ ತವರು. ಸಮಾಚಾರ ಜೇಕೇ?

ವಾರ್ತಾನಿಧಿಯಿಂದ ಜನಕ್ಕೆ ತಿಳಿದುದು ಇಷ್ಟು:—

ಮಹತ್ವಪೂರಿತ ಭೇಟಿಯೇ?

(ನಮ್ಮ ಸ್ವಂತ ಬಾತ್ಮೀದಾರರಿಂದ)

ನಮ್ಮ ಊರಿನ ಭಾ. ಪ್ರ. ಸಾ. ಸೇ. ಸಂ. ದ ಅಧ್ಯಕ್ಷರಾದ ಶ್ರೀ ವೆಂಕಟ ಕೃಷ್ಣರಾಯರು ಭಾ. ಗ., ಸಂ. ಉ. ಸಂ. ದ ಅಧ್ಯಕ್ಷರಾದ ಶ್ರೀ ವರಾಹ ಮೂರ್ತಿಗಳನ್ನು ಇಂದು ಬೆಳಿಗ್ಗೆ ೭ ಗಂಟೆಗೆ ಅವರ ಮನೆಯಲ್ಲಿ ಭೇಟಿ ಮಾಡಿ

ದರು. ಬೆಳಗ್ಗೆ ೬ ಗಂಟೆಗೆ ಶ್ರೀ ವೆಂಕಟಕೃಷ್ಣರಾಯರು ಜವಾನ ಜೋರ ಶ್ರೀ ವರಾಹಮೂರ್ತಿಗಳಿಗೆ ಒಂದು ಕಾಗದ ತಂದುಕೊಟ್ಟನೆಂದೂ, ಅದಕ್ಕೆ ಪ್ರತ್ಯುತ್ತರವನ್ನು ಶ್ರೀ ವರಾಹಮೂರ್ತಿಗಳು ಆಗಲೇ ಕಳುಹಿಸಿದರೆಂದೂ, ಆ ಮೇಲೆ ಈ ಭೇಟಿ ನಡೆಯಿತೆಂದೂ ನಿಖರವಾಗಿ ಗೊತ್ತಾಗಿದೆ.

ಈ ಮಾನ್ಯ ಮುಖಂಡರಿಬ್ಬರೂ ಕಳೆದ ಮೂವತ್ತು ವರ್ಷಗಳಿಂದ ಪರಸ್ಪರ ಭೇಟಿ ಮಾಡಿರಲಿಲ್ಲವೆಂಬುದನ್ನು ವಾಚಕರ ನೆನಪಿಗೆ ತರಬೇಕಾಗಿದೆ. ಶ್ರೀ ವೆಂಕಟಕೃಷ್ಣರಾಯರು 'ಯುದ್ಧ ವಿಮರ್ಶೆ' ಮತ್ತು 'ಸ್ತ್ರೀಯರ ಸಮಸ್ಯೆ'ಗಳ ಮೇಲೆ ಉಪನ್ಯಾಸ ಕೊಟ್ಟಾಗ ಶ್ರೀ ವರಾಹಮೂರ್ತಿಗಳು 'ವಿಶ್ವಶಾಂತಿ' ಮತ್ತು 'ಬಾಲಕರ ಶಿಕ್ಷಣ'ಗಳ ಮೇಲೆ ಭಾಷಣ ಮಾಡಿದರೆಂಬುದನ್ನೂ ಮರೆಯಬಾರದು. ಶ್ರೀ ನಾರಾಯಣ ಶಾಸ್ತ್ರಿಗಳ ತೃತೀಯ ಪುತ್ರರು ಶ್ರೀ ರಾಮಾ ಶಾಸ್ತ್ರಿಗಳ ವಿವಾಹಕ್ಕೆ ಇಬ್ಬರು ಮುಖಂಡರೂ ದಯಮಾಡಿಸಲಿಲ್ಲವೆಂದೂ, ಇಬ್ಬರಿಗೂ ಲಗ್ನಪತ್ರಿಕೆಯನ್ನು ಕಳುಹಿಸಿದುದೇ ಇದಕ್ಕೆ ಕಾರಣವೆಂದೂ ಜವಾಬ್ದಾರಿಯುತವಾದ ಕಡೆಗಳಿಂದ ತಿಳಿದುಬಂದಿದೆ. ಆದುದರಿಂದ ಇದು ಬಹಳ ಮಹತ್ವಪೂರಿತ ಭೇಟಿ ಎಂಬುದರಲ್ಲಿ ಸಂದೇಹವಿಲ್ಲ.

"ಸುದ್ದಿಯ ತವರು" ಹೀಗೆ ಪ್ರಕಟಿಸಿತ್ತು:—

"ಮಹತ್ವಪೂರಿತ ಭೇಟಿ"

(ನಮ್ಮ ಸ್ವಂತ ಬಾತ್ಮೀದಾರರಿಂದ)

ಭಾ. ಪ್ರ. ಸಾ. ಸೇ. ಸಂ. ದ ಅಧ್ಯಕ್ಷರಾದ ಶ್ರೀ ವೆಂಕಟಕೃಷ್ಣರಾಯರಿಗೂ. ಭಾ. ಗ. ಸಂ. ಉ. ಸಂ.ದ ಅಧ್ಯಕ್ಷರಾದ ಶ್ರೀ ವರಾಹಮೂರ್ತಿಗಳಿಗೂ ಇಂದು ಬೆಳಿಗ್ಗೆ ೬–೫೫ಕ್ಕೆ ಶ್ರೀ ವರಾಹಮೂರ್ತಿಗಳ ಮನೆಯಲ್ಲಿ ಭೇಟಿ ನಡೆಯಿತು. ಇದು ನಾನಾ ಬಗೆಯ ಊಹಾಪೋಹಗಳಿಗೆ ಎಡೆ ಕೊಟ್ಟಿದೆ. ಇಬ್ಬರು ಮುಖಂಡರಿಗೂ ನಿನ್ನೆ ಬೆಂಗಳೂರಿನ "ದೇಶಸೇವಕ" ಪತ್ರಿಕೆಯ ಕಛೇರಿಯಿಂದ ಎರಡು ರಿಜಿಸ್ಟರ್ಡ್ ಕಾಗದಗಳು ಬಂದುವೆಂದು ನಮಗೆ ನಂಬಲರ್ಹವಾದ ಕಡೆಯಿಂದ ತಿಳಿದುಬಂದಿದೆ. ಇಬ್ಬರಿಗೂ ಆಳುವ ಮಹಾಸ್ವಾಮಿಯವರು ಮಂತ್ರಿಪದವಿಯನ್ನನುಗ್ರಹಿಸಿರುವರೆಂದೂ ಅನಧಿಕಾರಯುತವಾಗಿ ನಮಗೆ ತಿಳಿದುಬಂದಿದೆ. ಇದು ನಿಜವಾಗಲೆಂದೂ. ನಮ್ಮ

ಊರ ಕೀರ್ತಿಧ್ವಜವನ್ನು ಈ ಮಾನ್ಯ ಮುಖಂಡರು ಎಲ್ಲೆಡೆಯಲ್ಲೂ ಹಾರಿಸಲೆಂದೂ ನಮ್ಮ ಆಶಯ.

"ಸಮಾಚಾರ ಬೇಕೇ?" ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿತ್ತು:—

"ಮಹತ್ವಪೂರಿತ ಭೇಟಿ"

(ನಮ್ಮ ಸ್ವಂತ ಬಾತ್ಮೀದಾರರಿಂದ)

ಶ್ರೀ ವರಾಹಮೂರ್ತಿಗಳ ಮನೆಯಿಂದ ಬೆಳಿಗ್ಗೆ ೬-೩೫ ಗಂಟೆಗೆ ಶ್ರೀ ವೆಂಕಟಕೃಷ್ಣರಾಯರ ಜವಾನ ಜೋರ ಹೊರಬಿದ್ದುದನ್ನು ನಮ್ಮ ಬಾತ್ಮೀದಾರರೇ ಕಂಡರು. ಇದಾದ ಮೇಲೆ ಶ್ರೀ ವರಾಹಮೂರ್ತಿಗಳ ಮನೆಗೆ ಶ್ರೀ ವೆಂಕಟಕೃಷ್ಣರಾಯರು ಬಂದು ಅರ್ಧ ಗಂಟೆ ಇದ್ದರು. ಇದು ಬಹಳ ಮುಖ್ಯವಾದ ಭೇಟಿ ಎಂದು ಹೇಳಲಾಗಿದೆ.

ನಿನ್ನೆ ರಾತ್ರಿ ತಮ್ಮ ಪತ್ನಿಯೊಡನೆ ಡೆಹ್ರಾಡೂನಿನಿಂದ ಈ ಊರಿಗೆ ಬಂದ ಶ್ರೀ ವರಾಹಮೂರ್ತಿಗಳ ಅಳಿಯಂದಿರು ಇವತ್ತು ಬೆಳಿಗ್ಗೆ ೭-೩೦ರ ರೈಲಿನಲ್ಲಿ ಪ್ರಯಾಣ ಮಾಡಿದರು. ಅವರು ಇಂಡಿಯಾ ಸರ್ಕಾರದಿಂದ ಯಾವುದೋ ಯೋಜನೆಯನ್ನು ತಂದಿದ್ದರೆಂದೂ ಆದರಿಂದಲೇ ಈ ಭೇಟಿ ನಡೆಯಿತೆಂದೂ ಹೇಳಬಹುದಾಗಿದೆ.

ಮರುದಿನ ಸಂಜೆ ಸುಖವಿಲಾಸ್ ಕಾಫಿ ಕ್ಲಬ್ಬಿನ ಹೊರಗೆ 'ವಾರ್ತಾನಿಧಿ'ಯ ಬಾತ್ಮೀದಾರ ರಾಮಸ್ವಾಮಿ, 'ಸುದ್ದಿಯ ತವರಿ'ನ ಬಾತ್ಮೀದಾರ ಶ್ರೀನಿವಾಸಮೂರ್ತಿ, 'ಸಮಾಚಾರ ಬೇಕೇ?' ಪತ್ರಿಕೆಯ ಬಾತ್ಮೀದಾರ ನರಹರಿರಾಯ ಮೂರು ಜನವೂ ಚರ್ಚೆ ಮಾಡುತ್ತ ನಿಂತಿದ್ದರು. ಅಷ್ಟುಹೊತ್ತಿಗೆ ನರಸಿಂಹಮೂರ್ತಾಚಾರ್ಯರ ಸವಾರಿ ಬಂತು.

"ಬನ್ರೀ ಆಚಾರ್‍ರೆ. ಕಾಫಿ ಕುಡೀತೀರೋ?" ರಾಮಸ್ವಾಮಿಯ ಪ್ರಶ್ನೆ.

"ಅಯ್ಯೋ ರಾಮರಾಮ, ಸಾಯೋ ಕಾಲಕ್ಕೆ ಶನಿ ಕಾಟ ಅಂತ ಈಗ ಹೋಟ್ಲಿಗೆ ಹೋಗ್ಲೇನಪ್ಪ, ರಾಮಸ್ವಾಮಿ?"

ರಾಮಸ್ವಾಮಿ ಉತ್ತರ ಕೊಡಲಿಲ್ಲ. ಆಚಾರ್‍ರೇ ಮಾತನಾಡಿದರು. "ಅಂತೂ ಮೂರು ಜನವೂ ಸೇರಿ ಒಳ್ಳೇ ನಾಟಕ ಕಟ್ಟಿದ್ರಯ್ಯಾ!"

"ಯಾಕೆ ಆಚಾರ್‍ರೆ, ಹಂಗನ್ತೀರಿ?"

"ಒಳ್ಳೇ ಮಹತ್ವಪೂರಿತ ಭೇಟಿ ಕಾಣ್ರಯ್ಯಾ ನಿಮ್ದು. 'ಕುರುಡನ ಏಕಾಂತ ಮೂರು ಊಳ್ಳೀಗಡ್ಡಿ' ಅಂತ ಆಯ್ತು.

ಮೂರು ಜನವೂ ಆಶ್ಚರ್ಯದಿಂದ ಕಣ್ಣು ಮುಚ್ಚದೆ ಆಚಾರ್‍ರನ್ನೇ ನೋಡಿದರು. ಆ ಮೇಲೆ ಒಟ್ಟಿಗೆ ಕೂಗಿದರು—"ಏನಾಚಾರ್‍ರೇ, ನಿಜವಾದ ಸಮಾಚಾರ ಏನು ಹಾಗಾದ್ರೆ?"

"ನಿಮಗಿನ್ನೂ ಗೊತ್ತಿಲ್ಲ ಹಾಗಾದ್ರೆ?"

"ಉಹುಂ"

"ನಿಮ್ಮ ಸಮಾಚಾರವನ್ನೆಲ್ಲ ಹೆಂಗೆ ಸಂಗ್ರಹಿಸಿದ್ರೀ ಅಂತ ನೀವ್ಹೇಳಿದ್ರೆ ನಿಜಾಂಶ ನಾನ್ಹೇಳ್ತೀನಿ."

ಮೂರು ಜನರ ಕೆನ್ನೆಯೂ ಕೆಂಪಾಯಿತು. ಆ ಮೇಲೆ ರಾಮಸ್ವಾಮಿ ಯೇ ಬಾಯಿ ಬಿಟ್ಟ—"ಜೋರನ್ನ ಕರ್ಕೊಂಡ್ಹೋಗಿ ತಿಂಡಿ ಕಾಫಿ ಕೊಡ್ಸಿ, ಒಂದ್ರುಪಾಯಿ ಕೈಲಿಟ್ಟೆ. ಅವನು ವರಾಹಮೂರ್ತಿಗಳ ಮನೆಗೆ ಹೋದ್ದು ಬಾಯ್ಬಿಟ್ಟ. ಅದನ್ನ ಇನ್ಯಾರ್ಗೂ ಹೇಳ್ಬೇಡ ಅಂತ ಇನ್ನೆರಡ್ರುಪಾಯಿ ಕೊಟ್ಟೆ. ವರಾಹ ಮೂರ್ತಿಗಳ ಮಗ ಸುಬ್ಬೂಗೆ ಒಂದ್ರೂಪಾಯಿ ಕೊಡ್ತೀನಿ ಅಂದ್ರೂ ಅವನು ಮಾತಾಡ್ಲಿಲ್ಲ. ಉಳಿದ ಸಮಾಚಾರವನ್ನೆಲ್ಲ ನೀವು, ಶಾಸ್ತ್ರಿಗಳು ಹೇಳಿದ್ರಿ."

ಶ್ರೀನಿವಾಸಮೂರ್ತಿ ನುಡಿದ:—"ಪೋಸ್ಟ್‌ಮ್ಯಾನ್ ನರಸಿಂಗೂಗೆ ತಿಂಡಿ ಕಾಫಿ ಕೊಡಿಸಿ, ಒಂದ್ರುಪಾಯಿ ಕೊಟ್ಟೆ. ರಿಜಿಸ್ಟರ್ಡ್ ಕಾಗದದ ಸುದ್ದಿ ಹೇಳಿದ. ಇನ್ಯಾರ್ಗೂ ತಿಳಿಸ್ಬೇಡ ಅಂತ ಇನ್ನೊಂದ್ರುಪಾಯಿ ಕೊಟ್ಟು, ಮಂತ್ರಿಪದವಿ ಕತೆ ನಾನೇ ಕಟ್ಟಿದೆ."

"ಜೋರನಿಗೆ ಒಂದ್ರುಪಾಯಿ ಕೊಟ್ರೂ ಅವನು ಬಾಯ್ಬಿಡ್ಲಿಲ್ಲ. ಸುಬ್ಬೂಗೆ ತಿಂಡಿ, ಕಾಫಿ, ಒಂದ್ರುಪಾಯಿ ದಕ್ಷಿಣೆ ಅರ್ಪಣೆ ಆದ ಮೇಲೆ ತಮ್ಮ ಅಕ್ಕ ಭಾವ ಬಂದದ್ದು, ವರಾಹಮೂರ್ತಿಗಳು ಅವರ ಅಳಿಯ ರಾತ್ರಿ ಹನ್ನೆರಡರ ವರೆಗೆ ಮಾತಾಡ್ತಾ ಇದ್ದದ್ದು, ಮಧ್ಯೆ ಮಧ್ಯೆ "ಗವರ್ನಮೆಂಟ್ ಒಫ್ ಇಂಡಿಯಾ" ಅಂತ, "ವೆಂಕಟಕೃಷ್ಣರಾಯ್ರು" ಅಂತ ಇಂಗ್ಲೀಷಿನಲ್ಲಿ ಮಾತಾಡ್ತಾ ಇದ್ದದ್ದು ಎಲ್ಲ ಹೇಳಿದ. ಆ ಮೇಲೆ ಎರಡ್ರುಪಾಯಿ ಲಂಚ ಕೊಟ್ಟು, ಇನ್ಯಾರ್ಗೂ ಹೇಳ್ಬೇಡ ಅಂತ ಷರತ್ತು ಹಾಕಿ ಬಂದೆ" ಎಂದ ನರಹರಿರಾವ್.

ಆಚಾರ್ರು ಗಹಗಹಿಸಿ ನಕ್ಕರು. ಮೂರು ಜನಕ್ಕೂ ಸಿಟ್ಟೇರಿತು. ಅದನ್ನು ಕಂಡು ನಗು ತಡೆಯುತ್ತಾ ಹೇಳಿದರು ಆಚಾರ್ರು—"ಅಲ್ಲ ಮಹಾ ರಾಯ್ರು, ಆದದ್ದು ಇಷ್ಟೇ. ಮೊನ್ನೆ ರಾತ್ರಿ ವೆಂಕಟಕೃಷ್ಣರಾಯರ ಅಳಿಯ ದೀಪಾವಳಿಗೆ ಬಂದರು. ಅವರು ಬಂದ ಗಾಡೀಲೇ ವರಾಹಮೂರ್ತಿಗಳ ಅಳಿಯ ಹೆಂಡತೀನ ಬಾಣಂತನಕ್ಕೋಸ್ಕರ ಮಾವನ ಮನೇಲಿ ಬಿಡೋದಕ್ಕೆ ಬಂದ್ರು. ರಾಯರ ಅಳಿಯಂದಿರು ಮುಖ ಗಂಟು ಹಾಕಿಕೊಂಡೇ ಮನೆಗೆ ಬಂದರು. ರಾಯರ ಮನೇಲಿರೋದೇ ರಾಯರು, ಅವರ ಕುಟುಂಬ ಸಾವಿತ್ರಮ್ಮ, ಅವರ ಮಗಳು ಸರೋಜ. ರಾತ್ರಿ ಸರೋಜ ವೀಳೆದೆಲೆ ತೆಗೊಂಡ್ಹೋದಾಗ ಅಳಿಯಂದಿರು ಹೇಳಿದ್ರಂತೆ, 'ಇವತ್ತು ಯಾರೋ ವರಾಹ ಮೂರ್ತಿಗಳ ಮನೆಗೆ ಬಂದರು. ಆತ ಹಾಕಿಕೊಂಡಿದ್ದಂಥಾದ್ದೇ ಕೈಗಡಿ ಯಾರಕ್ಕೆ ನಾಳೆಯೇ ಆರ್ಡರ್ ಕಳ್ಸಿದರೆ ನಾನು ಇಲ್ಲಿರ್ತೀನೆ, ಇಲ್ದೇ ಇದ್ರೆ ನಾಳೆ ಮಧ್ಯಾಹ್ನವೇ ಗಾಡಿ ಬಿಡ್ತೇನೆ' ಅಂತ. ಹುಡುಗಿ ತಂದೆ ಮುಂದೆ ಹೇಳಿದಳು. ವರಾಹಮೂರ್ತಿಗಳ ಮಗಳು ಅಳಿಯ ಬರೋ ವಿಚಾರ ರಾಯ ರಿಗೆ ಗೊತ್ತಿತ್ತು. ಬೆಳಿಗ್ಗೆ ರಾಯರು ಅಳಿಯನ್ನ ಕೇಳಿದ್ರಂತೆ, 'ನೀವೇ ಕೇಳಬಹುದಾಗಿತ್ತಲ್ಲ, ಅವರ ಕೈಗಡಿಯಾರ ಯಾವ ಕಂಪೆನೀದು ಅಂತ' ಅಂತ ಅಳಿಯಂದ್ರು—'ನನಗ ಅವರ ಗುರ್ತೇ ಇಲ್ದೆ ಕೇಳೋದು ಹ್ಯಾಗೆ' ಅಂದ್ರಂತೆ. 'ಅವರು ವರಾಹಮೂರ್ತಿಗಳ ಮನೆಗೆ ಹೋದರೂಂತ ಹೇಗೆ ಗೊತ್ತು?' ಅಂದ್ರಂತೆ ರಾಯ್ರು. 'ಗಾಡಿಯೋನಿಗೆ ಅವರು ವರಾಹ ಮೂರ್ತಿಗಳ ಮನೆಗೆ ಹೋಗಬೇಕು ಅಂತ ಹೇಳಿದ್ದು ಕೇಳಿಸ್ತು' ಅಂದ್ರು ಅಳಿಯ. ತಕ್ಷಣ ವಿಧಿ ಇಲ್ಲದೆ, 'ನಿಮ್ಮಳಿಯ ಯಾವ ಕೈಗಡಿಯಾರ ಕಟ್ಟಿ ದ್ದಾರೆ, ದಯವಿಟ್ಟು ತಿಳಿಸಿ' ಅಂತ ಬೋರನ ಕೈಲಿ ವರಾಹಮೂರ್ತಿಗಳಿಗೆ ರಾಯ್ರು ಕಾಗದ ಕಳಿಸಿದರು. 'ಅಷ್ಟು ಅಗತ್ಯವಿದ್ದರೆ ನೀವೇ ಬಂದು ತಿಳಿದುಕೊಳ್ಳಿ' ಅಂತ ಉತ್ತರ ಕೊಟ್ಟರಂತೆ ವರಾಹಮೂರ್ತಿಗಳು. ಆ ಕಾಗದ ತಂದ ಬೋರ 'ಮೂರ್ತಿಗಳ ಅಳಿಯ ರೈಲಿಗೆ ಹೋಗೋದಕ್ಕೆ ಸಿದ್ಧವಾಗುತ್ತಿ ದ್ದಾರೆ' ಅಂತ ಹೇಳಿದ್ನಂತೆ. ರಾಯ್ರು 'ಒಳ್ಳೇ ಪ್ರಾಣ ಸಂಕಟ ಬಂತೇ? ಮೂವತ್ತುವರ್ಷದಿಂದ ಅವನ್ಮುಖಾ ನೋಡ್ದೇ ಇದ್ದೋನು, ಅವನ ಮನೇ ಬಾಗ್ಲಿಗೆ ಹೋಗ್ಲೇ?' ಅಂತ ಯೋಚಿಸಿ, ಹೋಗೋಲ್ಲ ಅಂತ ತೀರ್ಮಾನಿಸಿ

ದರಂತೆ. ಸಾವಿತ್ರಮ್ನೋರು ಅತ್ತು, ಕರೆದು, 'ನಮಗಿರೋದು ಒಂದು ಕೂಸು, ಅದು ಹಾಯಾಗಿರ್ಬೇಡ್ವೇ? ಅಳಿಯಂದಿರು ಸಿಟ್ಮಾಡ್ಕೊಂಡು ಹೊರಟ್ಹೋದ್ರೆ ಮುಂದೆ ಗತಿಯೇನು? ಸರೋಜಳ ಮನಸ್ಸು ಹ್ಯಾಗಿರುತ್ತೆ? ನಿಮ್ಮ ಪ್ರತಿಷ್ಠೆಗೋಸ್ಕರ ಕೂಸಿನ ಸುಖಾನ ಹಾಳ್ಮಾಡ್ಬೇಡಿ. ವರಾಹಮೂರ್ತಿಗಳ ಅಳಿಯ ಹೊರಟ್ಹೋದಾರು. ತಕ್ಷಣ ಹೊರಡಿ' ಅಂತ ರಂಪಾ ಮಾಡಿದ್ರಂತೆ. ರಾಯರು ಬೇಜಾರ್ಪಟ್ಕೊಂಡು, ಅಳಿಯಂದಿರ ಕುಲವನ್ನೆಲ್ಲ ಮನಸ್ನಲ್ಲೇ ಶಪಿಸ್ಕೊಂಡು, ವರಾಹಮೂರ್ತಿಗಳ ಮನೆಗೆ ಹೋದರಂತೆ."

ಕೇಳುತ್ತಿದ್ದ ಮೂವರೂ ಬೆಪ್ಪಾಗಿ ನಿಂತರು. ಕೊನೆಗೆ ನರಹರಿಯೇ ಕೇಳಿದ—'ವರಾಹಮೂರ್ತಿಗಳ ಅಳಿಯ ಅಷ್ಟು ಬೇಗ ಯಾತಕ್ಕೆ ಹೋದ್ರು?'

"ಅವರಿಗೆ ಇದ್ದದ್ದೇ ೫-೬ ದಿವ್ಸ ರಜಾ, ಪ್ರಯಾಣಕ್ಕೆ ೪-೫ ದಿವ್ಸ ಆಗ್ಹೋಯ್ತಲ್ಲ, ಅದಕ್ಕೆ."

"ಅದ್ಸರಿ. ಆದ್ರೆ 'ದೇಶಸೇವಕ'ದಿಂದ ಬಂದ ರಿಜಿಸ್ಟರ್ಡ್ ಕಾಗದಗಳು?" ಶ್ರೀನಿವಾಸ ಮೂರ್ತಿಯ ಪ್ರಶ್ನೆ.

"ಅದೇ, ವೆಂಕಟಕೃಷ್ಣರಾಯರು ಸ್ತ್ರೀಯರ ಸಮಸ್ಯೆ ಅನ್ನೊ ತಮ್ಮ ಉಪನ್ಯಾಸ ಪೇಪರ್‌ನಲ್ಲಿ ಹಾಕಿ ಅಂತ ಕಳ್ಸಿದ್ರಂತೆ. ಹಾಕೋದಕ್ಕೆ ಆಗ್ದೇ ಇದ್ರೆ ಕಳದ್ಹೋಗದ ಹಾಗೆ ರಿಜಿಸ್ಟರ್ ಮಾಡಿ ಕಳಿಸಿ ಅಂತ ಸ್ಟಾಂಪು ಕಳಿಸಿದ್ರಂತೆ; ಅದು ವಾಪಸ್ಸು ಬಂತು ಅಷ್ಟೇ. ವರಾಹಮೂರ್ತಿಗಳೂ, 'ಬಾಲಕರ ಶಿಕ್ಷಣ'ದ ಉಪನ್ಯಾಸ ಕಳ್ಸಿದ್ರೂಂತ ಕಾಣುತ್ತೆ. ಅದೂ ವಾಪಸ್ಬಂದಿರಬೇಕು."

ರಾಮಸ್ವಾಮಿ ಭಾರವಾದ ನಿಟ್ಟುಸಿರು ಬಿಡುತ್ತಾ ಕೇಳಿದ—"ಇದನ್ನೆಲ್ಲಾ ನೀವು ಹ್ಯಾಗೆ ಪತ್ತೇ ಮಾಡಿದ್ರಿ, ಆಚಾರ್ರೆ?"

"ರಾಯರ ಹೆಂಡತಿ ಸಾವಿತ್ರಮ್ಮ ನಮ್ಮುಂದೆ ಬೆಳಿಗ್ಗೆ ಎಲ್ಲಾ ಹೇಳ್ಕೊಂಡು, 'ನಾನು ರಾದ್ಧಾಂತ ಮಾಡ್ದೇ ಇದ್ದಿದ್ರೆ ಇವ್ರು ಹೋಗ್ತಾಲೇ ಇರ್ಲಿಲ್ಲ. ನಮಗೋಸ್ಕರ ಇಲ್ದೇ ಇದ್ರೂ ನಮ್ಮ ಸರೋಜಾನ ವಿಚಾರ ಯೋಚಿಸಬೇಡ್ವೇ? ಹೆಣ್ಣು ಹೆತ್ತೋರ ಪಾಡು ಕಷ್ಟ' ಅಂತ ಅತ್ರು, ಪಾಪ."

ಮೂರು ಜನ ಚಾತ್ಮೀದಾರರೂ ಅಲ್ಲಿಂದ ಕಾಲು ತೆಗೆದರು. ಆಚಾರ್ರು ತಮಗೆ ತಾವೇ ಅಂದುಕೊಂಡರು "ಅಂತೂ ಪಾಪ, ಹೆಣ್ಣು ಹೆತ್ತೋರ ಪಾಡು ಕಷ್ಟ."

ಪ್ರಣಯಿಗಳು

ಸಾಯಂಕಾಲ ಸುಮಾರು ಆರು ಗಂಟೆ. ಸೂರ್ಯ ಮುಳುಗುವಾಗ ಆಕಾಶಕ್ಕೆಲ್ಲ ಓಕುಳಿ ಎರಚಿ ತಲೆ ತಪ್ಪಿಸಿಕೊಂಡನೋ ಎನ್ನುವಂತೆ ಗಗನವೆಲ್ಲ ಕೇಸರಿ ಬಣ್ಣದಿಂದ ರಂಗುರಂಗಾಗಿತ್ತು. ನಾವು ಕೆಲವರು ತರುಣರು–ನಾನು ಅನಂತ, ಶ್ರೀಧರ, ಮೂರ್ತಿ ಲಾಲ್‌ಬಾಗ್ ಕಡೆಗೆ ಹೊರಟಿದ್ದೆವು. ಹವಾ ಸೊಗಸಾಗಿತ್ತು. ಕೂಡಿದವರು ನಾವೆಲ್ಲ ತರುಣರೇ. ಸರಿ ಇನ್ನು ಕೇಳಬೇಕೆ? ನಮ್ಮ ಹರಟೆ ಈ ಲೋಕದ, ಮುಂದಿನ ಲೋಕದ ಎಲ್ಲ ವಿಷಯಗಳನ್ನೂ ಆಳವಡಿಸಿತ್ತು. ಭಾರತೀಯ–ಪಾಶ್ಚಾತ್ಯ ಚಲನಚಿತ್ರಗಳ ಹೋಲಿಕೆ, ಸ್ತ್ರೀಯರ ವಿದ್ಯಾಭ್ಯಾಸ, ವಿಧವಾವಿವಾಹ, ಅಕ್ಷರಪ್ರಚಾರಕಾರ್ಯ, ಜೈಪ್ರಕಾಶ್ ನಾರಾಯಣರ ಇತ್ತೀಚಿನ ಭಾಷಣ, ರಷ್ಯಾದ ಆಡಳಿತ ಯಂತ್ರ, ಇಂಡಿಯನ್ ಕಾಫಿಬೋರ್ಡಿನ ಕಾಫಿ–ಹೀಗೆ ಪರಸ್ಪರ ಸಂಬಂಧವಿರದ ಎಷ್ಟೋ ವಿಷಯಗಳು ನಮ್ಮ ವಾಕ್ಪ್ರವಾಹದಲ್ಲಿ ತೇಲಿಹೋದುವು. ಇಷ್ಟಾದರೂ ಪ್ರತಿ ದಿನವೂ ನಮ್ಮನ್ನು ನಗಿಸುತ್ತಾ, ಹಾಗೆಯೇ ವಿಚಾರಪೂರ್ವಕವಾಗಿ ವಾದ ಮಾಡುತ್ತಿದ್ದ ಮೂರ್ತಿ ಮಾತ್ರ ಬಾಯ್ಬಿಟ್ಟಿರಲಿಲ್ಲ. ಕೊನೆಗೆ ನಾನೇ ಕೇಳಿದೆ—"ಏನೋ ಮೂರ್ತಿ, ಇವತ್ತು ಹೀಗಿದ್ದೀಯೆ?"

"ಹೇಗಿದ್ದೇನೋ?'' ನಿದ್ದೆಯಲ್ಲಿ ಕನವರಿಸುವವರಂತೆ ನುಡಿದ ಅವನು.

''ಒಳ್ಳೆ ಮಂಕು ಬಡ್ಕೊಂಡು ಬಾಯಿಗೆ ಬೀಗ ಹಾಕ್ಕೊಂಡು ಬರ್ತಾ ಇದ್ದೀಯಲ್ಲ. ಇವತ್ತು ಯಾವುದಾದರೂ ವ್ರತ ಹಿಡಿದಿದ್ದೀಯೋ ಅಥವಾ ಋಷಿ ಶಾಪವೋ ಏನು?"

''ಸರಿ, ಏನೂ ಇಲ್ಲ" ಎಂದು ನಗಲೆತ್ನಿಸಿದ ಮೂರ್ತಿ.

''ಸುಮ್ಮನೆ ನನ್ನ ಮುಂದೆ ಗಥಾ ಹೊಡೀಬೇಡವೋ'' ಎಂದೆ.

"ಏನೋ ಇರಬೇಕು ಅಂತ ಕಾಣತ್ತೆ'' ರಾಗವೆಳೆದ ಅನಂತ.

"ಅವನ ರೂಂನಲ್ಲಿ ಒಂದು ಹುಡುಗಿ ಫೊಟೋ ಹಾಕಿದ್ದಾನೆ ನೋಡೋ ಅದಕ್ಕೆ ತಪ್ಪದೆ ಪ್ರತಿನಿತ್ಯವೂ ಹೂವಿಡುತ್ತಾನೆ. ಇವತ್ತು ಬೆಳಿಗ್ಗೆ ನಾನು

ಅವರ ಮನೆಗೆ ಹೋದಾಗ ಅವರ ಮುಂದೆ ನಿಂತು ಅದನ್ನೇ ದಿಟ್ಟಿಸುತ್ತಿದ್ದ. ನಾನು ಹದಿನೇಳು ಸಲ ಕರೆದಮೇಲೆಯೇ ಅವನು ಈ ಪ್ರಪಂಚಕ್ಕೆ ಭಾವ ಸಮಾಧಿ–ಪ್ರೇಮಸಮಾಧಿಯಿಂದ ಇಳಿದದ್ದು'' ಶ್ರೀಧರ ತನ್ನ ಮಾತನ್ನು ಪೋಣಿಸಿದ.

ಮೂರ್ತಿ ಅವನನ್ನು ನುಂಗಿಬಿಡುವಂತೆ ನೋಡುತ್ತಿದ್ದ. ಅವನ ಮಾತು ಮುಗಿಯುತ್ತಲೇ ''ಆಯಿತೋ ನಿನ್ನ ತಲೆಹರಟೆ?'' ಎಂದ.

ಶ್ರೀಧರನ ಮುಖಭಂಗವಾಗಿತ್ತು. ಅವನು ಶೀಘ್ರ ಕೋಪಿ, ಅಲ್ಲದೆ ಕೋಪ ಬಂದಾಗ ಏನು ಹೇಳಿಯಾನು, ಏನು ಮಾಡಿಯಾನು ಎಂಬುದರ ನಿಯಮವಿಲ್ಲ. ಇನ್ನು ಇವರಿಬ್ಬರಲ್ಲಿ ಜಗಳವೆದ್ದೀತು ಎಂದುಕೊಂಡು ಶ್ರೀಧರ ಬಾಯ್ಬಿಡುವುದರೊಳಗೆ ನಾನೆಂದೆ ''ಹೋಗಲಿ ಬಿಡು. ನಿನಗೆ ಪ್ರಣಯದ ಹುಚ್ಚು ಹಿಡಿದಿಲ್ಲ ಎಂದೇ ಒಪ್ಪಿಕೊಳ್ಳೋಣ. ಇವತ್ತು ಈ ಮೌನದ ರಾಹು ನಿನ್ನನ್ನು ಹಿಡಿದಿರುವುದೇಕೆ ಅನ್ನೋದನ್ನ ಸ್ಪಷ್ಟವಾಗಿ ಹೇಳಿಬಿಡು''ಎಂದೆ.

''ಏನೂ ಇಲ್ಲ ಕಣೋ'' ಎಂದು ಜಾರಿಕೊಳ್ಳಲೆತ್ನಿಸಿದ ಮೂರ್ತಿ. ಆದರೆ ನಾವು ಕೇಳುತ್ತೇವೆಯೇ? ಕೊನೆಗೆ ತನ್ನ ಕತೆ ಆರಂಭ ಮಾಡಿದ—

''ಇವತ್ತು ಸಪ್ಟಂಬರ್ ಹತ್ತು, ಅಲ್ಲವೆ? ಸೆಪ್ಟಂಬರ್ ೧೦ನೆಯ ತಾರೀಕೆಂದರೆ ನನಗೊಂದು ಪುಣ್ಯ ದಿನ ಇದ್ದ ಹಾಗೆ. ಕಸ್ತೂರಿ ಬಾ ಅವರ ಪುಣ್ಯದಿನ, ಮಹದೇವ ಭಾಯಿಯ ಪುಣ್ಯದಿನ ಎಷ್ಟು ಶ್ರದ್ಧೆ, ಭಕ್ತಿಗಳಿಂದ ಆಚರಿಸುತ್ತೇನೋ ಅಷ್ಟೇ ಶ್ರದ್ಧೆ, ಭಕ್ತಿಗಳಿಂದ ಸಪ್ಟಂಬರ್ ಹತ್ತನೆಯ ತಾರೀಕನ್ನು ಆಚರಿಸುತ್ತೇನೆ. ಅದು ನನ್ನ ಜೀವಮಾನದಲ್ಲಿ ದೊಡ್ಡ ದಿನ, ನಾನು ಮರೆಯಲಾಗದ ದಿನ.

೧೯೪೨ರ ಸೆಪ್ಟಂಬರ್ ತಿಂಗಳನ್ನು ಜ್ಞಾಪಿಸಿಕೊಳ್ಳಿ. ಆಗ ದೇಶಕ್ಕೆ ದೇಶವೇ ಸ್ವಾತಂತ್ರ್ಯದ ಸ್ಫೂರ್ತಿಯಿಂದ, ಬಯಕೆಯಿಂದ ಪ್ರಜ್ವಲಿತವಾಗಿತ್ತು. ಆ ಮಹಾಕ್ರಾಂತಿಯನ್ನು ನೀವೆಲ್ಲ ಕಣ್ಣಾರೆ ಕಂಡವರು. ಅದರಲ್ಲಿ ಭಾಗವಹಿಸಿ ದವರು, ಅದನ್ನು ನಾನು ನಿಮಗೆ ಹೆಚ್ಚು ವರ್ಣಿಸಬೇಕಾಗಿಲ್ಲ. ಆದರೆ ಆಗ ನನ್ನ ಸ್ಥಿತಿ ಹೇಗಿತ್ತೆಂಬುದನ್ನು ಸ್ಥೂಲವಾಗಿ ತಿಳಿಸುತ್ತೇನೆ.

ಆಗ ನಾನಿನ್ನೂ ಕಾಲೇಜು ವಿದ್ಯಾರ್ಥಿ. ಹಲವು ಚರ್ಚಾಕೂಟಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದೆ. ಅನೇಕ ಸಂಘಗಳಲ್ಲಿ ಕಾರ್ಯದರ್ಶಿಯೋ ಕಾರ್ಯಕಾರಿ ಸಮಿತಿಯ ಸದಸ್ಯನೋ ಆಗಿ ಕೆಲಸ ಮಾಡುತ್ತಿದ್ದೆ. ಆದುದರಿಂದ ನನಗೆ ಹಲವರ ಪರಿಚಯು ಇತ್ತು, ಅಥವಾ ಹಲವು ವಿದ್ಯಾರ್ಥಿಗಳಿಗೆ ನನ್ನ ಪರಿಚಯು ಇತ್ತು. ಆಗ ಕಾಲೇಜಿನ ವಿದ್ಯಾರ್ಥಿ ಮುಖಂಡರಲ್ಲಿ ನಾನೂ ಒಬ್ಬ ಎನ್ನಿಸಿಕೊಂಡಿದ್ದೆ. ಅಧ್ಯಾಪಕರು ಕೂಡ 'ಮೂರ್ತಿ' ಎಂದರೆ ಗೌರವದಿಂದ, ನಯದಿಂದ ಕಾಣುವಂತೆ ಸ್ಥಾನಗಳಿಸಿಕೊಂಡಿದ್ದೆ. ಇದೆಲ್ಲದರ ಪರಿಣಾಮವಾಗಿ ನನಗೂ ಸ್ವಲ್ಪ ಜಂಬ ಬಂದಿತ್ತೆಂಬುದು ನಿಜ. ಈಗ ಆ ದಿನಗಳನ್ನು ಜ್ಞಾಪಿಸಿಕೊಂಡಾಗ ನಾನು ಸ್ವಲ್ಪ ಅಹಂಕಾರದಿಂದ ವರ್ತಿಸುತ್ತಿದ್ದೆ ಎಂಬುದರ ಅರಿವಾಗುತ್ತದೆ.

ನಾಯಕರ ದಸ್ತಗಿರಿ ಆದಕೂಡಲೆ ದೇಶಕ್ಕೆ ದೇಶವೇ ಧಗಧಗಿಸುವ ಜ್ವಾಲಾಮುಖಿಯಾಯಿತು. ಇಂತಹ ಪ್ರಚಂಡ ಜ್ವಾಲೆ ಎಲ್ಲಿ ಅಡಗಿತ್ತು ಎಂದು ಸರ್ಕಾರ ಆಶ್ಚರ್ಯಪಟ್ಟಿತು. ಆ ಕ್ರಾಂತಿಯ ಬೇಗೆ ನಮ್ಮ ಕಾಲೇಜನ್ನೂ ಮುಟ್ಟಿತು, ವಿದ್ಯಾರ್ಥಿಗಳೆಲ್ಲ ಹೊರಕ್ಕೆ ಬಂದರು. ಭಾರತ ಸ್ವಾತಂತ್ರ್ಯಗಳಿಸುವವರೆಗೆ ಮತ್ತೆ ಕಾಲೇಜಿಗೆ ಹೋಗುವುದಿಲ್ಲವೆಂದು ಪಣ ತೊಟ್ಟರು.

ಮೂರು–ನಾಲ್ಕು ದಿನ ಸಭೆ ನಡೆಯಿತು. ಆ ಮೇಲೆ ಸಭೆ ನಡೆಯುತ್ತಿದ್ದ ಸ್ಥಳವನ್ನು ಸೈನಿಕರು ಆಕ್ರಮಿಸಿದರು. ಸಭೆ ನಡೆಸಲು ಸಾಧ್ಯವಿಲ್ಲದೆ ಹೋಯಿತು.

ಇನ್ನು ನಾಲ್ಕು ದಿನ ಕಳೆಯಿತು. ವಿದ್ಯಾರ್ಥಿಗಳು ಕಾಲೇಜಿನ ಬಳಿ ಬರುವರು, ಸುಮ್ಮನೆ ಹೊರಗೆ ನಿಂತಿರುವರು, ಇಲ್ಲದಿದ್ದರೆ ತರಗತಿಗೆ ಹೋದ ವಿದ್ಯಾರ್ಥಿಗಳನ್ನು ಕೀಟಲೆ ಮಾಡುವರು, 'ಹೋ' ಎಂದು ಅರಚುವರು, ಕಡಲೇಕಾಯಿ–ಬೆಲ್ಲ ತಿಂದು ಮಧ್ಯಾಹ್ನ ಮನೆಗೆ ಹೋಗುವರು–ಹೀಗಾಗಿತ್ತು ಅವರ ದಿನಚರಿ. ಒಂದು ಬಗೆಯ ಬೇಸರ, ಅನಿಶ್ಚಯ ಕ್ರಮೇಣ ಅವರಲ್ಲಿ ಬೆಳೆಯುತ್ತಿತ್ತು. ನಮ್ಮಲ್ಲಿ ಕೆಲವರಿಗೆ ಇದು ಸರಿಬೀಳಲಿಲ್ಲ. ವಿದ್ಯಾರ್ಥಿ ನಾಯಕರಲ್ಲಿ ಕೆಲವರು ಆಗಲೇ ಸೆರೆಮನೆಯಲ್ಲಿದ್ದರು, ಹಲವರು ತಪ್ಪಿಸಿಕೊಂಡಿದ್ದರು, ಉಳಿದ ಕೆಲವರಿಗೆ ಭಾಷಣ ಮಾಡಬೇಕೆಂಬ ಹಂಬಲ. ನಾವು ನಾಲ್ಕು ಜನರಿಗೆ, "ವಿದ್ಯಾರ್ಥಿಗಳ ಕಾಲ, ಶಕ್ತಿ, ಉತ್ಸಾಹ ಹೀಗೆ

ತಣ್ಣಗಾಗುತ್ತಿದೆಯಲ್ಲ! ಈ ಕಾವು ಹೀಗೆಯೇ ಉಳಿಯುವಂತೆ ಮಾಡಬೇಕು'' ಎಂಬ ಚಪಲ. ಆದರೆ ಏನು ಮಾಡಬೇಕಾದರೂ ರಹಸ್ಯವಾಗಿ ಮಾಡಬೇಕು. ಏಕೆಂದರೆ ನಾವು ಅಧಿಕಾರದಲ್ಲಿದ್ದ ಸಂಘಗಳಿಗೆಲ್ಲ ನಾವು ರಾಜೀನಾಮೆ ಕೊಡುತ್ತಲೇ ಸರ್ಕಾರ ನಮ್ಮ ಮೇಲೆ ಕಣ್ಣಿಟ್ಟಿತ್ತೆಂದು ನಮಗೆ ಗೊತ್ತಿತ್ತು. ಬಂಧನಕ್ಕೆ ಹೆದರಿದೆವೆಂದಲ್ಲ, ಆದರೆ ಸುಮ್ಮನೆ ಕಾರಾಗೃಹಕ್ಕೆ ಹೋಗುವುದು ನಮಗೆ ಸರಿತೋರಲಿಲ್ಲ.

ಅವತ್ತು ಒಂದು ದಿನ ನಾವೆಲ್ಲ ಒಂದುಕಡೆ ಸೇರಿದೆವು. ಮನೆಯಲ್ಲಿ ನಾವು ಸೇರುವಂತಿರಲಿಲ್ಲ, ಏಕೆಂದರೆ ನಾವೆಲ್ಲ ಸರ್ಕಾರಿ ನೌಕರರ ಮಕ್ಕಳು. ಆದುದರಿಂದ ನಮ್ಮ ಪ್ರಯತ್ನಕ್ಕೆ ಮನೆಯಲ್ಲಿ ಆಸ್ಪದ, ಪ್ರೋತ್ಸಾಹ ದೊರೆಯುವಂತಿರಲಿಲ್ಲ. ಲಾಲ್‌ಬಾಗಿನ ಒಂದು ಮೂಲೆಯಲ್ಲಿ ಸೇರಿದೆವು. ನಮ್ಮ ಚರ್ಚೆಯ ವಿವರಗಳನ್ನೆಲ್ಲ ಹೇಳಿ ನಿಮ್ಮನ್ನು ಬೇಸರಗೊಳಿಸುವುದಿಲ್ಲ. ಒಂದು ಪತ್ರಿಕೆಯನ್ನು ಹೊರಡಿಸಬೇಕೆಂದೂ, ವಿದ್ಯಾರ್ಥಿಗಳಿಗೆ ಉತ್ಸಾಹ, ಸ್ಫೂರ್ತಿ ಬರುವಂತಹ ಸುದ್ದಿಗಳನ್ನೂ ಲೇಖನಗಳನ್ನೂ ಪ್ರಕಟಿಸಬೇಕೆಂದೂ ನಿಶ್ಚಯಿಸಿದೆವು. ಪತ್ರಿಕೆಗೆ "ರಕ್ತಕಾಣಿಕೆ" ಎಂದು ನಾಮಕರಣ ಮಾಡಿದೆವು. ಒಬ್ಬ ''ಸೈಕ್ಲೊಸ್ಟೈಲ್'' ಯಂತ್ರ ಒದಗಿಸುವ ಭಾರವನ್ನು ಹೊತ್ತ. ಕಾಲೇಜಿನಲ್ಲಿ ಹಲವು ಲೇಖನಗಳನ್ನು ಬರೆದಿದ್ದ ನಾನೇ ಅದಕ್ಕೆ ಸಂಪಾದಕನಾಗಬೇಕೆಂದೂ ಉಳಿದವರು ನನಗೆ ಎಲ್ಲ ರೀತಿಯ ಸಹಾಯವನ್ನೂ ನೀಡಬೇಕೆಂದೂ ತೀರ್ಮಾನವಾಯಿತು.

ನಮ್ಮ ಮಾತೆಲ್ಲ ಮುಗಿದು ನಾವು ಏಳುವ ಹೊತ್ತಿಗೆ 'ಸಾರ್' ಎಂದರು ಯಾರೋ. ನಮಗೆ ಎದೆಯೇ ಒಡೆಯಿತು. ಎಲ್ಲೆಂದರೆ ಅಲ್ಲಿ ಸರ್ಕಾರದ ಗುಪ್ತಚಾರರು ಪ್ರತ್ಯಕ್ಷವಾಗುತ್ತಿದ್ದ ಕಾಲ ಅದು. ವಿದ್ಯಾರ್ಥಿಗಳಲ್ಲೇ ಹಲವರು ತಮ್ಮ ಗೆಳೆಯರನ್ನು ಕಾರಾಗೃಹಕ್ಕೆ ಕಳುಹಿಸುವ ಪುಣ್ಯಕಾರ್ಯವನ್ನು ಕೈಗೊಂಡಿದ್ದರು. ಆದುದರಿಂದ ಆ 'ಸಾರ್' ಎಂಬ ಮಾತು ಕೇಳುತ್ತಲೇ ನಮಗೆ ಎದೆ ನಡುಗಿತು. ನಮ್ಮ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಮೊದಲೇ ಹೀಗಾಯಿತೇ ಎಂದು ಬಡಬಡಿಸಿದೆವು. ಅಷ್ಟು ಹೊತ್ತಿಗೆ ಮರಗಳ ಗುಂಪಿನಿಂದ ವ್ಯಕ್ತಿಯೊಂದು ಬೇರೆಯಾಯಿತು, ನಮ್ಮ ಕಡೆಗೇ ಬಂದಿತು.

ಆ ವ್ಯಕ್ತಿಯನ್ನು ಕಂಡಕೂಡಲೆ ನನಗೆ ಒಂದು ಬಗೆಯ ಧೈರ್ಯ, ತಾತ್ಸಾರ ಬಂದಿತು. "ಇವನೇನು ಮಾಡಬಲ್ಲ?" ಎನ್ನಿಸಿತು. ನಮ್ಮ ಜೊತೆಗಿದ್ದ ವೆಂಕಟು-ಶಕ್ತಿಯಲ್ಲಿ, ಆತುರದಲ್ಲಿ ರಾಕ್ಷಸ-"ಕಪಾಳಕ್ಕೆ ನಾಲ್ಕು ಕೊಟ್ಟು ಹಲ್ಲು ಮುರಿದು ಕಳಸ್ಲೇನೋ?" ಎಂದ. "ಉಶ್. ಸುಮ್ಮನಿರು" ಎಂದೆ ನಾನು.

ನಮ್ಮೆಡೆಗೆ ಬಂದ ವ್ಯಕ್ತಿ ತೀರ ಎತ್ತರವೂ ಅಲ್ಲ. ತೀರ ಕುಳ್ಳೂ ಅಲ್ಲ; ಒಂದು ಪಂಚೆ ಉಟ್ಟು, ಮೇಲೊಂದು ಬನಿಯನ್ ಹಾಕಿದ್ದ. ಆದರೆ ಪಂಚೆ, ಬನಿಯನ್ ಎರಡೂ ಹಲವು ಕಡೆ ಹರಿದಿದ್ದವು. ಕೂದಲು ಸರಿಯಾಗಿ ಬಾಚಿರಲಿಲ್ಲ. ಮುಖದಲ್ಲಿ ಒಂದು ಬಗೆಯ ನಾಚಿಕೆ, ಅಧೈರ್ಯ ಇದ್ದುವು. ಆದರೂ ಮುಖದಲ್ಲಿ ಒಂದು ಬಗೆಯ ಕಳೆ. ಆ ವ್ಯಕ್ತಿಯನ್ನು ಹಲವು ಸಲ ಕಾಲೇಜಿನಲ್ಲಿ ಕಂಡಿದ್ದೆ, ಆದರೆ ಆತ ಯಾರೆಂದು ವಿಚಾರಿಸುವ ಗೋಜಿಗೆ ಹೋಗಿರಲಿಲ್ಲ.

"ಯಾರು?" ಎಂದೆ.

"ನಾನು ಸಾರ್" ಮೆಲುದನಿಯಲ್ಲಿ ಆತ ಹೇಳಿದ.

"ನಾನು ಎಂದರೆ ಯಾರ್ರೀ?"

ಹತ್ತಿರ ಬರುತ್ತಾ ಆತ ಹೇಳಿದ- "ನನ್ನ ಹೆಸರು ಶಾಮಣ್ಣ ಅಂತ ಸಾರ್. ನಿಮ್ಮ ಕಾಲೇಜಿನಲ್ಲೇ ಓದುತ್ತಿದ್ದೇನೆ. ನಿಮ್ಮನ್ನು ಕಾಲೇಜಿನಲ್ಲಿ ನೋಡಿದ್ದೇನ" ಎಂದ.

ವೆಂಕಟು ಯಾವಾಗಲೂ ಒರಟೇ—ಸ್ವಲ್ಪ ಕಠೋರವಾಗಿಯೇ ಕೇಳಿದ "ಇಲ್ಲೇನ್ರಿ ಕೆಲ್ಸ ನಿಮಗೆ?"

ನಾನೇ ಶಾಮಣ್ಣ ಆಗಿದ್ದಿದ್ದರೆ, "ಇದು ಸಾರ್ವಜನಿಕ ಸ್ಥಳ, ನಿಮ್ಮಪ್ಪ ಕಟ್ಟಿಸಿದ್ದಲ್ಲ" ಎಂದು ಉತ್ತರ ಕೊಡುತ್ತಿದ್ದೆನೋ ಏನೋ. ಆದರೆ ಶಾಮಣ್ಣ ತಾಳ್ಮೆಯಿಂದಲೇ ಉತ್ತರವಿತ್ತ—"ನೀವು ಬರೋದಕ್ಕೆ ಮೊದಲೇ ಆ ಕಡೆ ಬಂಡೆಯ ಮೇಲೆ ಕುಳಿತಿದ್ದೆ, ಸಾರ್. ನಿಮ್ಮ ಮಾತು ಕೇಳಿಸ್ತು—"

"ಓ, ಇತರರ ಮಾತು ಹೊಂಚಿ ಕೇಳೋದಕ್ಕೆ ಸರ್ಕಾರ ನಿಮಗೂ ಸಂಬಳ ಕೊಡ್ತಾ ಇದೆಯೋ?" ಕೆರಳಿ ಕೇಳಿದ ವೆಂಕಟು. ಅವನ ಕೈ ಮುಂದೆ

ಹೋಗುವುದಕ್ಕೆ ತವಕಪಡುತಿತ್ತು. ಆದರೂ ಕಷ್ಟದಿಂದ ಅದನ್ನು ಅಂಕೆಯಲ್ಲಿಟ್ಟಿದ್ದ ಅವನು.

"ಕ್ಷಮಿಸಿ ಸಾರ್. ಉದ್ದಿಶ್ಯಪೂರ್ವಕವಾಗಿ ತಮ್ಮ ಮಾತು ನಾನು ಕೇಳಲಿಲ್ಲ, ಅದಾಗಿಯೇ ಕಿವಿಗೆ ಬಿತ್ತು. ಮೂರ್ತಿ ಅವರ್ನ ಕಾಲೇಜಿನಲ್ಲಿ ನೋಡ್ತಾ ಇದ್ದೆ. ಆದ್ದರಿಂದ ನನ್ನಿಂದ ತಮಗೆ ಏನಾದರೂ ಸಹಾಯವಾದೀತೇ ಅಂತ ಕೇಳೋದಕ್ಕೆ ಬಂದೆ."

ನಾವು ಮುಖ ಮುಖ ನೋಡಿಕೊಂಡೆವು. ಅವನನ್ನು ನಂಬುವುದೇ ಬಿಡುವುದೇ ಎಂಬುದು ಬಗೆಹರಿಯಲಿಲ್ಲ. ಕೊನೆಗೆ ಉಳಿದವರೆಲ್ಲ ಹೊರಟರು, ನಾನು ಅವನನ್ನು ಕರೆದುಕೊಂಡು ಮನೆಯ ಕಡೆ ಹೊರಟೆ.

ದಾರಿಯಲ್ಲಿ ನಾನು ಕೇಳಿದುದಕ್ಕೆಲ್ಲ ನಮ್ರತೆಯಿಂದ ಉತ್ತರ ಹೇಳಿದ. ಹಲವು ಬಗೆಗಳಲ್ಲಿ ಪ್ರಶ್ನಿಸಿ ನೋಡಿದೆ, ಅವನಲ್ಲಿ ಕಾಪಟ್ಯವಾಗಲೀ, ಅಹಂಕಾರವಾಗಲಿ ಎಳ್ಳಷ್ಟೂ ಕಂಡುಬರಲಿಲ್ಲ. ನನಗೆ ಶಾಮಣ್ಣನ ಪರಿಚಯ ಆದದ್ದು ಹೀಗೆ.

ಕೊನೆಗೆ ಅವನನ್ನು ನಮ್ಮ ತಂಡಕ್ಕೆ ಸೇರಿಸಿಕೊಂಡೆ. ಸೇರಿಸಿಕೊಳ್ಳುವ ಮೊದಲು ಅವನನ್ನು ನಾನು ಎಚ್ಚರಿಕೆಯಿಂದ ಪರೀಕ್ಷಿಸಿದ್ದು, ಅವನನ್ನು ಸೇರಿಸಿಕೊಂಡಾಗ ಇತರರ ಪ್ರತಿಭಟನೆ, ಇದೆಲ್ಲ ಹೇಳುತ್ತ ಹೋದರೆ ಅದೇ ಒಂದು ಕತೆ ಆದೀತು. ವೆಂಕಟು—"ಯಾವನೋ ಏನೋ ಆತ, ನಮ್ಮ ತಲೆಗೆ ತರುತ್ತಾನೆ ನೋಡ್ತಾ ಇರು. ನಾವು ಜೈಲಿಗೆ ಹೋದರೆ ಯೋಚನೆ ಇಲ್ಲ. ಆದರೆ 'ರಕ್ತ ಕಾಣಿಕೆ' ಯ ಗತಿಯೇನು?" ಎಂದು ಹಲುಬುತ್ತಿದ್ದ. ಆದರೆ ಅದನ್ನೆಲ್ಲ ನಿಮಗೆ ವಿವರಿಸುವುದಿಲ್ಲ. ಏಕೆಂದರೆ ನಾನು ನಿಮಗೆ ಹೇಳುವ ಕತೆ, ಶಾಮಣ್ಣನದಲ್ಲ, ಅರುಣಳದು"

"ಅರುಣ? ಅರುಣ ಯಾರಯ್ಯಾ?" ಅನಂತ ಕೇಳಿದ.

"ನನ್ನ ರೂಂನಲ್ಲಿ ಫೋಟೋ ಇಲ್ಲವೇ, ಆ ಹುಡುಗಿ" ಮೂರ್ತಿ ಹೇಳಿದ.

"ಹೂಂ, ಸರಿಯಪ್ಪ. ಕತೆ ಮುಂದೆ ಸಾಗಲಿ."

"ಶಾಮಣ್ಣನದು ಒಂದು ಬಗೆಯ ಸ್ವಭಾವ. ಹೆಚ್ಚು ಮಾತಿಲ್ಲ. ಯಾರಾದರೂ ಮಾತನಾಡಿಸಿದರೆ 'ಹೂಂ' 'ಉಹೂಂ' ಇಷ್ಟೇ ಉತ್ತರ. ತನ್ನ

ವಿಚಾರವಂತೂ ಸುದ್ದಿಯೆತ್ತುತ್ತಿರಲಿಲ್ಲ. ನಮ್ಮಲ್ಲಿ ಕೆಲವರು ಮಾತುಗಂಟರು. ಅಂತಹವರಿಗೆ ಅವನನ್ನು ಕಂಡರೆ ಸರಿಬೀಳದು "ಮಾತಾಡದ ಆ ಕದೀಮನ್ನ ನಂಬಬೇಡ". ಎಂದು ಆಗಾಗ ಎಚ್ಚರಿಕೆ ಕೊಡುತ್ತಿದ್ದರು. ಆದರೆ ಕೆಲಸದಲ್ಲಿ ಆತ ನಿಸ್ಸೀಮ. ಅವನಿಗೆ ಒಪ್ಪಿಸಿದ ಕೆಲಸದ ಚಿಂತೆ ನನಗಿರುತ್ತಿರಲ್ಲಿಲ್ಲ.

ನಮ್ಮ ಪತ್ರಿಕೆ ಆರಂಭವಾಯ್ತು. ಅದನ್ನು ನಡೆಸಲು ಎಷ್ಟು ಕಷ್ಟಪಟ್ಟೆವೆಂಬುದನ್ನು ಹೆಚ್ಚು ವರ್ಣಿಸುವ ಗೋಜಿಗೆ ಹೋಗುವುದಿಲ್ಲ. ನಾವೆಲ್ಲ ಮುಳ್ಳಿನ ಮೇಲಿದ್ದಂತೆ ಇದ್ದೆವು. ಪತ್ರಿಕೆಯನ್ನು ನಡೆಸುವವರನ್ನು ಬಂಧಿಸಲು, ಯಂತ್ರವನ್ನು ವಶಪಡಿಸಿಕೊಳ್ಳಲು ಪೋಲೀಸರು ಶತ ಪ್ರಯತ್ನ ಮಾಡಿದರು. ನಮ್ಮ ಯಂತ್ರವನ್ನು ಸ್ಥಳದಿಂದ ಸ್ಥಳಕ್ಕೆ ಆಗಾಗ—ಸ್ವಲ್ಪ ಹೆಚ್ಚು ಕಡಿಮೆ ಪ್ರತಿ ದಿನವೂ ಸಾಗಿಸಬೇಕಾಗುತ್ತಿತ್ತು. ಒಂದೊಂದು ಸಲ ಒಂದೇ ದಿನ ಯಂತ್ರವನ್ನು ಎರಡು—ಮೂರು ಸಲ ಸ್ಥಳ ಬದಲಾವಣೆ ಮಾಡಿದ್ದೇವೆ. ಪತ್ರಿಕೆಯನ್ನು ಹಂಚುವುದೂ ಕಷ್ಟದ ಕೆಲಸ. ಎಲ್ಲದರಲ್ಲೂ ಶಾಮಣ್ಣ ನಮಗೆ ನೆರವಾದ.

ಒಂದು ದಿನ ಮಧ್ಯಾಹ್ನ, ನಮ್ಮ ಪತ್ರಿಕೆಯ ಪ್ರತಿಗಳು ಸಿದ್ಧವಾಗುತ್ತಿದ್ದಾಗ ಶಾಮಣ್ಣ 'ಸಾರ್' ಎಂದ.

"ಏನ್ರೀ ಶಾಮಣ್ಣ?"

"ಇನ್ನೊಂದೆರಡ್ಮೂರು ದಿನ....ಸ್ವಲ್ಪ...."

"ಯಾಕೆ ಕಛೇರಿಗೆ ಬರೋದಕ್ಕಾಗೊಲ್ವೇನ್ರಿ?"

"ಊರಿಗೆ ಹೋಗಿ ಬರಬೇಕಾಗಿದೆ, ಸಾರ್."

ನನಗೆ ಸ್ವಲ್ಪ ಅಸಮಾಧಾನವಾಯಿತು. ಏಕೆಂದರೆ ಆ ಮೂರು ದಿನ ನನಗೇ ಬಿಡುವು ಬೇಕಾಗಿತ್ತು. ನೋಡಿ ಶಾಮಣ್ಣ, ನಾಡಿದ್ದು ನನ್ನ ಸೋದರತ್ತೆ ಮಗಳ ಮದುವೆ- ಇದೇ ಊರಿನಲ್ಲೇ. ನಾಳೆಯಿಂದ ಮೂರು ದಿನ ನನಗೂ ಪತ್ರಿಕೆಯ ಕೆಲಸ ಮಾಡೋದಕ್ಕೆ ಸಾಧ್ಯವಿಲ್ಲ. ನೀವೂ ಹೊರಟು ಬಿಟ್ಟರೆ ಕಷ್ಟ. ಪತ್ರಿಕೆ ಮೂರು ದಿನ ನಿಲ್ಲಬೇಕಾಗತ್ತೆ. ನಿಮ್ಮಿಷ್ಟ, ನೋಡಿ ಎಂದೆ.

"ಹೋಗಲಿ ಬಿಡಿ, ಸಾರ್'' ಎಂದ ಆತ. ಮುಖ ನೋಡಿದೆ, ಮುಖ ಮುದ್ರೆ ಗಾಂಭೀರ್ಯದ ಅಚ್ಚು.

ಮದುವೆ ಮುಗಿದ ಮೇಲೆ ಮತ್ತೆ ನಮ್ಮ ಪತ್ರಿಕೆಯ ಕಛೇರಿಗೆ ಹೋದೆ. ಶಾಮಣ್ಣನ ಭೇಟಿಯೂ ಆಯಿತು. "ಬೇಕಾದರೆ ಹೋಗಿ ಬನ್ನಿ ಶಾಮಣ್ಣ'' ಎಂದೆ. "ಬೇಡಿ ಸಾರ್" ಎಂದ. ಮುಖದಲ್ಲಿ ಯಾವ ಭಾವನೆಯ ವಿಕಾರವೂ ಸುಳಿಯಲಿಲ್ಲ.

ಮತ್ತೆ ಕೆಲವು ದಿನ ಕಳೆಯಿತು. ಒಂದು ದಿನ ರಾತ್ರಿ ಸುಮಾರು ಹತ್ತು ಗಂಟೆ. ಆಗ ತಾನೇ ನಮ್ಮ ಮುದ್ರಣಾಲಯವನ್ನು ಪಾರುಗೊಳಿಸಿ ಬಂದಿದ್ದೆವು. ಅಂದು ಕೂದಲೆಳೆಯ ಅಂತರದಿಂದ ತಪ್ಪಿಸಿಕೊಂಡಿದ್ದೆವು. ಉಳಿದವರೆಲ್ಲ ಅವರವರ ಮನೆಯ ಕಡೆ ಹೊರಟುಹೋದರು. ನಮ್ಮ ಮನೆಯ ಹತ್ತಿರ ಬಂದಾಗ ಉಳಿದಿದ್ದವರು ನಾನು, ಶಾಮಣ್ಣ. ಅವತ್ತು ಶಾಮಣ್ಣ ಎಂದಿಗಿಂತ ಮೌನವಾಗಿದ್ದ. ಮುಖ ಗಂಭೀರವಾಗಿತ್ತು. ಆದರೆ ನಾನು ನನ್ನ ಯೋಚನೆಗಳಲ್ಲೇ ಮುಳುಗಿದ್ದೆ. ಕೊನೆಗೆ "ಸಾರ್'' ಎಂದ ಶಾಮಣ್ಣ.

ನಾನು ನಿಂತೆ. "ಏನ್ರೀ?''

ಶಾಮಣ್ಣ ಉತ್ತರ ಕೊಡಲಿಲ್ಲ. ಮಾತನಾಡಲು ಅವನು ಅನುಮಾನಿಸಿದಂತೆ ತೋರಿತು. ಬೇಸರದಿಂದ "ಏನ್ರೀ?'' ಎಂದೆ ಮತ್ತೆ.

"ನನ್ನ ರೂಮಿಗೆ ಒಬ್ಬ ಹುಡುಗಿ ಬಂದಿದ್ದಾಳೆ, ಸಾರ್.''

ನನಗೆ ಬೇಸರವೂ ಆಯಿತು, ನಗೆಯೂ ಬಂತು. ನಾನು ಯೋಚಿಸುತ್ತಿದ್ದ ವಿಷಯ 'ರಕ್ತಕಾಣಿಕೆ.' ಬೇಸರದಿಂದ, "ನಿಮ್ಮ ರೂಮಿಗೆ ಹುಡುಗಿ ಬಂದರೆ ನನಗೇನು ಹೇಳ್ತೀರ್ರಿ?" ಎಂದೆ.

"ಅವಳು....ನಾನು....ಮದುವೆ ಆಗಬೇಕು ಅಂತ ಇರೋ ಹುಡುಗಿ, ಸಾರ್'' ಎಂದ.

ನನ್ನ ಕೋಪ ಇನ್ನೂ ಇಳಿದಿರಲಿಲ್ಲ.

"ಸರಿ, ನನಗೇನು ಅದೆಲ್ಲ ಕಟ್ಕೊಂಡು? ನಾಳೆ ನಿಮಗೆ ಬರೋದಕ್ಕಾಗದೇ ಇದ್ರೆ ಹಾಗೇಂತ ಹೇಳಿಬಿಡಿ.'' ಎಂದೆ.

"ಇಲ್ಲ ಸಾರ್, ಬರ್ತೇನೆ."

"ಮತ್ತಿನ್ನೇನಪ್ಪ ನಿಮ್ಮ ಮಾತು?"

"ಅವಳು ನಿಮ್ಮನ್ನ ನೋಡ್ಬೇಕಂತೆ ಸಾರ್."

ನನಗೆ ಆಶ್ಚರ್ಯವಾಯಿತು. "ಅಲ್ರೀ, ನೀವು ಮದುವೆಯಾಗೋ ಹೆಣ್ಣು ನನ್ನನ್ನ ಯಾಕ್ರೀ ನೋಡಬೇಕು? ನಿಮ್ಮ ಮದುವೆ ಆಗಲಿ; ತಪ್ಪದೆ ಬಂದು ವಧೂವರರ್ನ ಆಶೀರ್ವದಿಸಿ, ಮಂಟಪಶೋಭಾಯಮಾನ ಮಾಡ್ತಿನಿ."

"ಇಲ್ಲ ಸಾರ್. ಅವಳು ತಾನೂ ಚಳುವಳಿಗೆ ಸೇರ್ತೀನೆ ಅಂದಳು. ಬೇಡ ಎಂದೆ—"

"ಸದ್ಯ ಒಳ್ಳೇ ಕೆಲಸ ಮಾಡಿದ್ರಿ. ಭಗವಾನ್ ಬುದ್ಧ ಆನಂದನಿಗೆ ಹೇಳಲಿಲ್ಲವೇ, 'ಹೆಂಗಸರು ಇಲ್ಲಿ ಕಾಲಿಡದಿದ್ದರೆ ನನ್ನ ಮತ ೫೦೦೦ ವರ್ಷ ಉಳಿದೀತು. ಅವರು ಬಂದರೆ ಐನೂರೇ ವರ್ಷ' ಅಂತ. ಹಾಗೇ ನಾವು ನಾವೇ ಆಗಿದ್ದರೆ ನಮ್ಮ ಕೆಲಸ ಸರಿಯಾಗಿ ನಡೆಯುತ್ತೆ. ಹೆಂಗಸರು ಕಾಲಿಟ್ಟರೆ 'ರಕ್ತಕಾಣಿಕೆ' ಮಣ್ಣು ಪಾಲೇ."

ಅವನ ಮುಖ ನೋಡಿದೆ. ಅವನಿಗೆ ಅಸಮಾಧಾನವಾಗಿತ್ತೆಂಬುದು ಸ್ಪಷ್ಟವಾಗಿತ್ತು. ಆದರೂ ಮುಂದುವರಿಸಿದ-"ಅವಳು 'ನಿಮ್ಮ ನಾಯಕರ್ನೇ ನೋಡ್ತೇನೆ, ಅವರ್ನೇ ಕೇಳ್ತೇನೆ, ಅವರು ಬೇಡ ಎಂದರೆ ಸುಮ್ಮನಾಗಿ ಬಿಡ್ತೇನೆ,' ಅಂದಳು. ನಾನೇ ಅವಳ್ನ ನಿಮಗೆ ಪರಿಚಯ ಮಾಡಿಕೊಡದೇ ಹೋದರೆ ಅವಳೇ ನಿಮ್ಮ ಮನೆ ಹುಡುಕಿಕೊಂಡು ಬರ್ತೇನೆ ಅಂತ ಹೆದರಿಸಿದಳು ಸಾರ್."

"ನನ್ನ ಹೆಸರು ಅವರಿಗೆ ಹೇಳಿದವರು ಯಾರು?"

ಶಾಮಣ್ಣ ತಲೆ ತಗ್ಗಿಸಿದ್ದ.

"ನೋಡಿ ಶಾಮಣ್ಣ. ಇದೇ ನನಗೆ ಬೇಸರಪಡಿಸೋದು. ನಾವೆಲ್ಲ ಗುಟ್ಟಾಗಿ ಕೆಲಸಮಾಡೋದಕ್ಕೆ ಇಷ್ಟು ಪಾಡು ಪಡ್ತಾ ಇದ್ದೇವೆ. ನೀವು ಯಾವ್ದೋ ಹುಡುಗೀಗೆ ನಮ್ಮ ಹೆಸರು, ಕುಲ, ಗೋತ್ರ, ವಿಳಾಸ ಎಲ್ಲ ತಿಳಿಸ್ಬಿಟ್ರೆ ನಮ್ಮ ಗತಿಯೇನು ಹೇಳಿ?"

"ತಾವು ಸ್ವಲ್ಪ ತಾಳ್ಮೆಯಿಂದ ಇದ್ದರೆ ಎಲ್ಲ ಹೇಳ್ತೀನಿ, ಸಾರ್."

"ಹೇಳೀಪ್ಪ ಅದೇನು ಹೇಳ್ತೀರೊ. ಆವತ್ನಿಂದ ವೆಂಕಟು ಅವರೆಲ್ಲ ನನಗೆ ಎಚ್ಚರಿಕೆ ಕೊಡ್ತಾಲೇ ಇದ್ರು, ನಿರ್ಲಕ್ಷ್ಯ ಮಾಡಿದ್ದು ನನ್ನ ತಪ್ಪು."

ನನ್ನ ಮಾತನ್ನು ಕಿವಿಗೆ ಹಾಕಿಕೊಳ್ಳದೆ ಹೇಳಿದ ಶಾಮಣ್ಣ—"ಆ ಹುಡುಗಿ ತಂದೆ ನಮ್ಮ ಊರಿನಲ್ಲಿ ಪೋಲೀಸು ಕಾನ್ಸ್‌ಟೇಬಲ್ ಆಗಿದ್ರು ಸಾರ್, ಅವರ ಮೊದಲನೇ ಹೆಂಡತಿ ಮಗಳು ಇವಳು. ಅವರು ಎರಡನೇ ಮದುವೆ ಮೊನ್ನೆ ಮಾಡಿಕೊಂಡರು, ಆಕೆ ತುಂಬಾ ಚಿಕ್ಕ ವಯಸ್ಸಿನವರು, ಮದುವೆ ಆದ ಆರು ತಿಂಗಳಿಗೆ ಆತ ಸತ್ತು ಹೋದರು. ಅವರಿವರು ಸೇರಿ ಆಕೇನ ಪುಸ ಲಾಯಿಸಿ ಕ್ರಿಶ್ಚಿಯನ್ ಜಾತಿಗೆ ಸೇರಿಸಿಬಿಟ್ಟರು, ಆಕೆ ಮತ್ತೆ ಮದುವೆಯಾಗಿ ದ್ದಾರೆ."

ನನ್ನ ಕೋಪ ಪೂರ್ಣವಾಗಿ ಇಳಿಯದಿದ್ದರೂ ಕತೆಯಲ್ಲಿ ನನಗೆ ಆಸಕ್ತಿ ಹುಟ್ಟಿತ್ತು. 'ಮತ್ತೆ ಈ ಹುಡುಗಿ?' ಎಂದು ಪ್ರಶ್ನಿಸಿದೆ.

"ಇವಳಿಗೂ ಕ್ರಿಶ್ಚಿಯನ್ ಆಗೂ ಅಂತ ಪ್ರೋತ್ಸಾಹಿಸಿದರಂತೆ ಸಾರ್— ಆದರೆ ನಾನು ಆ ಊರು ಬಿಡೋದಕ್ಕೆ ಮೊದಲೇ ನಾವಿಬ್ಬರೂ ಮದುವೆ ಆಗ್ತೀವಿ ಅಂತ ನಿಶ್ಚಯ ಮಾಡಿಕೊಂಡಿದ್ವಿ. ಒಳ್ಳೇ ವರನಿಗೆ ಕೊಟ್ಟು ಮದುವೆ ಮಾಡ್ತೇವೆ ಅಂತ ಆಸೆ ತೋರಿಸಿದರಂತೆ, 'ಒಲ್ಲೆ' ಎಂದಳು ಇವಳು. ನನಗೆ ಕಾಗದ ಬರೆದಳು. ತಕ್ಷಣ ಬಾ ಅಂತ."

"ಮತ್ತೆ ಹೋಗಲೇ ಇಲ್ಲವಲ್ಲ ನೀವು?"

"ಹೋಗಬೇಕು ಅಂತ ಇದ್ದೆ, ಸಾರ್. ಆದರೆ ನೀವು ನಿಮ್ಮ ಸೋದರತ್ತೆ ಮಗಳ ಮದುವೆಗೆ ಹೋಗಬೇಕು ಅಂದ್ರಿ. 'ಬರೋದಕ್ಕೆ ಆಗೋದಿಲ್ಲ' ಅಂತ ಬರೆದೆ. 'ಕಾಲೇಜು ಕೂಡ ಇಲ್ಲ ಅಂತ ಎಲ್ಲರೂ ಹೇಳ್ತಾರೆ, ಬರೋದಕ್ಕೆ ಆಗದೆ ಇರೋ ಅಂತಹ ಕೆಲಸ ಏನು?' ಅಂತ ಕಾಗದ ಬರೆದಳು, ಸಾರ್. 'ದೇಶಸೇವೆ ಮಾಡೋಣ ನನ್ನ ಕೈಯ್ಯಲ್ಲಾದಷ್ಟು ಅಂತ ಇದ್ದೇನೆ' ಎಂದು ಬರೆದೆ. ಊರಿನಲ್ಲಿ ಅವರಿವರು ಬ್ರಾಹ್ಮಣರ ಮನೆಯಲ್ಲಿ ಊಟಮಾಡಿ ಕೊಂಡಿದ್ದು ಬೇಸರವಾಯಿತಂತೆ. 'ಬರುತ್ತೇನೆ' ಅಂತ ಕಾಗದ ಬರೆದಳು. ಆವತ್ತು ಮಧ್ಯಾಹ್ನವೇ ಬಂದುಬಿಟ್ಟಳು."

ನನಗೆ ಆಶ್ಚರ್ಯವಾಯಿತು. 'ಪ್ರೇಯಸಿ ಬಂದಿದ್ದರೂ ಪತ್ರಿಕಾಲಯಕ್ಕೆ ಹೊತ್ತಿಗೆ ಸರಿಯಾಗಿ ಬಂದು ದುಡಿಯುತ್ತಾನಲ್ಲ ಈ ಪ್ರಾಣಿ!' ಎಂದುಕೊಂಡೆ. ಆವನು ಕತೆ ಮುಂದುವರಿಸಿದ- "ಮೊನ್ನೆ ಆವಳಿಗೆ ನಮ್ಮ ಕೆಲಸವನ್ನೆಲ್ಲ ವಿವರಿಸಿದೆ. ಎಷ್ಟೇ ಆಗಲಿ ಹಳ್ಳಿಯ ಹುಡುಗಿ, ಎಲ್ಲ ಅವಳಿಗೆ ಅರ್ಥವಾಗಲಿಲ್ಲ. ಆದರೆ ತಾನೂ ಚಳುವಳಿ ಸೇರುತ್ತೇನೆ—ಜೈಲಿಗೆ ಹೋಗುತ್ತೇನೆ ಎನ್ನುತ್ತಾಳೆ. ತಾವು 'ಬೇಡ' ಎಂದರೆ ತಮ್ಮ ಮಾತು ಕೇಳಬಹುದು."

ನಾನು ಗಡಿಯಾರ ನೋಡಿಕೊಂಡೆ. ಹತ್ತೂವರೆಯಾಗಿತ್ತು. "ನಾಳೆ ಬೆಳಿಗ್ಗೆ ಬರುತ್ತೇನೆ, ಶಾಮಣ್ಣ. ಆದರೆ, ಆಕೆ ಇರೋದೆಲ್ಲಿ?" ಎಂದು ಕೇಳಿದೆ. "ನನ್ನ ರೂಮಿನಲ್ಲೇ ಇದ್ದಾಳೆ ಸಾರ್. ನಾನೇ ಬೆಳಿಗ್ಗೆ ಬಂದು ನಿಮ್ಮನ್ನ ಕರಕೊಂಡು ಹೋಗ್ತೇನೆ. ಎಷ್ಟು ಹೊತ್ತಿಗೆ ಬರಲಿ?" ಎಂದು ಕೇಳಿದ. "ಏಳು ಘಂಟೆಗೆ" ಎಂದೆ ನಾನು.

ಮರುದಿನ ಏಳು ಘಂಟೆಗೆ ಸರಿಯಾಗಿ ಬಂದ ಶಾಮಣ್ಣ. ನಾನೂ ಸಿದ್ಧವಾಗಿದ್ದೆ. ಇಬ್ಬರೂ ಹೊರಟೆವು. ದಾರಿಯಲ್ಲಿ "ಸಾರ್, ದಯೆಯಿಟ್ಟು ಅವಳು ಚಳುವಳಿಗೆ ಸೇರೋದಕ್ಕೆ ಒಪ್ಪಬೇಡಿ, ಸಾರ್" ಎಂದ ಶಾಮಣ್ಣ.

"ಯಾಕ್ರೀ?" ಎಂದೆ.

"ಜೈಲುಗಿಯ್ಲಿಗೆ ಹೋಗಬೇಕಾದರೆ ಕಷ್ಟ, ಸಾರ್"

"ಏನ್ರೀ ಶಾಮಣ್ಣ, ನೀವೇ ಹೀಗಂತೀರಿ? ದೇಶದ ಕರೆ ಬಂದಾಗ ಅವರು ಜೈಲಿಗೆ ಹೋದರೆ ಸಂತೋಷ ಪಡಬೇಕ್ರಿ ನೀವು" ಎಂದೆ.

"ಇಲ್ಲ ಸಾರ್. ಅವಳು ಅಂತಹ ಶಕ್ತಿವಂತ ಹುಡುಗಿ ಅಲ್ಲ. ಆ ಕಷ್ಟಗಳೆಲ್ಲ ತಡೆಯೋದಕ್ಕೆ ಅವಳಿಗೆ ಆಗೋಲ್ಲ." ಎಂದ ಶಾಮಣ್ಣ. ನಾನು ಮನಸ್ಸಿನಲ್ಲೇ ನಕ್ಕೆ.

ಅಷ್ಟು ಹೊತ್ತಿಗೆ ಆತ ಒಂದು ಗಲ್ಲಿಯೊಳಕ್ಕೆ ನುಗ್ಗಿದ. ಅಲ್ಲಿ ಕಾಲಿಡುವುದಕ್ಕೇ ಹಿಂಜರಿದೆ ನಾನು. ಆತ ತಿರುಗಿ ನೋಡಿದ, ಮುಖದಲ್ಲಿ ನೋವು ಮನೆಮಾಡಿತ್ತು.

"ಕ್ಷಮಿಸಿ ಸಾರ್, ಈ ಹೊಲಸಿನ ಸ್ಥಳಕ್ಕೆ ಕರೆದುಕೊಂಡು ಬಂದೆ" ಎಂದ.

ಅವನ ನೋವು ನೋಡಲಾರದೆ, "ಚಿಂತೆಯಿಲ್ಲ, ನಡೆಯಿರಿ" ಎಂದೆ. ನಾಲ್ಕಾರು ಸಂದಿಗಳಲ್ಲಿ ಹಾದು ಕೊನೆಗೆ ಮುರುಕು ಮನೆಯೊಂದಕ್ಕೆ ಬಂದ. "ಒಂದು ನಿಮಿಷ ಸಾರ್" ಎಂದು ಹೊರಗಿನ ಕೊಠಡಿಯ ಬಾಗಿಲು ತಟ್ಟಿದ—ಬಾಗಿಲು ತೆರೆಯಿತು. ಅವನು ಒಳಗೆ ಹೋದ.

ನನಗೆ ಆಗಲೇ ತಲೆ ತಿರುಗುತ್ತಿತ್ತು. ಮನೆಯ ಮುಂದಿನ ಚರಂಡಿಯ ವಾಸನೆ, ಸೊಳ್ಳೆಗಳ ಆತಿಥ್ಯ ಎಲ್ಲ ನನಗೆ ಹುಚ್ಚು ಹಿಡಿಸಿದ್ದುವು. ಅಷ್ಟು ಹೊತ್ತಿಗೆ ಅವನು "ಬನ್ನಿ ಸಾರ್" ಎಂದು ಕೂಗಿದ. ಕೊಠಡಿಯೊಳಗೆ ಹೋದೆ. ಕೊಠಡಿ ತೀರ ಚಿಕ್ಕದೂ ಅಲ್ಲ—ದೊಡ್ಡದೂ ಅಲ್ಲ. ಇದ್ದದ್ದು ಒಂದೇ ಕಿಟಕಿ. ನಾನು ಒಳಗೆ ಹೋದಾಗ ಶಾಮಣ್ಣನ ಹಿಂದೆ ನಿಂತಿದ್ದ ಸ್ತ್ರೀ ವ್ಯಕ್ತಿಯೊಂದು ಪಕ್ಕಕ್ಕೆ ಸರಿಯಿತು.

"ಇವಳೇ ಸಾರ್, ಅರುಣ."

ಅರ್ಧ ಕ್ಷಣ ಹುಡುಗಿಯ ಮತ್ತು ನನ್ನ ಕಣ್ಣು ಸಂಧಿಸಿದುವು; ತಕ್ಷಣ ಹುಡುಗಿ ತಲೆ ತಗ್ಗಿಸಿದಳು. ಶಾಮಣ್ಣನ ಭುಜಕ್ಕೆ ಬರುತ್ತಿದ್ದಳು ಹುಡುಗಿ. ಗುಲಾಬಿ ಬಣ್ಣದ ಸೀರೆ ಉಟ್ಟಿದ್ದಳು, ಸೀರೆಯ ಬಣ್ಣಕ್ಕೂ ಅವಳ ಮೈ ಬಣ್ಣಕ್ಕೂ ವ್ಯತ್ಯಾಸವೇ ಗೊತ್ತಾಗುವಂತಿರಲಿಲ್ಲ. ಎರಡು ಹೆರಳು ಹಾಕಿಕೊಂಡಿದ್ದಳು. ಒಂದರಲ್ಲಿ ಆಗ ತಾನೇ ಅರಳಿದ ಕೆಂಪು ಗುಲಾಬಿ, ಮತ್ತೊಂದರಲ್ಲಿ ಒಂದು ಬಿಳೀ ಗುಲಾಬಿ. ಒಟ್ಟಿನಲ್ಲಿ ಅರುಣೋದಯದ ಶಾಂತಿ, ಅರುಣೋದಯದ ಸೌಂದರ್ಯ ಅವಳಲ್ಲಿ ಮೂರ್ತಿಮತ್ತಾಗಿದ್ದುವು. 'ಅರುಣ' ಚೆಲುವಾದ ಹೆಸರು; ಹಾಗೆಯೇ ಹುಡುಗಿಯೂ ಚೆಲುವು. 'ಕೆಸರಿನ ಕಮಲ' ಎಂದುಕೊಂಡೆ."

"ಓ ಸರಿ, ಸರಿ, ಗೊತ್ತಾಯಿತು ಬಿಡು" ಎಂದ ಶ್ರೀಧರ.

"ಏನು ಗೊತ್ತಾಯಿತು ನಿನ್ನ ತಲೆ?" ಮೂರ್ತಿ ಕೋಪದಿಂದ ಕೇಳಿದ.

"ಆ ಹುಡುಗೀನ ಲವ್ ಮಾಡಿದಿ. ಅಷ್ಟೇ ತಾನೆ?" ನಗುತ್ತ ಕೇಳಿದ ಶ್ರೀಧರ.

"ಬಾಯಿ ಮುಚ್ಚಿಕೊಂಡು ಕತೆ ಕೇಳು" ಎಂದು ಮೂರ್ತಿ ಕತೆ ಮುಂದುವರಿಸಿದ—

"ಹುಡುಗಿಯ ಜೊತೆಗೆ ಸ್ವಲ್ಪ ಮಾತನಾಡುತ್ತಿದ್ದೆ. ತುಂಬಾ ಸರಳ ಸ್ವಭಾವದವಳು. ಹೆಚ್ಚು ಓದಿರಲಿಲ್ಲ. ಓದುವುದಕ್ಕೆ ಬರೆಯುವುದಕ್ಕೆ ಬರುತ್ತಿತ್ತು. ಕಾಂಗ್ರೆಸ್, ಸತ್ಯಾಗ್ರಹ, ಸ್ವರಾಜ್ಯ—ಇವುಗಳೆಲ್ಲ ಅವಳಿಗೆ ಪೂರ್ಣವಾಗಿ ಅರ್ಥವಾಗಿರಲಿಲ್ಲ. ಆದರೆ ಗಾಂಧಿ, ನೆಹ್ರೂ, ಕಸ್ತೂರಿ ಬಾ--ಎಲ್ಲರ ಹೆಸರು ಕೇಳಿದ್ದಳು. ಕಾಂಗ್ರೆಸ್ ಎಂದರೆ ಬ್ರಿಟಿಷರನ್ನು ಓಡಿಸಲು ಶ್ರಮಿಸುವ ಸಂಸ್ಥೆ ಎಂದು ಅರ್ಥಮಾಡಿಕೊಂಡಿದ್ದಳು. ಊರಿಗೆ ಬಂದಮೇಲೆ ಶಾಮಣ್ಣ ಅವಳಿಗೆ ಎಷ್ಟೋ ವಿಷಯಗಳನ್ನು ವಿವರಿಸಿದ್ದ. ಹುಡುಗಿ ಬುದ್ಧಿವಂತೆ, ಅವನ್ನೆಲ್ಲಾ ನೆನಪಿಟ್ಟುಕೊಂಡಿದ್ದಳು.

"ನಾನು ನಿಮ್ಮ ಚಳುವಳಿಗೆ ಸೇರಕೂಡದೆ?" ಎಂದಳು.

ಶಾಮಣ್ಣನ ಕಡೆ ನೋಡಿದೆ. ದೈನ್ಯವೇ ಮೂರ್ತಿವೆತ್ತ ಹಾಗಿತ್ತು ಅವನ ಮುಖ.

"ಉಹೂಂ" ಎಂದೆ.

"ಯಾಕೆ?"

"ಇದೆಲ್ಲ ಕಷ್ಟದ ಕೆಲಸ, ಮಿಸ್ ಅರುಣ."

"ಜೈಲಿಗೆ ಹೋಗೋದಕ್ಕೆ ಸಿದ್ಧವಾಗಿದ್ದೇನೆ ನಾನು."

"ಜೈಲಿಗೆ ಹೋಗೋದೇ ಕಷ್ಟ ಅಂತ ತಿಳಕೊಳ್ಳಬೇಡಿ. ಲಾಠಿ ಏಟು ತಿನ್ನಬೇಕು, ಪೋಲೀಸರ ಕೈಯಲ್ಲಿ ಉಗುಳಿಸಿಕೊಳ್ಳಬೇಕು, ಹಲವು ದಿವಸ ಅನ್ನ—ನೀರಿಲ್ಲದೆ ಇರಬೇಕು."

"ನಿಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಕೆಲವರು ಸೇರಿದ್ದಾರಂತಲ್ಲ?"

"ಯಾರು ಹೇಳಿದರು?"

"ನಿಮ್ಮ ಸ್ನೇಹಿತರೇ. ಅದರಲ್ಲೂ ಒಬ್ಬಾಕೆ—ಯಾರಪ್ಪ ಅದು? ಹೆಸರೇ ಮರೆತ್ಹೋಗತ್ತೆ—ಆಂ, ಮಿಸ್ ಪುಷ್ಪ ಅನ್ನೋರ್ನ ಎಷ್ಟು ಹೊಗಳ್ತಾರೆ!"

"ಮಿಸ್ ಪುಷ್ಪ ನನಗೂ ಪರಿಚಿತರೇ. ಆಕೆಯನ್ನು ಎಷ್ಟು ಹೊಗಳಿದರೂ ಸಾಲದು. ನಿಜವಾಗಿ ದೇಶಕ್ಕೋಸ್ಕರ ಎಲ್ಲ ತ್ಯಾಗಮಾಡಿ ದುಡಿಯುತ್ತಿದ್ದಾರೆ ಅವರು."

"ಆಕೆ ಚಳುವಳಿಗೆ ಸೇರಿದ ಮೇಲೆ ನಾನೂ ಏಕೆ ಸೇರಬಾರದು?"

ನನಗೆ ಆ ಮಾತಿಗೆ ಉತ್ತರ ಕೊಡುವುದಕ್ಕೆ ಆಗಲಿಲ್ಲ; ಉಪಾಯವಾಗಿ ಮಾತು ಬದಲಾಯಿಸಿದೆ. 'ಬೇಡ, ಬೇಡ' ಎಂದರೂ ಹುಡುಗಿ ಕಾಫಿ ಮಾಡಲು ಒಲೆ ಹೊತ್ತಿಸಿದಳು. ಮರಳುತ್ತಿದ್ದ ನೀರಿನ ಪಾತ್ರೆಯನ್ನು ಇಳಿಸಲು ಹೋಗಿ ಕೈಮೇಲೆ ನೀರು ಸುರಿದುಕೊಂಡಳು. ಶಾಮಣ್ಣ ತಕ್ಷಣ ಅವಳ ಕಡೆ ಧಾವಿಸಿದ. ಒದ್ದೆ ಬಟ್ಟೆ ಕಟ್ಟುತ್ತೇನೆಂದ. ಪಕ್ಕದ ಮನೆಗೆ ಹೋಗಿ 'ಸಾಲ್ಫಸಲಿನ್' ತಂದ. ಯಾವುದೂ ಒಲ್ಲೆನೆಂದಳು ಹುಡುಗಿ. ನಗುನಗುತ್ತಾ ಕಳುಹಿಸಿದಳು.

'ನನಗೂ ನೋವು ಸಹಿಸುವ ಶಕ್ತಿ ಇದೆ' ಎಂದು ಆಕೆ ತೋರಿಸುವ ರೀತಿ ಇದು ಎಂದುಕೊಂಡೆ.

ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ಅಲ್ಲಿಂದ ಹೊರಟೆ. ಶಾಮಣ್ಣನೂ ಜೊತೆಗೆ ಬಂದ. ಇಬ್ಬರೂ ದಾರಿಯಲ್ಲಿ ಹೆಚ್ಚು ಮಾತನಾಡಲಿಲ್ಲ. ಒಂದು ಸಲ ಮಾತ್ರ "ಮರಳುವ ನೀರು ಬಿದ್ದಲ್ಲಿಗೆ ಏನೂ ಔಷಧ ಹಾಕದಿದ್ದರೆ ಕೀವು ಸೇರುವುದಿಲ್ಲವೇ ಸಾರ್" ಎಂದು ಕೇಳಿದ. 'ಇವನ ಮನಸ್ಸು ಇನ್ನೂ ಅವಳ ಬೆರಳ ಮೇಲಿದೆ' ಎಂದುಕೊಂಡೆ.

ನಾಲ್ಕು ದಿನ ಕಳೆಯಿತು. ಶಾಮಣ್ಣ ಮೊದಲಿನಷ್ಟೇ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದ. ನನಗೆ ಮತ್ತೆ ಅರುಣಳನ್ನು ನೋಡಲು ಆಗಲಿಲ್ಲ.

ಒಂದು ದಿನ ನಾನು ನಮ್ಮ ಪತ್ರಿಕಾಲಯದಲ್ಲಿದ್ದೆ. ಶಾಮಣ್ಣ ಓಡಿ ಬಂದ—

"ಸಾರ್!"

"ಏನ್ರೀ?"

"ನಾನು ಈಗಲೇ ಹಾಸನಕ್ಕೆ ಹೋಗಬೇಕಾಗಿದೆ ಸಾರ್."

"ಯಾಕ್ರೀ?"

"ನಮ್ಮಣ್ಣನ ಮೈಮೇಲೆ ಕಾರು ಹರಿದು ಹೋಗಿದೆಯಂತೆ."

"ಅಯ್ಯೋ ಪಾಪವೇ! ತಕ್ಷಣ ಹೊರಡಪ್ಪ!"

"ಇನ್ನೊಂದು ಮಾತು, ಸಾರ್—"

"ಏನ್ರೀ?"

"ಅರುಣಾನ—"

"ಅವರ್ನ ಕರೆದುಕೊಂಡು ಹೋಗೊಲ್ವೇನು?"

"ಇಲ್ಲ ಸಾರ್. ಇಲ್ಲೇ ಇರ್ತೀನಿ ಅಂತಾಳೆ. ತಮಗೆ ಬಿಡುವು ಸಿಕ್ಕಾಗ ನನ್ನ ರೂಮಿನ ಕಡೆ ಹೋಗಿ ಬರುತ್ತಿರಿ, ಸಾರ್. ನಾನೂ ಸಾಧ್ಯವಾದರೆ ಎರಡು—ಮೂರು ದಿನಗಳಲ್ಲಿ ಬಂದುಬಿಡುತ್ತೇನೆ. ನಾನು ಬಾಡಿಗೆಗೆ ಇರುವ ಮನೆಯವರಿಗೂ ಹೇಳಿದ್ದೇನೆ. ಅಲ್ಲೇ ಅರುಣಳ ವಯಸ್ಸಿನ ಹುಡುಗಿ ಒಬ್ಬಳಿದ್ದಾಳೆ. ಜೊತೆಯೂ ಇದ್ದ ಹಾಗಾಯಿತು."

"ಆಗಲೇಳಿ"

"ನನಗೆ ಒಂದೇ ಯೋಚನೆ, ಸಾರ್. ನಾನೂ ದೇಶಸೇವೆ ಮಾಡಬೇಕು ಜೈಲಿಗೆ ಹೋಗಬೇಕು ಅಂತ ಸದಾ ಹೇಳ್ತಾ ಇರ್ತಾಳೆ. ನಾನಿಲ್ದೇ ಇದ್ದಾಗ ಏನಾದ್ರೂ ಮಾಡಿಬಿಟ್ಟಾಳು ಅಂತ. ತಾವು ಸ್ವಲ್ಪ ಎಚ್ಚರಿಕೆಯಿಂದ, ಅದಕ್ಕೆ ಅವಕಾಶ ಕೊಡದ ಹಾಗೆ ಇರಬೇಕು ಸಾರ್."

ನನಗೆ ನಗು ಬಂತು, ನಕ್ಕು ಬಿಟ್ಟೆ. 'ಎಲ್ಲ ತರುಣ-ತರುಣಿಯರೂ ಚಳುವಳಿಗೆ ಸೇರಬೇಕು, ತ್ಯಾಗಮಾಡಬೇಕು, ಕಷ್ಟ ಸಹಿಸಬೇಕು ಎಂದು ಬಾಯಲ್ಲಿ ಹೇಳುವುದು. ನಮ್ಮವರು ಯಾರಾದರೂ ಸೇರುತ್ತೇವೆಂದರೆ ಬೇಡ ಎನ್ನುವುದು ನಮ್ಮ ವಿಚಿತ್ರ ಸ್ವಭಾವ' ಎನ್ನಿಸಿತು.

"ಯಾಕೆ ಸಾರ್ ನಗುತ್ತೀರಿ?" ಎಂದ ಶಾಮಣ್ಣ.

"ಯಾಕೂ ಇಲ್ಲ. ಅಗತ್ಯವಾಗಿ ಹೋಗಿಬನ್ನಿ" ಎಂದೆ.

ಆದಾದ ಮೇಲೆ ೨–೩ ದಿನ ದಿನಕ್ಕೊಂದು ಸಲ ಅರುಣಳನ್ನು ನೋಡಿಕೊಂಡು ಬರುತ್ತಿದ್ದೆ. ಯಾವಾಗಲೂ ಅವಳದು ಒಂದೇ ಪ್ರಶ್ನೆ—"ಮಿಸ್ ಪುಷ್ಪಾನ, ಇತರ ಹುಡುಗಿಯರ್ನ ಚಳುವಳಿಗೆ ಸೇರಿದರು ಅಂತ ಹೊಗಳ್ತೀರಿ. ನಾನು ಯಾಕೆ ಸೇರಬಾರದು?" ಅವಳು ಆ ಪ್ರಶ್ನೆ ಕೇಳಿದಾಗಲೆಲ್ಲ ಅವಳ ಕೈಮೇಲೆ ಮರಳುವ ನೀರು ಬಿದ್ದಾಗ ಶಾಮಣ್ಣನ ಮುಖದ ರೀತಿ ನನ್ನ ಕಣ್ಣ ಮುಂದೆ ನಿಲ್ಲುತ್ತಿತ್ತು.

ಸೆಪ್ಟಂಬರ್ ೧೧ನೇ ತಾ. ಒಂದು ಕಾಲೇಜಿನಲ್ಲಿ ಪರೀಕ್ಷೆ ಆರಂಭ. ಕೆಲವರು ವಿದ್ಯಾರ್ಥಿಗಳು ಮಾತ್ರ ಪರೀಕ್ಷೆಗೆ ಹೋಗಬೇಕೆಂದಿದ್ದಾರೆ ಎಂದು ನಮಗೆ ಗೊತ್ತಾಯಿತು. ಅದಕ್ಕೋಸ್ಕರ ಕಾಲೇಜಿನ ಬಳಿ ಸತ್ಯಾಗ್ರಹ ಹೂಡಲು ತೀರ್ಮಾನಿಸಿದೆವು. ನಾನು ಪತ್ರಿಕೆಯ ಸಂಪಾದಕನಾದ್ದರಿಂದ ಜೈಲಿಗೆ ಹೋಗುವಂತಿರಲಿಲ್ಲ. ಇತರ ಮುಖಂಡರನ್ನು ಚುನಾಯಿಸಿದೆವು. ಒಬ್ಬ ವಿದ್ಯಾರ್ಥಿನಿ, ಆರು ಜನ ವಿದ್ಯಾರ್ಥಿಗಳು ಕಾಲೇಜಿನ ಬಾಗಿಲಲ್ಲಿ 'ಪಿಕೆಟಿಂಗ್' ನಡೆಸುವ ದಳದ ನಾಯಕರಾಗಬೇಕೆಂದು ಸೆಪ್ಟಂಬರ್ ೯ನೇ ತಾ. ಸಭೆ ನಡೆಸಿ ತೀರ್ಮಾನಿಸಿದೆವು.

ಆವತ್ತು ಸಭೆ ಮುಗಿಸಿಕೊಂಡು ನಾನು ಅರುಣಳನ್ನು ನೋಡಲು ಹೋದಾಗ ರಾತ್ರಿ ಒಂಭತ್ತು ಘಂಟೆ.

"ಇದೇನು ಇವತ್ತು ಇಷ್ಟು ತಡಮಾಡಿಕೊಂಡು ಬಂದಿರಿ?" ಎಂದಳು.

ಕಾರಣ ಹೇಳಿದೆ.

"ನಾಳೆ ಕಾಲೇಜು ಬಳಿಗೆ ಹೋಗುತ್ತೀರೇನು?" ಎಂದಳು.

"ಹೂಂ."

"ನಾನೂ ಬರುತ್ತೇನೆ."

"ಉಹೂಂ."

"ಯಾಕೆ?"

"ಲಾಠಿ ಚಾರ್ಜೋ ಏನಾದರೂ ಆಗಲಿ, ಗ್ರಹಚಾರ ಸದ್ಯ."

" ಆದರೆ ಏನು?"

"ನಿಮಗೇನಾದರೂ ಏಟುಗೀಟು ಬಿದ್ದರೆ? ಶಾಮಣ್ಣ ಆ ಮೇಲೆ ನನ್ನ ಸುಮ್ಮನೆ ಬಿಡ್ತಾನೆಯೇ?"

"ನೀವು ಕರೆದುಕೊಂಡು ಹೋಗದಿದ್ದರೆ ನಾನೇ ಬರ್ತೇನೆ."

"ನಿಮಗೆ ದಾರಿ ಗೊತ್ತೇ?"

"ಗೊತ್ತಿಲ್ದೇ ಇದ್ರೆ ಯಾರ್ನಾರೂ ಕೇಳ್ಕೊಂಡು ಬರ್ತೀನಿ."

"ನನಗೆ ಕಷ್ಟಕ್ಕೆ ಬಂತು. ತಾನು ಹೇಳಿದಂತೆ ನಡೆಯುವ ಮನೋದಾರ್ಢ್ಯ ಆಕೆಗಿತ್ತೆಂಬುದು ನನಗೆ ಅರಿವಾಗಿತ್ತು. ಆಕೆ ತಾನಾಗಿಯೇ

ಹೋಗಿ ಗಲಾಟೆಯಲ್ಲಿ ಸಿಕ್ಕುಬಿದ್ದರೆ ಗತಿಯೇನು? ನಾನು ಯೋಚಿಸುತ್ತಿ
ವಾಗಲೇ ಅರುಣ ಮತ್ತೆ ನುಡಿದಳು—"ನನ್ನನ್ನು ಕಂಡರೆ ನಿಮಗೆ ಅ
ತಿರಸ್ಕಾರವೇಕೆ? ಇತರ ಹುಡುಗಿಯರಿಗಿಂತ ನಾನು ಕೀಳು ಅಂತ ನಿಮ್ಮ ಭ
ನೆಯೇ? ನಿಮ್ಮ ಸ್ನೇಹಿತರು ಚಳುವಳಿಗೆ ಸೇರಿದ ಹೆಣ್ಣು ಹುಡುಗಿಯರ
ಹೊಗಳ್ತಾರೆ, ನಾನು ಸೇರ್ತೀನಿ ಅಂದರೆ ಬೇಡ ಅಂತಾರೆ. ನೀವು ನ
ಸತ್ಯಾಗ್ರಹಕ್ಕೆ ಮುಖಂಡರಾಗಿರೋದಕ್ಕೆ ಒಬ್ಬ ವಿದ್ಯಾರ್ಥಿನೀನ ಆರಿಸಿ ಬಂ
ನಾನು ಸುಮ್ಮನೆ ನಿಮ್ಮ ಜೊತೆಗೆ ಬರ್ತೀನಿ ಅಂದರೆ ಬೇಡ ಅಂತೀರಿ. ನಿ
ರೀತಿ ನಿಮಗೇ ಅರ್ಥವಾಗಬೇಕು, ಒಪ್ಪಿಗೆಯಾಗಬೇಕು! ನಾನಂತೂ ನ
ಕಾಲೇಜು ಹತ್ತಿರ ಹೋಗಿಯೇ ಸಿದ್ಧ."

ನನ್ನ ಜೊತೆಗೆ ಬಂದರೆ ಅವಳಿಗೆ ಅಪಾಯವಾಗದ ಹಾಗೆ ನೋ
ಕೊಳ್ಳಲು ಅವಕಾಶವಿರುವುದಲ್ಲ ಎಂದು ಯೋಚಿಸಿ ಮರುದಿನ ೮॥ ಗಂಟೆ
ಸಿದ್ಧವಾಗಿರುವಂತೆ ಹೇಳಿ ಬಂದೆ.

ಮರುದಿವಸ ನಾನು ಹೋಗುವ ಹೊತ್ತಿಗೆ ಸಿದ್ಧವಾಗಿದ್ದಳು. ನಾ
ಅವಳನ್ನು ಮೊದಲು ಕಂಡಾಗ ಉಟ್ಟಿದ್ದ ಗುಲಾಬಿ ಸೀರೆ ಉಟ್ಟಿದ್ದಳ
ಅಂದಿನಂತೆ ಎರಡು ಹೆರಳು, ಎರಡು ಗುಲಾಬಿ ಹೂ. ಆದರೆ ಅವ
ಎರಡೂ ಕೆಂಪು ಗುಲಾಬಿ. ಹಣೆಯಲ್ಲಿ ಕೆಂಪಗೆ ಹೊಳೆಯುತ್ತಿದ್ದ ಕುಂಕುಮ
ಅವಳು ನನ್ನನ್ನು ನೋಡುತ್ತಲೇ, "ಬರುತ್ತೀರೋ ಇಲ್ಲವೇ ನಾನೇ ದಾ
ಕೇಳಿಕೊಂಡು ಹೋಗಬೇಕಾಗುವುದೋ ಎಂದುಕೊಂಡಿದ್ದೆ" ಎಂದಳ
ಅವಳೆಡೆಯೇ ಒಂದು ಕ್ಷಣ ದಿಟ್ಟಿಸಿ ನೋಡಿದೆ, ಎಂದಿಗಿಂತ ಚೆಲುವಾ
ತೋರಿದಳು ಅಂದು ಆ ತಂಗಿ.

ನಾವು ಕಾಲೇಜಿಗೆ ಹೋಗುವ ಹೊತ್ತಿಗೆ ಕಾಲೇಜು ಮುಂದಿ
ಚೌಕವೆಲ್ಲ ದೊಡ್ಡ ಜನಸ್ತೋಮವಾಗಿತ್ತು. ಕಾಲೇಜಿನ ದ್ವಾರದ ಬ
ಆಗಲೇ ನಿಯಮಿತ ತರುಣ ತರುಣಿಯರು ಕಾಂಗ್ರೆಸ್ ಧ್ವಜ ಹಿಡಿ
ನಿಂತಿದ್ದರು. ನಮ್ಮನ್ನು ಕಂಡಕೂಡಲೇ ಸ್ವಯಂಸೇವಕರು ಬಾಗಿಲಿಗೆ ಸ್ವ
ದೂರದಲ್ಲಿ ಸ್ಥಳಮಾಡಿಕೊಟ್ಟರು. ನಾನು, ಅರುಣ, ಇನ್ನಿಬ್ಬರು ಸ್ನೇಹಿತರ
ಅಲ್ಲಿ ನಿಂತುಕೊಂಡೆವು.

ಒಂಬತ್ತೂವರೆಗೆ ಹಲವು ವಿದ್ಯಾರ್ಥಿ ವಿದ್ಯಾರ್ಥಿನಿಯರು ಕುಳಿತಿದ್ದ ಬಸ್ಸೊಂದು ಬಂತು. ಪೋಲೀಸರು ಲಾಠಿಛಾರ್ಜು ಮಾಡಿ ದಾರಿ ಬಿಡಿಸಿ ಕೊಂಡು ನುಗ್ಗಿದರು. ಬಾಗಿಲಿಗೆ ಬಂದರು ಪೋಲೀಸರು; ಹಿಂದೆಯೇ ಬಸ್ಸು. ಜನ ಪ್ರತಿಮೆಗಳಂತೆ ಎವೆಯಿಕ್ಕದೆ ನೋಡುತ್ತಿದ್ದರು. ವಿದ್ಯಾರ್ಥಿನಿ, 'ವಂದೇ ಮಾತರಂ' ಎಂದು ಘೋಷಿಸಿದಳು. ಜನ ಸಮುದಾಯ ಪ್ರತಿಧ್ವನಿ ಕೊಟ್ಟಿತು.

"ಆವರು ಯಾರು?" ಅರುಣ ಕೇಳಿದಳು. ಅವಳ ಧ್ವನಿ ನಡುಗುತ್ತಿತ್ತು.

"ಅವರೇ ಮಿಸ್ ಪುಷ್ಪ."

ಮರುಕ್ಷಣ ಪೋಲೀಸರು ನುಗ್ಗಿದರು. 'ಇನ್‌ಕಿಲಾಬ್' ಎಂದಳು ಮಿಸ್ ಪುಷ್ಪ. 'ಜಿಂದಾಬಾದ್' ಎಂದಿತು ಜನ. ಪೋಲೀಸಿನವನೊಬ್ಬನ ಲಾಠಿಯೊಂದು ಪುಷ್ಪಳ ತಲೆಯ ಮೇಲಿಳಿಯಿತು. ಅವಳ ಕೈಯಲ್ಲಿದ್ದ ಧ್ವಜ ಚಂಡ ಮಾರುತಕ್ಕೆ ಸಿಕ್ಕಿದ ಬಾಳೆ ಎಲೆಯಂತೆ ನಡುಗಿತು. ನೋಡಲಾರದೆ ಕಣ್ಣು ಮುಚ್ಚಿಕೊಂಡೆ. 'ಅಯ್ಯೋ' ಎಂದೆ.

"ಏಕೆ?" ಎಂದಳು ಅರುಣ. ಮಾತನಾಡುವುದೇ ಕಷ್ಟವಾಗಿತ್ತು ಆವಳಿಗೆ.

"ಮೂಕನಂತೆ ಪುಷ್ಪಳ ಕೈಯಲ್ಲಿದ್ದ ಧ್ವಜ ತೋರಿಸಿದೆ. ಪುಷ್ಪ ಹಲ್ಲು ಕಚ್ಚಿ ಕಾಂಪೌಂಡ್ ಗೋಡೆಗೆ ಒರಗಿದ್ದಳು. ಕಣ್ಣು ಅರ್ಧ ಮುಚ್ಚಿತ್ತು. ಕೈಧ್ವಜವನ್ನು ಭದ್ರವಾಗಿ ಹಿಡಿಯಲು ಯತ್ನಿಸುತ್ತಿತ್ತು. ಆದರೆ ನಡುಗುತ್ತಿತ್ತು. ಹಣೆಯ ಮೇಲೆ ತಲೆಯಿಂದ ರಕ್ತ ಜಾರುತ್ತಿತ್ತು. ಆ ಹೊತ್ತಿಗೆ ಮತ್ತೊಬ್ಬ ಪೋಲೀಸನ ಲಾಠಿ ಅವಳ ಕಡೆ ಧಾವಿಸಿತು. ನೋಡಲಾರದೆ ಎರಡು ಕೈಗಳಿಂದಲೂ ಕಣ್ಣು ಮುಚ್ಚಿಕೊಂಡೆ.

'ಭಾರತ್ ಮಾತಾಕಿ ಜೈ'—ನೆರೆದಿದ್ದ ಜನವೆಲ್ಲ ಕಿರುಚಿತು. ಕಣ್ಣು ತೆರೆದೆ. ಪುಷ್ಪಳ ಕೈಯಲ್ಲಿದ್ದ ಧ್ವಜ ಕೆಳಗುರುಳಿರಲಿಲ್ಲ. ಸ್ಥಿರವಾಗಿ ನಿಂತಿತ್ತು. ಯಾವ ಕ್ಷಣದಲ್ಲೋ ಮಿಂಚಿನಂತೆ ಹಾರಿ ಅದನ್ನು ಕೈಯಲ್ಲಿ ಹಿಡಿದಿದ್ದಳು ಅರುಣ. ನಾನವಳ ಕಡೆ ನೋಡಿದಾಗ ತೃಪ್ತಿಯ, ಹೆಮ್ಮೆಯ ನಗುವೊಂದು ಅವಳ ತುಟಿಯ ಮೇಲೆ ಸುಳಿಯಿತು.

ಒಂದು ಕ್ಷಣ, ಅಷ್ಟೇ. ಮರುಕ್ಷಣ ಅರುಣ ಕೆಳಗುರುಳಿದಳು. ಯಾವ ರಾಕ್ಷಸೀ ಶಕ್ತಿಯಿತ್ತೋ ದೈವೀ ಶಕ್ತಿಯಿತ್ತೋ ನನಗೆ, ಎವೆಯಿಕ್ಕದೆ

ಅವಳನ್ನೇ ನೋಡಿದೆ. ಗುಲಾಬಿ ಬಣ್ಣದ ಸೀರೆ, ಕೆಂಪು ಕುಂಕುಮ, ಕ
ಗುಲಾಬಿ ಎಲ್ಲಾ ರಕ್ತದಲ್ಲಿ ಮಿಂದಿದ್ದುವು. ಧ್ವಜದ ಕೆಂಪು ಭಾಗ ಕೆನ್ನೆ
ಮೇಲೆ ಮೃದುವಾಗಿ ಆಡುತ್ತಿತ್ತು. ಅವಳ ತುಟಿಯ ಮೇಲಿನ ನ
ಯಾವನೋ ಶಿಲ್ಪಿ ಆ ಕ್ಷಣಿಕ ಮುಗುಳ್ನಗೆಯನ್ನು ಅಮರವಾಗಿ ಕಡೆದ
-ಇನ್ನೂ ನೆಲಸಿತ್ತು.

ಮುಂದೇನಾಯಿತೆಂಬುದು ನನಗೆ ಸ್ಪಷ್ಟವಾಗಿ ಅರಿವಿಲ್ಲ. ನಾ
ನಿಂತಿದ್ದ ಸ್ಥಳದಿಂದ ಚಂಗನೆ ಅವಳೆಡೆಗೆ ಹಾರಿದೆ. ಅಷ್ಟರಲ್ಲಿ ಏನ
ಬಲಗೆನ್ನೆಗೆ ಬಲವಾಗಿ ತಾಕಿತು. ಕಣ್ಣು ಕತ್ತಲಿಟ್ಟಿತು, ಅಷ್ಟೇ ನೆನಪು.

ಮತ್ತೆ ನನಗೆ ಎಚ್ಚರವಾದದ್ದು ಆಸ್ಪತ್ರೆಯಲ್ಲಿ. ಅರುಣಳ ಸಮಾಚ
ಅಲ್ಲಿ ನನಗೆ ಯಾರು ಹೇಳಬೇಕು? ಮೂರು ದಿವಸ ಆಸ್ಪತ್ರೆ, ಆ ಮೇ
ಕೋರ್ಟಿನಲ್ಲಿ ವಿಚಾರಣೆ. ಮ್ಯಾಜಿಸ್ಟ್ರೇಟರು ಎಚ್ಚರಿಕೆ ಕೊಟ್ಟು ಬಿಟ್ಟುಬಿಟ್ಟರ

ಹೊರಗೆ ಬರುತ್ತಲೇ ನನ್ನ ಮೊದಲನೆಯ ಕೆಲಸ ಶಾಮಣ್ಣನ ರೂಮಿ
ಹೋದದ್ದು. ಅರುಣಳನ್ನು ಕರೆದುಕೊಂಡು ಹೊರಟ ದಿನ ಹಾಕಿದ್ದ ಬೀ
ಹಾಗೆಯೇ ಇತ್ತು. ಅದರ ಮೇಲೆ ಕಾಲಂಗುಲ ಧೂಳು ಕುಳಿತಿತ್ತು.

ಮನೆಗೆ ಬಂದೆ. ಶಾಮಣ್ಣನ ಕಾಗದ ನನಗಾಗಿ ಕಾದುಕುಳಿತಿತ್ತು
ಮರುದಿನ ಬರುವೆನೆಂದು ಬರೆದಿದ್ದ; ಅವರಣ್ಣನಿಗೆ ವಾಸಿಯಾಯಿತೆಂ
'ಅರುಣ ಹೇಗಿದ್ದಾಳೆ? ನಾನು ಬರುವೆನೆಂದು ಅವಳಿಗೆ ತಿಳಿಸಬೇಡಿ. ತಟ್ಟ
ಬಂದು ಅವಳನ್ನು ಆಶ್ಚರ್ಯಗೊಳಿಸಬೇಕು' ಎಂದು ಬರೆದಿದ್ದ.

ಆವತ್ತು ಹುಚ್ಚನಂತೆ ಊರೆಲ್ಲ ಅಲೆದೆ. ಯಾರಾರಿಗೋ ಕೈಮುಗಿದ
ಕೊನೆಗೆ ತಿಳಿಯಿತು, ಆಸ್ಪತ್ರೆಗೆ ಹೋದ ಸ್ವಲ್ಪ ಹೊತ್ತಿನಲ್ಲಿ
ಅರುಣ ಕಣ್ಮುಚ್ಚಿದಳು, ವಾರಸುದಾರರಿಲ್ಲದ ಹೆಣವೆಂದು ಸರ್ಕಾರವೇ ಅ
ಳನ್ನು ಸುಟ್ಟಿತು ಎಂದು.

ಮರುದಿನ ಶಾಮಣ್ಣ ಬರಲಿಲ್ಲ. ದಾರಿಯಲ್ಲಿ ಟಿಕೇಟು ಇಲ್ಲ
ಪ್ರಯಾಣ ಮಾಡುತ್ತಿದ್ದ ಹುಡುಗರ ಮೇಲೆ ಒಂದು ಸ್ಟೇಶನಿನಲ್ಲಿ ಲಾ
ಚಾರ್ಜು ನಡೆಯಿತೆಂದೂ, ಹುಡುಗರನ್ನು ರಕ್ಷಿಸಲು ಹೋದ ಶಾಮಣ

ಬಂಧಿತನಾದನೆಂದೂ ಆ ಮೇಲೆ ಯಾರ ಮೂಲಕವೋ ಸಮಾಚಾರ ಕಳುಹಿಸಿದ. 'ಅರುಣ ಅವಳ ಊರಿಗೆ ಹೋಗುವಂತಿದ್ದರೆ ಕಳಿಸಿಕೊಡಿ, ಇಲ್ಲದಿದ್ದರೆ ಹಾಸನಕ್ಕೆ ನಮ್ಮಣ್ಣನ ಮನೆಗೆ ಕಳುಹಿಸಿ' ಎಂದು ಹೇಳಿ ಕಳುಹಿಸಿದ್ದ.

ಅವನಿದ್ದ ಮನೆಗೆ ಹೋಗಿ, ಮನೆಯವರಿಗೆ ಸಮಾಚಾರ ತಿಳಿಸಿ, ಬಾಕಿಯಿದ್ದ ಬಾಡಿಗೆ ಕೊಟ್ಟೆ. ಕೊಠಡಿಯ ಬೀಗ ಒಡೆಯಬೇಕಾಯಿತು. ಅವನ ಸಾಮಾನುಗಳನ್ನೆಲ್ಲ ಹಾಸನಕ್ಕೆ ಕಳುಹಿಸಿದೆ, ಒಂದು ಡ್ರಾಯರಿನಲ್ಲಿ ಅರುಣಳ ಛಾಯಚಿತ್ರ ಇತ್ತು, ಅದನ್ನು ಮಾತ್ರ ನಾನೇ ಇಟ್ಟುಕೊಂಡೆ, ಅದಕ್ಕೇ ಕಟ್ಟು ಹಾಕಿಸಿ ನನ್ನ ಕೊಠಡಿಯಲ್ಲಿ ಹಾಕಿದ್ದೇನೆ.

ಮತ್ತೆ ನಾನು ಶಾಮಣ್ಣನನ್ನು ನೋಡಲಿಲ್ಲ. ಅವನು ಜೈಲಿನಿಂದ ಬರುವ ಹೊತ್ತಿಗೆ ನಮ್ಮ ತಂದೆಗೆ ವರ್ಗವಾದದ್ದರಿಂದ ನಾನು ಊರು ಬಿಟ್ಟೆ. ನನ್ನ ವಿದ್ಯಾಭ್ಯಾಸ ಅಲ್ಲಿಗೇ ಕೊನೆಯಾಯಿತೆಂದು ನಿಮಗೆ ಗೊತ್ತಿದೆ.

ಇಂದಿಗೂ ನನ್ನ ಮನಸ್ಸು ಆಗಾಗ, ಶಾಮಣ್ಣ ಬಂದು 'ನನ್ನ ಅರುಣ ಎಲ್ಲಿ ಸಾರ್? ಎಂದು ಕೇಳಿದರೆ ಏನು ಹೇಳಲಿ?' ಎಂದು ಕುದಿಯುತ್ತದೆ. "ನನಗೂ ಆ ಹುಡುಗಿಗೂ ಎಲ್ಲಿಯ ಸಂಬಂಧ? ಯಾವುದೋ ಹಳ್ಳಿಯಲ್ಲಿ ಹುಟ್ಟಿ, ತಂದೆತಾಯಿಯನ್ನು ಕಳೆದುಕೊಂಡು, ಇರಲು ನೆಲೆಯಿಲ್ಲದೆ ಪ್ರಿಯ ನನ್ನು ಸೇರಲು ಪಟ್ಟಣಕ್ಕೆ ಬಂದಳು ಆ ಹುಡುಗಿ. ಅವಳನ್ನು ಎರಡು ದಿನ ಸರಿಯಾಗಿ ನೋಡಿಕೊಳ್ಳುವ ಯೋಗ್ಯತೆಯಿಲ್ಲದೆ ಆಹುತಿ ಕೊಟ್ಟೆ ನಾನು. ಇವತ್ತು ಸೆಪ್ಟಂಬರ್ ೧೦ ಅಲ್ಲವೇ? ಇವತ್ತಿಗೆ ಅರುಣ ನಮ್ಮನ್ನು ಬಿಟ್ಟು ನಾಲ್ಕು ವರ್ಷವಾಯಿತು."

ಮೂರ್ತಿ ಸುಮ್ಮನಾದ. ಶ್ರೀಧರ ತಲೆ ತಗ್ಗಿಸಿದ. ನಾವು ಮೌನದಲ್ಲಿ ಮುಂದೆ ಸಾಗಿದೆವು. ನಮ್ಮ ಸುತ್ತಾಟವೆಲ್ಲ ಮುಗಿದು ಆಗಲೇ ಒಬ್ಬರನ್ನೊಬ್ಬರು ಮೌನದಲ್ಲೇ ಬೀಳ್ಕೊಟ್ಟೆವು.

ಕೊನೆಗೆ ಉಳಿದವರು ನಾನು, ಮೂರ್ತಿ. ನಾನು ಕೇಳಿದೆ—"ಏನೋ ಮೂರ್ತಿ, ಇಷ್ಟು ದಿನವೂ ಈ ವಿಷಯ ನೀನು ಹೇಳಲೇ ಇಲ್ಲ?"

ಮೂರ್ತಿ ಉತ್ತರವಿತ್ತ—"ನೋಡು ನಾಗರಾಜ್. ಇವತ್ತೂ ನಾನು ಈ ಕತೆ ಹೇಳಬಾರದಾಗಿತ್ತು. ಆ ಶ್ರೀಧರನ ಮಾತಿಗೆ ರೇಗಿ ಹೇಳಿಬಿಟ್ಟೆ.

ನಮ್ಮ ಜೀವಮಾನದಲ್ಲಿ ಕೆಲವು ಘಟನೆಗಳು ನಡೆಯುತ್ತವೆ, ಅವುಗಳ ನೆನ
ನಮ್ಮ ಹೃದಯಮಂದಿರದಲ್ಲಿ ಹಾಕಿ ಬೀಗಹಾಕಿರಬೇಕು. ಮಾ
ನಿರೂಪಣೆಗೆ ಮೀರಿದ ಪಾವಿತ್ರ್ಯ, ಸೌಂದರ್ಯ ಅವುಗಳದು. ಅ
ಘಟನೆಗಳಲ್ಲಿ ಇದೂ ಒಂದು."

ಮತ್ತೆ ಮೌನ ನಮ್ಮನ್ನು ಆವರಿಸಿತು.

Printed by the Mangalore Press, Mangalore, S I.

ನಮ್ಮ ಇತರ ಪ್ರಕಟನೆಗಳು

೧. ಗಾಜಿನ ಬಳೆ ಮತ್ತು ಇತರ ಕತೆಗಳು

ಬೇರೆ ಬೇರೆ ವಾತಾವರಣಗಳಲ್ಲಿ ದಿನನಿತ್ಯದ ಜೀವನವನ್ನು ರೂಪಿಸುವ ಐದು ಕತೆಗಳ ಸಂಗ್ರಹ.

ಲೇಖಕರು:—ಶ್ರೀ. ಕಡೆಂಗೋಡ್ಲು ಶಂಕರಭಟ್ಟರು. ಬೆಲೆ 1—6—0.

೨. ಪಳಮೆಗಳು

ಯಾವುದೋ ಹೇಳಿಕೆಗಳನ್ನು ಹಿಡಿದು ಬರೆದ, ಕೆಲವು ವಿಶ್ವಾಸಗಳನ್ನು ಅವಲಂಬಿಸಿ ಬೆಳೆದ ಹಿಂದಿನ ಜೀವನವನ್ನು ಚಿತ್ರಿಸುವ ನಾಲ್ಕು ಕತೆಗಳು.

ಲೇಖಕರು:— ಶ್ರೀ. ಸೇಡಿಯಾಪು ಕೃಷ್ಣಭಟ್ಟರು. ಬೆಲೆ 0—14—0.

೩. ಪ್ರತಿಜ್ಞೆ

ಸುಪ್ರಸಿದ್ಧ ಹಿಂದೀಕಾದಂಬರೀಕಾರರಾದ ದಿವಂಗತ ಪ್ರೇಮಚಂದರ "ಪ್ರತಿಜ್ಞಾ" ಎಂಬ ಸಾಮಾಜಿಕ ಕಾದಂಬರಿಯ ಸಂಗ್ರಹಾನುವಾದ.

ಲೇಖಕರು:—ಶ್ರೀ. ರಾಯಲಿಂಗಯ್ಯನವರು. ಬೆಲೆ 1—6—0.

೪. ದೇಹಜ್ಯೋತಿಗಳು ಮತ್ತು ಪ್ರಾಣಿಪ್ರಬಂಧಗಳು

ಮುಂದಾಳುಗಳಾಗಿ ಮೆರೆಯುವ ಲವಲವಿಕೆಯಿಂದ ಹೆಣಗಾಡುವ ವಿವಿಧ ರೀತಿಯ ನಾಗರಿಕ ಜನಗಳ ಚಿತ್ರ ಸಂಗ್ರಹ— ದೇಹಜ್ಯೋತಿಗಳು.
ನಮ್ಮ ನಿತ್ಯದ ಕಣ್ಣನ್ನು ಬದಲಿಸಿ ನೋಡಿದಾಗ ಕಾಣಬಹುದಾದ ನೋಟ ಪ್ರಾಣಿಪ್ರಬಂಧಗಳು.

ಲೇಖಕರು:—ಶ್ರೀ. ಶಿವರಾಮ ಕಾರಂತರು. ಬೆಲೆ 1—2—0.

೫. ವೀರ ಬಂಕೆಯ

ಕಿಂವದಂತಿಯಾಗಿ ಬಂದ ಕೆಲಕತೆಗಳ ಆಧಾರದಿಂದಲೂ ಶಾಸನಾಧಾರದಿಂದಲೂ ಬರೆದ, ಸಾವಿರದನೂರು ವರ್ಷಗಳಿಗೆ ಹಿಂದಿನ ವೀರ ಪುರುಷನೊಬ್ಬನ ಚರಿತ್ರೆ.

ಲೇಖಕರು:—ಶ್ರೀ. ಮುಳಿಯ ತಿಮ್ಮಪ್ಪಯ್ಯನವರು. ಬೆಲೆ 1—8—0.

* ೬. ಶಾಕುಂತಲ ನಾಟಕ ವಿಮರ್ಶೆ

ಕವಿರತ್ನ ಕಾಳಿದಾಸನ ಶಾಕುಂತಲ ನಾಟಕದ ಸುದೀರ್ಘ ವಿಮರ್ಶೆ

ಲೇಖಕರು:—ದಿವಂಗತ ಶ್ರೀ. ಬಿ. ಕೃಷ್ಣಪ್ಪ, ಎಂ. ಎ. ಬೆಲೆ 1—

* ೭. ವಾಙ್ಮಯ ತಪಸ್ಸು.

ಮಾತು ಮತ್ತು ಆಚರಣೆಯ ವಿಚಾರ ವಿವರಿಸಿದ ಪ್ರೌಢ ಪ್ರಬಂಧ

ಲೇಖಕರು:—ಶ್ರೀ. 'ಉಮೇಶ' ಬೆಲೆ 0—

* ೮. ಘಾಸರನ ಕತೆಗಳು

ಸುಪ್ರಸಿದ್ಧ ಆಂಗ್ಲಕವಿ ಜೋಫರ್ ಘಾಸರನ ಕೆಲವು ಉತ್ತಮ ಅನುವಾದ.

ಲೇಖಕರು:—ಶ್ರೀ. ಬಿ. ಶಂಕರಭಟ್ಟರು ಮತ್ತು ಶ್ರೀ. ಬಿ. ಎಂ. ಶ

ಬೆಲೆ 1—

* ೯. ಹರಿಶ್ಚಂದ್ರ

ರಾಘವಾಂಕ ಪಂಡಿತನ ಹರಿಶ್ಚಂದ್ರ ಕಾವ್ಯ ಕಥೆ. ಬೆಲೆ 0—1

* ಈ ಗುರುತಿನ ಪುಸ್ತಕಗಳು ಮಾಲಿಕೆಯ ಬಿಡಿಹೂಗಳು. ಇವುಗಳನ್ನು ಚಂದಾದಾರರಿಗೆ ಅರ್ಧ ಬೆಲೆಗೆ ಕೊಡಲಾಗುವುದು. ವೆಚ್ಚ ಪ್ರತ್ಯೇಕ)

ವಸಂತ ಮಾಲಿಕೆ — ಮಂಗಳೂ

ವರ್ಷ ಒಂದರ 300 ಪುಟಗಳಷ್ಟು

ಲಲಿತ ಸಾಹಿತ್ಯ

ಎರಡು ಅಥವಾ ಮೂರು ಪುಸ್ತಕಗಳಲ್ಲಿ

x x x x

ಚಂದಾ ಹಣ

ಮೂರು ರೂಪಾಯಿಗಳು ಮಾತ್ರ

ಅಂಚೆವೆಚ್ಚ ಸಹಿತ

x x x x

ಮಾಲಿಕೆಯ ಚಂದಾದಾರರಿಗೆ

ಕೇವಲ ಅರ್ಧ ಬೆಲೆಗೆ

ಬಿಡಿಹೂಗಳು ದೊರೆಯುವುವು

ವಸಂತ ಮಾಲಿಕೆ — ಮಂಗಳೂ